ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ನವೆಂಬರ್ 2019. ಬೆಲೆ ರೂ. 5/-

ತಿರುಚಾನೂರು
ಶ್ರೀ ಪದ್ಮಾವತೀ ಅಮ್ಮನವರ
ವಾರ್ಷಿಕ ಬ್ರಹ್ಮೋತ್ಸವ
23-11-2019 ರಿಂದ
01-12-2019 ರ ವರೆಗೆ



ಪಾಲ್ಗಡಕನ್ನಿಕೆ ನೀ ಪದ್ಮಾಸನೆಯೇ
ಪಾಲನುಣಿಸುವ ಶ್ರೀ ವೆಂಕಟಾಪತಿಸತಿನೀ
- ಅನ್ನಮಯ್ಯ


# ತಿರುಮಲೆ ತಿರುಪತಿ ದೇವಸ್ಥಾನಗಳು
# ಧರ್ಮಕರ್ತರ ಮಂಡಲಿ




ತಿರುಮಲೆ ತಿರುಪತಿ ದೇವಸ್ಥಾನಗಳ ಮೂಲ ನೂತನ ಧರ್ಮಕರ್ತರ ಮಂಡಳಿಯನ್ನು
ಆಂಧ್ರಪ್ರದೇಶ ರಾಷ್ಟ್ರಪ್ರಭುತ್ವ ಅಧ್ಯಕ್ಷರು, ಸದಸ್ಯರು,ಎಕ್ಸ್-ಅಫಿಷಿಯಾ ಸದಸ್ಯರು,
ಪ್ರತ್ಯೇಕ ಆಹ್ವಾನಿತರನ್ನು ನಿಯಮಿಸಿದರು.
ತಿರುಮಲೆ ಸ್ವಾಮಿಯ ಆಲಯದಲ್ಲಿ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ,
ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ, ಉನ್ನತಾಧಿಕಾರಿಗಳು
ಪ್ರಮಾಣಸ್ವೀಕಾರವನ್ನು ಮಾಡಿಸಿ ಸ್ವಾಮಿಯವರ ತೀರ್ಥ ಪ್ರಸಾದವನ್ನು ನೀಡಿದರು.
ವೇದಪಂಡಿತರು ಆಶೀರ್ವಚನವನ್ನು ನೀಡಿದರು.




ಶ್ರೀ ವೈ.ವಿ. ಸುಬ್ಬಾರೆಡ್ಡಿ
ಧರ್ಮಕರ್ತ ಮಂಡಲಿಯ ಅಧ್ಯಕ್ಷರು



ಶ್ರೀ ಯು.ವಿ. ರಮಣಮೂರ್ತಿ ರಾಜು
ಸದಸ್ಯರು



ಶ್ರೀ ಎಂ. ವೆಂಕಟಮಲ್ಲಿಕಾರ್ಜುನ ರೆಡ್ಡಿ
ಸದಸ್ಯರು



ಶ್ರೀ ಕೆ. ಪಾರ್ಥಸಾರಥಿ
ಸದಸ್ಯರು




ಶ್ರೀ ಪಿ. ಮುರಳಿ ಕೃಷ್ಣ
ಸದಸ್ಯರು



ಶ್ರೀ ಕೃಷ್ಣಮೂರ್ತಿ ವೈಧ್ಯನಾಥನ್
ಸದಸ್ಯರು



ಶ್ರೀ ನಾರಾಯಣಸ್ವಾಮಿ ಶ್ರೀನಿವಾಸನ್
ಸದಸ್ಯರು



ಶ್ರೀ ಜೆ. ರಾಮೇಶ್ವರ ರಾವ್
ಸದಸ್ಯರು



ಶ್ರೀಮತಿ ವಿ. ಪ್ರಶಾಂತಿ
ಸದಸ್ಯರು



ಡಾ|| ಬಿ. ಪಾರ್ಥಸಾರಥಿ ರೆಡ್ಡಿ
ಸದಸ್ಯರು



ಡಾ|| ನಿಚಿತ ಮುಪ್ಪವರಪು
ಸದಸ್ಯರು




ಶ್ರೀ ಕೆ. ನಾದೆಳ್ಳ ಸುಬ್ಬಾರಾವ್
ಸದಸ್ಯರು




ಶ್ರೀ ಡಿ.ಪಿ. ಅನಂತ
ಸದಸ್ಯರು



ಶ್ರೀ ರಾಜೇಷ್ ಶರ್ಮ
ಸದಸ್ಯರು



ಶ್ರೀ ರಮೇಶ್ ಶೆಟ್ಟಿ
ಸದಸ್ಯರು



ಶ್ರೀ ಜೆ.ವಿ. ಭಾಸ್ಕರರಾವ್
ಸದಸ್ಯರು



ಶ್ರೀ ಮೋರಮ್‌ಶೆಟ್ಟಿ ರಾಮುಲು
ಸದಸ್ಯರು



ಶ್ರೀ ಡಿ. ದಾಮೋದರ್ ರಾವ್
ಸದಸ್ಯರು



ಉಳಿದ ಧರ್ಮಕರ್ತ ಮಂಡಳಿಯ ಸದಸ್ಯರ ವಿವರಗಳು 55 ನೇ ಪುಟದಲ್ಲಿ ನೋಡಿರಿ



## ಭಗವದ್ಗೀತೆ

ಅತ್ರ ಶೂರಾ ಮಹೇಷ್ವಾಸಾಃ ಭೀಮಾರ್ಜುನಸಮಾ ಯುಧಿ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 4)

ಈ ದಂಡಿನಲ್ಲಿ ಹೋರಾಟದಲ್ಲಿ ಭೀಮಾರ್ಜುನರಿಗೆ ಸರಿಜೋಡಿಯಾದ ಶೂರರಾಗಿ ದೊಡ್ಡ ದೊಡ್ಡ ಬಿಲ್ಲುಗಳನ್ನು ಹಿಡಿದುಕೊಂಡು ಕಾಡುವುದರಲ್ಲಿ ಕುಶಲರಾದ ಸಾತ್ಯಕಿ ವಿರಾಟರಿದ್ದಾರೆ. ಹತ್ತು ಸಹಸ್ರ ಜನರೊಡನೆ ಏಕಾಕಿಯಾಗಿ ಹೋರಾಡ ಬಲ್ಲ ದ್ರುಪದನಿದ್ದಾನೆ.

ಶರಣೆಂಬೆ ವಾಣೀ ಪೊರೆಯೇ ಕಲ್ಯಾಣೀ
ವಾಗಭಿಮಾನೀ ವರಬ್ರಹ್ಮಾಣೀ
ಸುಂದರ ವೇಣೀ ಸುಚರಿತ್ರಾಣೀ॥
ಜಗದೊಳು ನಿಮ್ಮ ಪೊಗಳುವೆನಮ್ಮ।
ಹರಿಯ ತೋರಿಸೆಂದು
ಪ್ರಾರ್ಥಿಸುವೆನಮ್ಮ॥
ಪಾಡುವೆ ಶ್ರುತಿಯಂ ಬೇಡುವೆ ಸನ್ಮತಿಯ।
ಪುರಂದರ ವಿಠಲನ ಪ್ರೀತಿಯ ಸೊಸೆಯೆ॥

- ಪುರಂದರದಾಸರು





# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ವೃಷಗಿರಿಸವಿಧೇಷು ವ್ಯಾಜತೋ ವಾಸಭಾಜಾಂ ದುರಿತಕಲುಷಿತಾನಾಂ ದೂಯಮಾನಾ ದಯೇ ತ್ವಂ।
ಕರಣವಿಲಯಕಾಲೇ ಕಾಂದಿಶೀಕಸ್ಮೃತೀನಾಂ ಸ್ಮರಯಸಿ ಬಹುಲೀಲಂ ಮಾಧವಂ ಸಾವಧಾನಾ ॥ ೩೭॥

ಹಿಂದಿನ ಪದ್ಯದಲ್ಲಿ ಪ್ರತಿಕೂಲರ ವಿಷಯದಲ್ಲಿಯೂ ಕೂಡ ದಯಾದೇವಿಯು ಹಿತವನ್ನೇ ಚಿಂತಿಸುವಳೆಂದು ಸಾಮಾನ್ಯವಾಗಿ ಹೇಳಿದ ವಿಷಯವನ್ನೇ ಈ ಪದ್ಯದಿಂದ ಆರಂಭಿಸಿ, ಈ ದಶಕವು ಮುಗಿಯುವವರೆಗೂ ಅವಳು ಮಾಡುವ ಕೆಲವು ಹಿತಗಳನ್ನು ವರ್ಣಿಸುತ್ತಾರೆ. ಈ ಶ್ಲೋಕದಲ್ಲಿ ಈ ದಶಕದಲ್ಲಿ ಹೇಳಲ್ಪಡುವ ಅರ್ಥಗಳಲ್ಲಿ ಒಂದಾದ ದಿವ್ಯದೇಶವಾದ ತಿರುಮಲೆಯ ಪ್ರಭಾವವೂ ಅದಕ್ಕೆ ಸಮೀಪದಲ್ಲಿ ವಾಸಮಾಡುವವರ ಹಿರಿಮೆಯೂ ಪ್ರಕಾಶಿತವಾಗುತ್ತದೆ.

ತಿರುಮಲೆಯ ಸಮೀಪ ಪ್ರದೇಶದಲ್ಲಿಯೇ ಆಗಲಿ ಕೇವಲ ಜೀವನ ನಿರ್ವಹಣವೇ ಮೊದಲಾದ ಯಾವುದೋ ಒಂದು ಪ್ರಯೋಜನವನ್ನು ಉದ್ದೇಶಿಸಿ ವಾಸಮಾಡುವ ಮಹಾಪಾಪಿಗಳ ವಿಷಯದಲ್ಲಿಯೂ ಕೂಡ, ಅವರ ಸರ್ವೇಂದ್ರಿಯಗಳೂ ಲಯವನ್ನು ಹೊಂದಿ, ಸ್ಮೃತಿಯು ನಾಶವಾಗಿ, ಉಸಿರು ಹೋಗುವ ಕಾಲದಲ್ಲಿ ದಯಾದೇವಿಯು ಅತ್ಯಂತ ಜಾಗರೂಕಳಾಗಿದ್ದುಕೊಂಡು, ಜಗದ್ವ್ಯಾಪಾರವೇ ಮೊದಲಾದ ಲೀಲೆಗಳಲ್ಲಿ ಆಸಕ್ತನಾಗಿರುವ ಶ್ರೀಯಃ ಪತಿಯಾದ ಶ್ರೀನಿವಾಸನನ್ನು ಸ್ಮರಿಸುವಂತೆ ಮಾಡುವಳು ಆದರಿಂದಲೇ ದಿವ್ಯದೇಶದ ವಾಸದ ಮಹಿಮೆಯೂ, ದಯಾದೇವಿಯ ಜಾಗರೂಕತೆಯೂ ಅದ್ಭುತವಾದುದು.

"ದುಷ್ಟೇಂದ್ರಿಯವಶಾ ಚ್ಚಿತ್ತಂ ನೃಣಾಂ ಯತ್ಕಲ್ಮಷೈರ್ವೃತಂ।
ತದಂತಕಾಲೇ ಸಂಶುದ್ಧಿಂ ಯಾತಿ ನಾರಾಯಣಾಲಯೇ॥"

ಎಂಬಂತೆ, ಬದುಕಿರುವವರೆಗೂ ಇಂದ್ರಿಯಪರಾಧೀನರಾಗಿದ್ದುಕೊಂಡು ಪಾಪವನ್ನೇ ಮಾಡಿದವರಿಗೂ ಕೂಡ ದಿವ್ಯ ದೇಶವಾಸವುಂಟಾದುದೇ ಆದರೆ, ಅವರ ಪ್ರಾಣವಿಯೋಗ ಕಾಲದಲ್ಲಿ ಪರಮ ದಯಾಳುವಾದ ಸರ್ವೇಶ್ವರನ ಸಂಕಲ್ಪದಿಂದ ಚಿತ್ತವು ಶುದ್ಧಿಯನ್ನು ಹೊಂದಿ ಅಂತಿಮಸ್ಮೃತಿಯೆಂಬ ಭಗವಂತನ ಸ್ಮೃತಿಯುಂಟಾಗುವುದು - ಎಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 50 ಸಂಚಿಕೆ - 6

ಶ್ರೀ ವಿಕಾರಿನಾಮ ಸಂವತ್ಸರ
ಕಾರ್ತಿಕ -ಮಾರ್ಗಶಿರ ಮಾಸ
ಸಂಚಿಕೆ

ನವೆಂಬರ್ 2019




## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಶ್ರೀ ತುಳಸಿ ಮಹಿಮೆ ಮತ್ತು ಕಲ್ಯಾಣ (ಉತ್ಥಾನ ದ್ವಾದಶಿ) | 7 |
| - ಎಸ್. ವೆಂಕಟರಾಘವನ್ | |
| ಭಕ್ತಿ ಪಂಥದ ದಾಸಶ್ರೇಷ್ಠ - ಸಂತ ಕನಕದಾಸರು | 12 |
| - ಶ್ರೀಮತಿ. ಸುಮಾಚಂದ್ರಶೇಖರ್ | |
| ಚರಿತ್ರೆಯಲ್ಲಿ ತಿರುಚಾನೂರು ಕ್ಷೇತ್ರ | 17 |
| - ಸೂರ್ಯವಂಶಿ | |
| ಪ್ರಿಯವ್ರತ ಮಹಾರಾಜ | 19 |
| - ಡಿ.ಎಸ್. ಬದ್ರಿನಾಥ್ | |
| ಯಾಜ್ಞವಲ್ಕ್ಯ ಜಯಂತಿ ತದಂಗವಾಗಿ | 21 |
| - ಶ್ರೀಮತಿ. ಕೆ.ವಿ. ಪದ್ಮಾವತಿ | |
| "ಅಸ್ಮಾದಾಚಾರ್ಯ ಪರ್ಯಂತಂ ವಂದೇ ಗುರುಪರಂಪರಾಂ" | 23 |
| - ಡಾ ॥ ಎನ್.ಕೆ. ರಾಮಶೇಷನ್ | |
| ಹಸಿರುತೋರಣ | |
| ಶ್ರೀ ಪದ್ಮಾವತಿ ದೇವಿ ಬ್ರಹ್ಮೋತ್ಸವ | 31 |
| - ಕೆ. ನರಸಿಂಹಮೂರ್ತಿ | |
| ಸಿದ್ಧಸಾಧನ - ಬಿಂಬಕಾಂಬುದಕೆ | 38 |
| -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | |
| ವಿವಾಹ ಮತ್ತು ಮಹತ್ವ | 44 |
| -ಜಿ.ಆರ್. ಶ್ರೀಕಂಠಯ್ಯ | |
| ಆಹಾರ ಆರೋಗ್ಯದಾಯಕ | 47 |
| - ಶ್ರೀಮತಿ | |
| ಮನೋನಿಗ್ರಹಕ್ಕೊಂದು ಮಾರ್ಗ | 49 |
| - ಡಿ.ಎಸ್.ಭೂಮಿಕ | |
| ದಿವ್ಯಕ್ಷೇತ್ರ ತಿರುಮಲೆ | 50 |
| - ಶ್ರೀಮತಿ ಜಿ. ಪದ್ಮಜ | |


ಮುಖಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು
ಹಿಂಬದಿಚಿತ್ರ - ಪಂಚಮಿತೀರ್ಥ, ತಿರುಚಾನೂರು


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಐ.ಎ.ಐ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**
ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.



ಸಪ್ತಗಿರಿಯಲ್ಲಿ ಪ್ರಕಟವಾಗುವ
ಲೇಖನಗಳಲ್ಲಿನ ಅಭಿಪ್ರಾಯಗಳು
ಸಂಪಾದಕವರ್ಗದ, ಪತ್ರಿಕೆಯ,
ಅಭಿಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ



ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

**ಸಂಪಾದಕೀಯ**

# ಅಲಮೇಲು ಮಂಗಮ್ಮ ಅವತರಿಸಿದ ಆನಂದಮಯ ವೇಳೆಯಲ್ಲಿ ...!!



ಅಂದವಾದ ಭೂಲೋಕದಲ್ಲಿ ಅಲಮೇಲು ಮಂಗಮ್ಮ ಅವತರಿಸಿದ ಕಥೆ ಅದ್ಭುತವಾಗಿದೆ! ಸಹಸ್ರದಳಗಳುಳ್ಳ ಬಂಗಾರದ ಪದ್ಮದಲ್ಲಿ ಆ ಅಮ್ಮನವರು "ಪದ್ಮಾವತಿದೇವಿ"ಯಾದ ಆವಿರ್ಭವಿಸಿದ ಘಟನೆ ಆಶ್ಚರ್ಯಕರವಾಗಿದೆ. ಅಂತಹ ಆನಂದಮಯ ಸಮಯದ ಕುರಿತು ತಿಳಿದು ಕೊಳ್ಳಬೇಕೆಂದರೆ ಮೊದಲು ಶ್ರೀ ವೇಂಕಟೇಶ್ವರ ಸ್ವಾಮಿಯು "ಶ್ರೀನಿವಾಸ"ನಾದ ಬಗೆಯನ್ನು ತಿಳಿದರೆ ಸಾಕು. ಆಗ ಅಲಮೇಲುಮಂಗ ಅವತರಿಸಿದ ಅದ್ಭುತವಾದ ಕಥೆ ತಿಳಿಯುತ್ತದೆ. ಲೋಕಕಲ್ಯಾಣಕ್ಕಾಗಿ ಆ ದಂಪತಿಗಳಿಬ್ಬರೂ ಭೂಲೋಕಕ್ಕೆ ಮರಳಿದ ದಿವ್ಯ ವೃತ್ತಾಂತವನ್ನು ತಿಳಿಯಬಹುದು.

ಕಲೌ ವೇಂಕಟನಾಯಕಃ ! ಎನ್ನುವ ಬಿರುದಿನಿಂದ ಭೂಲೋಕ ವೈಕುಂಠವಾದ ತಿರುಮಲಕ್ಕೆ ಬಂದ ವೇಂಕಟೇಶ್ವರನು "ಶ್ರೀ ಮಹಾಲಕ್ಷ್ಮಿ" ಇಲ್ಲದೇ ತಾನೊಬ್ಬನೇ ಭಕ್ತರ ಕೋರಿಕೆಗಳನ್ನು ಸಂಪೂರ್ಣವಾಗಿ ತೀರಿಸಲು ಸಾಧ್ಯವಿಲ್ಲ ಎಂದು ಭಾವಿಸುತ್ತಾನೆ. ಕೊಲ್ಹಾಪುರ ಕ್ಷೇತ್ರದಲ್ಲಿರುವ ಮಹಾಲಕ್ಷ್ಮಿಯ ಹತ್ತಿರ ಹೋದನು. ಅಲ್ಲಿ 10 ವರ್ಷಗಳ ಕಾಲ ಆ ತಾಯಿಯ ದಯೆಗಾಗಿ, ದರ್ಶನಕ್ಕಾಗಿ ತಿರುಮಲೇಶನು ಪರಿತಪಿಸಿದನು. ಅಷ್ಟರಲ್ಲೇ ಅಶರೀರವಾಣಿ ಆದೇಶದ ಮೇರೆಗೆ ಸುವರ್ಣ ಮುಖರೀ ನದಿ ತೀರಕ್ಕೆ ಬಂದು ಪದ್ಮ ಸರೋವರವನ್ನು ಪ್ರತಿಷ್ಠಾಪಿಸಿದನು. ಅಲ್ಲಿ 12 ವರ್ಷಗಳ ಕಾಲ ಮಹಾಲಕ್ಷ್ಮಿಯ ದಯೆಗಾಗಿ ತಪಸ್ಸು ಮಾಡಿದನು.

ಒಮ್ಮೆ ಕಾರ್ತೀಕ ಮಾಸದ (ಸೌರಮಾನದ ಪ್ರಕಾರ) ಶುದ್ಧ ಪಂಚಮಿ ಶುಕ್ರವಾರದಂದು ಅಭಿಜಿತ್ ಲಗ್ನದಲ್ಲಿ ಶ್ರೀ ಮಹಾಲಕ್ಷ್ಮಿಯು ಪದ್ಮ ಸರೋವರದ ದಿವ್ಯ ಜಲದಲ್ಲಿ ಅಂದ ಚಂದಗಳಿಂದ ವಿರಾಜಿಸಿದ ಸಹಸ್ರದಳದ ಬಂಗಾರಪದ್ಮದಲ್ಲಿ ಅವತರಿಸಿದಳು. ಅಗಾಧ ತೇಜಸ್ಸುಳ್ಳ ತುಂಬಾ ಆನಂದದಿಂದ ಸರ್ವಾಲಂಕಾರ ಭೂಷಿತಳಾಗಿ ಬಂಗಾರದ ಪದ್ಮದಲ್ಲಿ ಆವಿರ್ಭವಿಸಿದ ಶ್ರೀ ಮಹಾಲಕ್ಷ್ಮೀಯನ್ನು ಬ್ರಹ್ಮಾದಿದೇವರುಗಳು "ಪದ್ಮಾವತಿದೇವಿ" ಎಂದು ಕರೆದರು. ಪದ್ಮದ ಮೇಲೆ ಪ್ರಕಾಶಿಸುತ್ತಿದ್ದ ಆ ದಿವ್ಯ ಕಾಂತಿಯನ್ನು ಕೆಲವರು "ಅಲರ್‌ಮೇಲ್‌ಮಂಗ" ಎಂದು ಸುತ್ತಿಸಿದರು.ತಕ್ಷಣವೇ ಜಗತ್‌ಕಲ್ಯಾಣಕ್ಕಾಗಿ ಪರಿತಪಿಸುತ್ತಿದ್ದ ತಿರುಮಲೇಶನ ಹತ್ತಿರ ಅಲಮೇಲುಮಂಗಮ್ಮ ಬಂದಳು! ತನ್ನಲ್ಲಿದ ಕಮಲದ ಹೂವಿನ ಹಾರವನ್ನು ಶ್ರೀ ವೇಂಕಟೇಶ್ವರನ ಕೊರಳಿಗೆ ಅಲಂಕರಿಸಿದಳು. ಆನಂದನಿಲಯನು ಆಕೆಯನ್ನು ಆಲಿಂಗನು ಮಾಡಿಕೊಂಡು ತನ್ನ ಹೃದಯದಲ್ಲಿ "ವ್ಯೂಹಲಕ್ಷ್ಮಿ" ಯಾಗಿ ಪ್ರತಿಷ್ಠಾಪಿಸಿಕೊಂಡು ತಿರುಮಲೆಗೆ ಪ್ರಯಾಣ ಬೆಳೆಸಿದನು. ಆದರೆ ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯ ಮೇರೆಗೆ ತಾನು ಅವತರಿಸಿದ ಪದ್ಮ ಸರೋವರ ತೀರದಲ್ಲಿ "ಅಲಮೇಲುಮಂಗ" ಪದ್ಮಾವತಿ ಎನ್ನುವ ಹೆಸರುಗಳಿಂದ ಸ್ವಾಮಿಯವರು ಇಲ್ಲದೆಯೇ ಸ್ವತಂತ್ರವಾಗಿ "ವೀರಲಕ್ಷ್ಮಿಯಾಗಿ" ಪೂಜೆಯನ್ನು ಸ್ವೀಕರಿಸುತ್ತಾ ಭಕ್ತರಿಗೆ ವರಗಳನ್ನು ನೀಡುತ್ತಿದ್ದಾಳೆ. ಅಂದು ಬ್ರಹ್ಮಾದಿದೇವತೆಯರು "ಪದ್ಮಾವತಿ" ಅಮ್ಮನವರಿಗೆ ನಿರ್ವಹಿಸಿದ ಬ್ರಹ್ಮೋತ್ಸವಗಳು ಇಂದೂ ಸಹ ವಿಜೃಂಭಣೆಯಿಂದ ನಿರಾತಂಕವಾಗಿ ನಡೆಯುತ್ತಿವೆ. ಮುಖ್ಯವಾಗಿ ಈ ಉತ್ಸವಗಳ ಅಂತಿಮ ದಿನದಂದು ಪಂಚಮ ತೀರ್ಥದಂದು ತಿರುಮಲೆ ಸ್ವಾಮಿಯವರ ಕಾಣಿಕೆಯಾಗಿ ಸೀರೆಕುಪ್ಪಸ, ಅರಿಶಿನ ಕುಂಕುಮ, ಆಭರಣಗಳು, ತಿಂಡಿ ತಿನಿಸುಗಳನ್ನು ಆನೆಯ ಅಂಬಾರಿ ಮೇಲೆ ಅಮ್ಮನವರಿಗೆ ಕಳುಹಿಸುವುದು ಇಂದಿನವರೆಗೂ ಅನಿರತವಾಗಿ ನಡೆದು ಬಂದಿದೆ.

ಅಮ್ಮ ಅಲಮೇಲುಮಂಗಮ್ಮನವರು ಸಾಕ್ಷಾತ್ತು, ಆನಂದ ನಿಲಯನ ದಯಾಸ್ವರೂಪ! ಆ ತಾಯಿಯು ಸರ್ವಕಾಲದಲ್ಲೂ, ಸರ್ವಪ್ರದೇಶದಲ್ಲೂ, ಸರ್ವಾವಸ್ಥೆಯಲ್ಲಿಯೂ ಭಕ್ತರಿಂದ ಆಶ್ರಯಿಸಲ್ಪಡುತ್ತಾಳೆ. ಭಕ್ತರಿಗಾಗಿ ತಾನು ಶ್ರೀ ವೇಂಕಟೇಶ್ವರನನ್ನು ಆಶ್ರಯಿಸುತ್ತಾಳೆ. ಭಕ್ತರ ಕೋರಿಕೆಗಳನ್ನು, ಪ್ರಾರ್ಥನೆಗಳನ್ನು ಮೊದಲು ಚೆನ್ನಾಗಿ ಆಲಿಸುತ್ತಾಳೆ. ತಾನು ಆಲಿಸಿದುದಲ್ಲದೇ ತನ್ನ ಪ್ರಭುವು ಶ್ರೀ ವೇಂಕಟೇಶ್ವರನಿಗೆ ತಿಳಿಸಿ, ಒತ್ತಡ ಹೇರಿ ವರಗಳನ್ನು ಕೊಡಿಸುತ್ತಾಳೆ. ವಾತ್ಸಲ್ಯದಿಂದ ಭಕ್ತರ ದೋಷಗಳನ್ನು ನಿವಾರಿಸುತ್ತಾಳೆ. ಒಮ್ಮೊಮ್ಮೆ ಕೆಲವು ದೋಷಗಳನ್ನು ವಿಶಿಷ್ಟ ಗುಣಗಳಾಗಿ ತೋರಿಸುತ್ತಾ ಬೆಟ್ಟದೊಡೆಯನ ಕೆಲಸವನ್ನು ಶಮನಗೊಳಿಸುತ್ತಾಳೆ. ತಿರುಮಲೆ ಆನಂದ ನಿಲಯನ ವಕ್ಷಃಸ್ಥಳದಲ್ಲಿ ವ್ಯೂಹಲಕ್ಷ್ಮಿಯಾಗಿ , ತಿರುಚಾನೂರಿನಲ್ಲಿ 'ಪದ್ಮಾವತಿ ದೇವಿ ಅಲಮೇಲುಮಂಗಮ್ಮ' ಎನ್ನುವ ಹೆಸರಿನಿಂದ ಉತ್ಸವಮೂರ್ತಿಯಾಗಿ ತಾನು ಪ್ರಕಾಶಿಸುತ್ತಾ ಪರಮದಯಾಮಯಿಯಾದ ಶ್ರೀ ಪದ್ಮಾವತಿ ಅಮ್ಮನವರು ಸರ್ವಲೋಕಗಳನ್ನು ಪ್ರಕಾಶಪಡಿಸುತ್ತಿದ್ದಾರೆ. ಇಷ್ಟೆಲ್ಲಾ ವಿಶಿಷ್ಟ ಗುಣಗಳಿಂದ ಪ್ರಕಾಶಿಸುತ್ತಿರುವ ಅಮ್ಮ ಅಲಮೇಲುಮಂಗಮ್ಮನವರು ಆವಿರ್ಭವಿಸಿದ "ಪಂಚಮೀ ತೀರ್ಥ" ಹತ್ತು ದಿನಗಳ ಮುಂಚಿತವಾಗಿಯೇ ಪ್ರಾರಂಭವಾಗುವ ಪ್ರತಿ ದಿನವೂ ಮಹಾರಾಜ್ಞೆಯಾಗಿ ಶೇಷವಾಹನದಲ್ಲಿ ಅನಂತಲಕ್ಷ್ಮಿಯಾಗಿ ಹಂಸದ ಮೇಲೆ ಸರಸ್ವತಿಯಾಗಿ ಕಲ್ಪವೃಕ್ಷದಲ್ಲಿ "ಕಾಮಿತಾರ್ಥಪ್ರದಾಯಿನಿ"ಯಾಗಿ, ಗಜವಾಹನದ ಮೇಲೆ "ಗಜಲಕ್ಷ್ಮಿ"ಯಾಗಿ , ಗರುಡ ವಾಹನದ ಮೇಲೆ " ಶ್ರೀ ವೇಂಕಟಾದ್ರಿಲಕ್ಷ್ಮಿ"ಯಾಗಿ ಹನುಮಂತನ ಮೇಲೆ "ಸೀತಾಲಕ್ಷ್ಮಿ" ಯಾಗಿ ,,, ಹೀಗೆ ಎಷ್ಟೊಂದು ವಾಹನಗಳ ಮೇಲೆ ದರ್ಶನ ನೀಡುವ ವಿಭವರಾಣಿ, ಶ್ರೀ ಆನಂದನಿಲಯದ ಪಟ್ಟದ ರಾಣಿ ಅಲಮೇಲುಮಂಗಮ್ಮ ಅವತರಿಸಿದ ಆನಂದ ಉತ್ಸವಗಳ ಸಮಯದಲ್ಲಿ ಭಕ್ತರೆಲ್ಲರೂ ಮಹೋತ್ಸಾಹದಿಂದ ಪಾಲ್ಗೊಂಡು ಕಣ್ಣುಗಳಿಂದ ವೀಕ್ಷಿಸುತ್ತಾ ಕೈಯೆತ್ತಿ ನಮಸ್ಕರಿಸುತ್ತಾ, ಮಹಿಮೆ ಹೊಗಳುತ್ತಾ ಅನಂತವಾದ ಆಧ್ಯಾತ್ಮಿಕ ಆನಂದವನ್ನು ಮನಸಾರೆ ತುಂಬಿಕೊಳ್ಳಬೇಕೆಂದು ಆಶಿಸುತ್ತಾ, ಮತ್ತೊಮ್ಮೆ ಭಕ್ತಲೋಕಕ್ಕೆ ನಮ್ಮ (ನಿಮ್ಮ) ಸಪ್ತಗಿರಿ ಮಾಸಪತ್ರಿಕೆಯು ಸಾದರ ಸ್ವಾಗತವನ್ನು ಕೋರುತ್ತದೆ!

ಓಂ ಶ್ರೀಯೈ ನಮಃ



# ಶ್ರೀ ತುಳಸಿ ಮಹಿಮೆ ಮತ್ತು ಕಲ್ಯಾಣ (ಉತ್ಥಾನ ದ್ವಾದಶಿ ಪ್ರಯುಕ್ತ)

- ಎಸ್.ವೆಂಕಟ ರಾಘವನ್

ಎಲ್ಲಿ ತುಳಸಿಯ ವನವು ಅಲ್ಲೊಪ್ಪುವರು ಸಿರಿನಾರಾಯಣನು

ಗಂಗೆಯಮುನೆ ಗೋದಾವರಿ ಕಾವೇರಿ ಕಂಗೋಳಿಸುವ ಮಣಿಕರ್ಣಿಕೆಯು।
ತುಂಗಭದ್ರೆ ಕೃಷ್ಣವೇಣಿತೀರ್ಥಗಳೆಲ್ಲ ಸಂಗಡಿಸುತ ವೃಕ್ಷ ಮೂಲದಲ್ಲಿರುವವು॥
ಸರಸಿಜಭವ ಸುರಪ ಪಾವಕ ಚಂದಿರ ಸೂರ್ಯ ಮೊದಲಾದವರು।
ಸಿರಿರಮಣನ ಆಜ್ಞೆಯಲಿ ಅಗಲದಂತೆತರುಮಧ್ಯದೊಳು ನಿತ್ಯನೆಲೆಸಿಪ್ಪರು॥
ಋಗ್ವೇದ ಯಜುರ್ವೇದ ಸಾಮ ಅಥರ್ವಣಅಗ್ಗಳಿಸಿ ವೇದ ಘೋಷಗಳು।
ಅಗ್ರಭಾಗದಲಿದೆ ಬೆಟ್ಟದೊಡೆಯನು ಅಲ್ಲಿ ಶೀಘ್ರದಿ ಒಲಿದ ಶ್ರೀ ಪುರಂದರವಿಠಲ॥

- ಶ್ರೀ ಪುರಂದರ ದಾಸರು

ಭಗವಂತನ ಸೇವೆ ಮಾಡಲು ನವವಿಧಭಕ್ತಿ ಮಾರ್ಗಗಳಿವೆ.ಶ್ರವಣ,ಕೀರ್ತನ,ಸ್ಮರಣ,ಪಾದಸೇವೆ,ಅರ್ಚನೆ, ವಂದನೆ,ಸಖ್ಯ,ಆತ್ಮನಿವೇದನೆ ಮತ್ತು ದಾಸ್ಯ.ಭಗವಂತನ ಅರ್ಚನೆ ಮಾಡಲು ತುಳಸಿ ದಳಕೆ ತುಂಬಾ ಪ್ರಾಮುಖ್ಯತೆ ಇದೆ. ಎರಡು ಅಥವಾ ಹೆಚ್ಚು ತುಳಸಿ ಎಲೆ ಇರುವ ಗುತ್ತಿಯನ್ನು ತುಳಸಿ ದಳ ಎನ್ನುವರು. ಮನೆ ಮನೆಯಲ್ಲು ದೇವಸ್ಥಾನದಲ್ಲೂ ತುಳಸಿ ಕೋಟೆ ಮತ್ತು ದೇವಸ್ಥಾನದಲ್ಲಿ ದೊಡ್ಡ ಆವರಣ ಇರುವ ಕಡೆ ತುಳಸಿ ವನವನ್ನು ಬೆಳೆಸಿರುವುದು ಗಮನಿಸಬಹುದು. ಪರಮ ಪವಿತ್ರ ತುಳಸಿ ದಳ ಮತ್ತು ತುಳಸಿ ಗಿಡ. ತುಳಸಿ ಪದದ ಅರ್ಥ- "ತು" ಅಂದರೆ ಮೃತ್ಯುವು 'ಲಸತಿ" ಅಂದರೆ ಧಿಕ್ಕಾರ ಮಾಡಿದವರು.ಆದುದರಿಂದ ಮೃತ್ಯುವನ್ನೇ ಧಿಕ್ಕಾರ ಮಾಡಿದವರು ಅಂತ ಅರ್ಥ. ಇನ್ನೊಂದು ಅರ್ಥ ತುಲಾಂಸ್ಯತಿ ಇತಿ ತುಳಸಿ, ಅಂದರೆ ಬೆಲೆ ಕಟ್ಟಲು ಅತೀತವಾದದ್ದು ಎಂದು ಅರ್ಥ. ತುಳಸಿ ಇಲ್ಲದೆ ಶ್ರೀಹರಿಯ ಪೂಜೆ ಇಲ್ಲ, ತುಳಸಿ ಇಲ್ಲದೆ ಶ್ರೀಹರಿಗೆ ನೈವೇದ್ಯ ಸೇರುವುದೂ ಇಲ್ಲ."ಯನ್ಮೂಲೇ ಸರ್ವತೀರ್ಥಾನಿ ಯನ್ಮಧ್ಯೇ ಸರ್ವ ದೇವತಾ:ಯದಗ್ರೇ ಸರ್ವವೇದಾಶ್ಚ ತುಳಸಿ ತ್ವಾಂ ನಮಾಮ್ಯಹಂ" ಮಹಾಲಕ್ಷ್ಮಿ ನಾರಾಯಣ ಸ್ವರೂಪಿಯಾದ ತುಳಸಿ ಮೂಲದಲ್ಲಿ ಸರ್ವ ತೀರ್ಥಗಳು, ಮಧ್ಯ ಭಾಗದಲ್ಲಿ ಸಮಸ್ತ ದೇವತೆಗಳು ಮತ್ತು ಮೇಲ್ಭಾಗದಲ್ಲಿ ವೇದಗಳು ನೆಲೆಸಿರುವ ಶ್ರೀ ತುಳಸಿ ಮಾತೆಗೆ ನಮಿಸುವೆ. "ತುಳಸಿ ಕಾನನಂ ಯತ್ರ ಯತ್ರ ಪದ್ಮವನಾನಿಚ।ವಸಂತಿ ವೈಷ್ಣ ವಾಯತ್ರ ತತ್ರ ಸನ್ನಿಹಿತೋ ಹರಿ," ತುಳಸಿವನ ಹಬ್ಬಿರುವ ಜಾಗದಲ್ಲಿ ಶ್ರೀ ಹರಿಯು ಸದಾ ವಾಸಮಾಡುತ್ತಾರೆ."ವಾರಿಯೊಳಗಿಪ್ಪತ್ತು ನಾಲ್ಕುಮೂರೆರೆಡು ಸಾವಿರದ ಮೇಲೆ ಮುನ್ನೂರು ಹದಿನೇಳು ಎನಿಪ ರೂಪವು ಶ್ರೀ ತುಳಸಿದಳದಿ" ಜಗನ್ನಾಥದಾಸರು ಹರಿಸೇವಾಮೃತ ಗ್ರಂಥದಲ್ಲಿ ಪರಮಾತ್ಮ ತುಳಸೀದಳದಲ್ಲಿ ಸಾವಿರಾರು ರೂಪದಲ್ಲಿ ನೆಲೆಸಿರುವರು ಎಂದು ವರ್ಣಿಸಿದ್ದಾರೆ.ತುಳಸಿದಳ ಲಭ್ಯವಿಲ್ಲದ ಪಕ್ಷದಲ್ಲಿ ತುಳಸಿಕಾಷ್ಟ ಅಥವಾ ತುಳಸಿ ಗಿಡದ ಮೃತ್ತಿಕೆಯಿಂದಾದರೂ ಪೂಜಿಸಬಹುದು. ಕೊನೆಯ ಪಕ್ಷದಲ್ಲಿ "ಶ್ರೀ ತುಳಸಿ"ಎಂದು ಮೂರು ಸಲ ಉಚ್ಚಾರಣೆ ಮಾಡಿ ಶ್ರೀ ಹರಿಯನ್ನು ಪೂಜಿಸಬೇಕು.

ದಾಸರು ಕೀರ್ತನೆಯಲ್ಲಿ ತುಳಸಿ ವರ್ಣನೆ ಮಾಡಲು "ವೃಕ್ಷದೊಳಗೆ ತುಳಸಿ ವೃಕ್ಷಕಧಿಕವಿಲ್ಲ ಪಕ್ಷಿಯೊಳಗೆ ಗರುಡ ಪಕ್ಷಿಗಿಂತ ಮಿಗಿಲಿಲ್ಲ" ಎಂದು ಶ್ರೀ ಹರಿಯ ಪ್ರಿಯವಾದ ಶ್ರೀ ತುಳಸಿ ಮತ್ತು ವಾಹನವಾದ ಗರುಡನನ್ನು ಹೊಗಳಿದ್ದಾರೆ. "ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮ ರಂಗನ ಕಂಡಿರೇನಮ್ಮ, ಕಾಶಿ ಪೀತಾಂಬರ ಕೈಯಲ್ಲಿ ಕೊಳಲು ಪೂಸಿದ ಶ್ರೀ ಗಂಧ ಮೈಯೊಳಗಮ್ಮಲೇಸಾಗಿ ತುಳಸಿಯ ಮಾಲೆಯ ಧರಿಸಿದ ವಾಸುದೇವನು ಬಂದ ಕಾಣಿರೇನೆ" ಕೃಷ್ಣನ ಕಂಡೀರಾ? ಎಂದು ಪೀತಾಂಬರ, ಕೊಳಲು,ತುಳಸಿಮಾಲೆ ಧರಿಸಿದ ವಾಸುದೇವನನ್ನು ಸ್ತುತಿಸಿದರು.

### ಜಲಂಧರನ ಜನ್ಮ ವೃತ್ತಾಂತ:

ಸ್ವರ್ಗಾಧಿಪತಿ ದೇವೇಂದ್ರರು ಮತ್ತು ದೇವಗುರು ಬೃಹಸ್ಪತಿ ಪರಮೇಶ್ವರ ದರ್ಶನಕ್ಕಾಗಿ ಕೈಲಾಸಕ್ಕೆ ಬಂದರು. ಪರಮೇಶ್ವರ ಪರೀಕ್ಷೆ ಮಾಡಲು ವೃದ್ಧ ಬ್ರಾಹ್ಮಣ ರೂಪದಲ್ಲಿ ದಾರಿಗೆ ಅಡ್ಡಬಂದು ಯೋಗ ಧ್ಯಾನದಲ್ಲಿ ಕಂಡರು.ಎಷ್ಟೇ ಕೇಳಿದರು ಸಮಾಧಾನ ಬರದಿರಲು ಇಂದ್ರರು ವಜ್ರಾಯುಧ ಪ್ರಯೋಗಿಸಲು ಸಿದ್ಧರಾದರು.ಪರಮೇಶ್ವರ ಮೂರನೇ ಕಣ್ಣು ಕೆಂಪಾಗಿ ಕ್ರೋಧಿತರಾದರು. ಇದನ್ನು ಗಮನಿಸಿದ ಬೃಹಸ್ಪತಿ ಪರಮೇಶ್ವರರನ್ನು ಕೈ ಮುಗಿದು ಸಾಷ್ಟಾಂಗ ನಮಸ್ಕಾರ ಮಾಡಿ



ಕ್ಷಮೆಯಾಚಿಸಿದರು. ಆದರೂ ತ್ರಿನೇತ್ರಧಾರಿಯ ಕ್ರೋಧಾಗ್ನಿ ಶಾಂತವಾಗಿಲ್ಲ. ಇದರ ಪರಿಣಾಮ ವಿನಾಶಕಾರಿ ಆದುದರಿಂದ ಪರಮೇಶ್ವರ ಕ್ರೋಧಾಗ್ನಿ ಯನ್ನು ಸಮುದ್ರದ ಕಡೆಗೆ ಸಾಗಿಸಿದರು. ಇದರಿಂದ ಮಹಾ ಕ್ರೋಧಾಗ್ನಿ ಸಮುದ್ರವನ್ನು ಮುಟ್ಟಿ ಭೀಕರ ಶಬ್ಧಭೇರಿ ಉತ್ಪನ್ನ ವಾಯಿತು. ಬ್ರಹ್ಮ ದೇವರು ಶಬ್ದ ಕೇಳಿ ಸಮುದ್ರದ ಕಡೆಗೆ ಬಂದಾಗ ಸಮುದ್ರರಾಜ ಚಿಕ್ಕ ಬಾಲಕನೊಡನೆ ಹೊರಬಂದು ಬ್ರಹ್ಮದೇವರನ್ನು ಯಾರು ಈ ಬಾಲಕ? ಮಗುವಿನ ಜಾತಕವೇನು ಎಂದು ಕೇಳಿದರು. ಶಿವ ಕ್ರೋಧಾಗ್ನಿಯಿಂದ ಜಲದಲ್ಲಿ ಜನಿಸಿದ ಬಾಲಕ 'ಜಲಂಧರ" ಎಂದು ನುಡಿದರು. ಮಹಾ ಬಲಶಾಲಿ ಆದುದರಿಂದ ಇವನ ಮರಣ ಪರಮೇಶ್ವರನಿಂದಲೇ ಸಾಧ್ಯ ಎಂದು ಹೇಳಿದರು. ಜಲಂಧರ ಅಸು ರರ ಮನೆಯಲ್ಲಿ ಬೆಳೆದು ಅತಿ ಬಲವಂತನಾದನು. ಜಲಂಧರನ ಶಕ್ತಿ ಸಾಮರ್ಥ್ಯವನ್ನು ಕಂಡ ದೈತ್ಯಗುರು ಶುಕ್ರಾಚಾರ್ಯರು ಜಲಂಧರನನ್ನು ತ್ರೈಲೋಕ್ಯ ಆಧಿಪತ್ಯವನ್ನು ಪಡೆಯಲು,ದೇವತೆಗಳ ಮೇಲೆ ಯುದ್ಧ ಮಾಡಲು ಪ್ರೇರೇಪಣೆ ಮಾಡುತ್ತಲೇ ಇದ್ದರು. ಅಸುರ ರಾಜ ಕಾಲನೇಮಿ ಪುತ್ರಿ ವೃಂದಾದೇವಿ ಪರಮಸಾತ್ವಿ, ವಿಷ್ಣುಭಕ್ತರು. ಶುಕ್ರಾಚಾರ್ಯರ ಸಲಹೆ ಮೇರೆಗೆ ಜಲಂಧರ ವೃಂದಾ ದೇವಿಯನ್ನು ವಿವಾಹ ಮಾಡಿಕೊಂಡರು. ವೃಂದಾದೇವಿ ಅಸುರ ರಾಜಕುಮಾರಿ ಮತ್ತು ಅಸುರರಾಜನ ಪತ್ನಿಯಾಗಿದ್ದರೂ ಶ್ರೀ ಮಹಾವಿಷ್ಣುವನ್ನು ಆರಾಧಿಸುತ್ತಿದ್ದರು. ವೃಂದಾದೇವಿ ಮಹಾಪತಿವ್ರತೆ. ಪತಿಸೇವೆ, ದೈವವ್ರತ, ಪುಣ್ಯ ಕಾರ್ಯ, ಜಪ, ತಪ, ಶ್ರೀ ಹರಿಯ ಪೂಜೆ ಅನುದಿನ ಆಚರಿಸುತ್ತಾ ಸದಾ ಶ್ರೀಹರಿಯ ಧ್ಯಾನದಲ್ಲಿ ನಿಮಗ್ನವಾಗಿದ್ದರು.



### ದೇವತೆಗಳ ಜೊತೆ ಜಲಂಧರನ ಯುದ್ಧ

ಪತಿವ್ರತೆಯಾದ ವೃಂದಾದೇವಿ ತಪಃಶಕ್ತಿಯ ಪ್ರಭಾವದಿಂದ ಜಲಂಧರನಿಗೆ ಸೋಲೆಂಬುದೇ ಇರಲಿಲ್ಲ. ಅಹಂಕಾರ, ಅಧರ್ಮಗಳ ಪ್ರತಿರೂಪವೆನಿಸಿದ ಜಲಂಧರ, ದೇವತೆಗಳ ಮೇಲೆ ಯುದ್ಧ ಸಾರು ತ್ತಾನೆ. ಶುಕ್ರಾಚಾರ್ಯರ ಪ್ರೇರಣೆಯಿಂದ ಜಲಂಧರ ಸ್ವರ್ಗಲೋಕವನ್ನು ಜಯಿಸಿ ದೇವತೆಗಳೊಡನೆ ಯುದ್ಧದಲ್ಲಿ ಗೆದ್ದು, ದೇವತೆಗಳಿಗೆ ಸಂಕಟವಾದ ಪರಿ ಸ್ಥಿತಿ ನೆಲೆಸಿದ. ದೇವತೆಗಳು ಶ್ರೀ ಹರಿಯ ಬಳಿ ಬಂದು ಅಸುರನ ಬಾಧೆಯಿಂದ ಕಾಪಾಡಲು ಬೇಡಿಕೊಂಡರು. ವೃಂದಾ ದೇವಿಯ ವಿನಯ, ದೈವಭಕ್ತಿ, ಪಾತಿವ್ರತ್ಯ, ವ್ರತ, ತಪಸ್ಸಿನಿಂದ ಜಲಂಧರನಿಗೆ ಸೋಲು ಬರುತ್ತಿಲ್ಲ. ವೃಂದಾ ದೇವಿಯ ವ್ರತಭಂಗವಾದರೆ ಜಲಂಧರನ ಮರಣ ಆಗುವುದು ಮತ್ತು ಜಲಂಧರನ ಮರಣ ಪರಮೇಶ್ವರನಿಂದಲೇ ಸಾಧ್ಯ ಎಂದು ನುಡಿದರು. ಪರಮೇಶ್ವರ ಮತ್ತು ದೇವತೆಗಳು ಯುದ್ಧ ಘೋಷಣೆ ಮಾಡಿದರು. ಯುದ್ಧ ಭೂಮಿಯಲ್ಲಿ ಪರಮೇಶ್ವರ ಜಲಂಧರ ನೊಡೆ ಘೋರ ಸಮರ ನಡೆಸುತ್ತಿರುವಾಗ, ಶ್ರೀಹರಿ ಜಲಂಧರನ ರೂಪದಲ್ಲಿ ವೃಂದಾದೇವಿಯ ಮಂಟಪಕ್ಕೆ ಬಂದರು. ವೃಂದಾದೇವಿ ಭಕ್ತಿಯಿಂದ ಪತಿಯ ಶ್ರೇಯಕ್ಕಾಗಿ ವ್ರತವ ಮಾಡುತ್ತಿದ್ದರು. ಪತಿ ಯುದ್ಧವ ಜಯಿಸಿ ಬಂದ ಭಾವನೆಯಿಂದ ಪಾದ ನಮಸ್ಕಾರ ಮಾಡಿ ಕೊಂಡರು. ವ್ರತ ಭಂಗವಾಯಿತು ಮತ್ತು ಶ್ರೀ ಹರಿಯ ಸ್ಪರ್ಶೆಯಿಂದ ತನ್ನ ಪತಿ ಜಲಂಧರ ನಲ್ಲ ಎಂದು ಅನುಮಾನ ಮೂಡಿತು. ಇಷ್ಟರಲ್ಲಿ ಪರ ಮೇಶ್ವರ ಜಲಂಧರನ ಶಿರವ ಖಂಡಿಸಿದರು. ನೀವು ಯಾರೆಂದು ಕೇಳಿದಾಗ ಶ್ರೀ ಹರಿದರ್ಶನ ಕೊಟ್ಟರು. ಪತಿಯ ಮರಣದ ವಾರ್ತೆ ತಿಳಿದು ಶ್ರೀಹರಿಯ ಮಾಯೆ ಯಿಂದ ಪತಿಯನ್ನು ಕಳೆದುಕೊಳ್ಳಲು ಆಗ್ರಹದಿಂದ ಶಾಪವಕೊಟ್ಟರು. ಕಲ್ಲಿನ ಮನಸಂತೆ ಮಾಡಿದ ಕೃತ್ಯಕ್ಕೆ ಪಾಷಾಣವಾಗ ಬೇಕೆಂದು ಶಪಿಸಿದರು. ವೃಂದಾದೇವಿ ಪತಿ ವಿಯೋಗ ಸಹಿಸದೆ ಸತಿ ಸಹಗಮನ ಮಾಡಿ ಕೊಂಡರು. ಅಗ್ನಿಗೆ ಅಹುತಿ ಆದ ಮೇಲೆ ಪವಿತ್ರವಾದ ತುಳಸಿ ಉದ್ಭವವಾಯಿತು. ವೃಂದಾದೇವಿ ಗಂಡಕಿ ನದಿಯಾಗಿ, ವೃಂದಾದೇವಿಯ ಕೇಶಕಲಾಪಗಳು ಪವಿತ್ರ ವೃಕ್ಷವಾದ ಶ್ರೀ ತುಳಸಿಯಾಗಿ ಉದ್ಭವಿಸಿದವು. ದೇವತೆಗಳ ಪೂಜೆಗೆ ಅವಸರವಾದ ಪತ್ರ ಪುಷ್ಪಗಳಲ್ಲಿ ತುಳಸಿಗೆ ಅಗ್ರಸ್ಥಾನ ಎಂದು ಶ್ರೀ ಹರಿ ವರ ಕೊಟ್ಟರು.

ಶ್ರೀ ತುಳಸಿ ಶಾಶ್ವತವಾಗಿ ಶ್ರೀಹರಿಯ ಜೊತೆ ಇರುವರು ಮತ್ತು ಮಹಾಲಕ್ಷ್ಮಿ ಸ್ವರೂಪ ಎಂದು ಹೇಳಿದರು. ಶ್ರೀ ಹರಿಯ ಪೂಜೆ ನೈವೇದ್ಯ ತುಳಸೀ ದಳ ಇಲ್ಲದೆ ಶ್ರೀಹರಿಗೆ ಸೇರುವುದಿಲ್ಲ.ಸಕಲ ಪುಷ್ಪಗಳ ಸಾರ ಭೂತ ಶುದ್ಧ ಸ್ವರೂಪಿಣಿ ಶ್ರೀ ತುಳಸಿ.ಶಾಪದಿಂದ ಶ್ರೀಹರಿ ಗಂಡಕಿನದಿ ತೀರದಲ್ಲಿ ಪಾಷಾಣ ರೂಪದಲ್ಲಿ (ಶಾಲಗ್ರಾಮ) ನಿವಾಸವನ್ನು ಮಾಡಿಕೊಂಡರು.



### ಗಂಡಕಿ ನದಿ

ಗಂಡಕಿ ನದಿಯನ್ನು ನಾರಾಯಣಿ ಅಂತ ಕರೆಯುವರು.ಮಧ್ಯ ನೇಪಾಳ ದೇಶದಿಂದ ಉತ್ತರ ಭಾರತಕ್ಕೆ ಪ್ರವಾಹವಾಗುವ ನದಿ ಹರಿಯುತ್ತ ಸೋನ್ಪುರ್ ಮತ್ತು ಹಾಝಿಪುರ್ ಮಧ್ಯದಲ್ಲಿ ಗಂಗಾ ನದಿಗೆ ಸೇರುವುದು. ನೇಪಾಳ ದೇಶದ ಮಸ್ತಾಂಗ್ ಪ್ರದೇಶದಲ್ಲಿ, ಹಿಮಾಲಯ ಪರ್ವತದ ಶ್ರೇಣಿಯಲ್ಲಿ ಹರಿಯುವ ಗಂಡಕಿ ನದಿ ಸಮೀಪ ಮುಕ್ತಿನಾಥ, ದಾಮೋದರ ಕುಂಡಗಳನ್ನು ಶಾಲಗ್ರಾಮ ಕ್ಷೇತ್ರ ಎಂದು ಕರೆಯಲಾಗುತ್ತದೆ.''ಗಂಡಕ್ಯಾಂ ಚೋತ್ತರೇ ತೀರೇ ಗಿರಿರಾಜಸ್ಯ ದಕ್ಷಿಣೇ। ದಶಯೋಜನ ವಿಸ್ತೀರ್ಣಾ ಮಹಾಕ್ಷೇತ್ರ ವಸುನ್ಧರಾ। ಧವಳಗಿರಿ ಮತ್ತು ಅನ್ನಪೂರ್ಣಾ ಪರ್ವತಗಳ ನಡುವಿನ "ತುಕ್ಚೆ" ಎಂಬ ಸ್ಥಳದ ಸಮೀಪ ಕಾಲೀ ಗಂಡಕಿಯ ತೀರದಲ್ಲಿ ಶಾಲಗ್ರಾಮ ಲಭ್ಯ. ಈ ನದಿಯ ಗರ್ಭದಲ್ಲಿ ಶಾಲಗ್ರಾಮ ಶಿಲೆ ಯಥೇಚ್ಛವಾಗಿ ದೊರೆಯುತ್ತದೆ. ವಜ್ರಕೀಟ ಶಾಲಗ್ರಾಮ ಶಿಲೆಯನ್ನು ಸೂಕ್ಷ್ಮ ರಂಧ್ರದ ಮೂಲಕ ಒಳಹೊಕ್ಕಿ ಚಕ್ರದ ಮುದ್ರೆಯನ್ನು ಏರ್ಪಡಿಸುವುದು.''ವಜ್ರಕೀಟಶ್ಚ ಕೃಮಯೋ ವಜ್ರದಂಷ್ಟ್ರಾಶ್ಚ ತತ್ರವೈ -ತತ್ ಶಿಲಾ ಕುಹರೇ ಚಕ್ರಂ ಕರಿಷ್ಯಂತಿ ಮದೀಯ ಕಂ''ಈ ಕೀಟ ಪ್ರವಿಸುವ ದ್ರವದಿಂದ ಚಿನ್ನ ಉತ್ಪತ್ತಿಯಾಗುತ್ತದೆ. ಶಾಲಗ್ರಾಮದಲ್ಲಿ ಏರ್ಪಟ್ಟ ಚಿಹ್ನೆಗಳು ಚಕ್ರ, ಶಂಖ,ಗದ,ಪದ್ಮ ಮತ್ತು ಸಾಲಗ್ರಾಮದ ಆಕಾರದಿಂದ ವಿಧವಿಧವಾದ ಶಾಲಗ್ರಾಮಗಳನ್ನು ಗುರುತಿಸಬಹುದು. ಹೆಚ್ಚಾಗಿ ಕಪ್ಪು ಬಣ್ಣದ ಶಾಲಗ್ರಾಮ ಲಭ್ಯವಾಗುವುದು. ಭಿನ್ನರೂಪಗಳಲ್ಲಿ, ಬಣ್ಣದಲ್ಲಿ ಲಭ್ಯವಾಗುವ ಶಾಲಗ್ರಾಮಗಳನ್ನು,ಶ್ರೀ ಹರಿಯ ಅವತಾರದ ಕೃಷ್ಣ, ದಾಮೋದರ, ಲಕ್ಷ್ಮೀ ನಾರಾಯಣ,ಹಯಗ್ರೀವ ಮತ್ಸ್ಯ,ಕೂರ್ಮ, ನಾರಸಿಂಹ ನಾಮದಿಂದ ಕರೆಯಲಾಗುವುದು. ಎಲ್ಲ ರೂಪಗಳ ಶಾಲಗ್ರಾಮಗಳು ಶ್ರೀಹರಿಯ ಪ್ರತ್ಯಕ್ಷ ಸ್ವರೂಪ. ಶ್ರೀಹರಿಯಿಂದ ಪ್ರಕೃತಿ ಸ್ವರೂಪವಾಗಿರುವ ಶಾಲಗ್ರಾಮ ಮಾನವ ಪ್ರತಿಷ್ಠಿತ ಮೂರ್ತಿಗಿಂತಲೂ ಶ್ರೇಷ್ಠ.ಸ್ವತಃ ದೇವರೇ ಆಗಿರುವ ಶಾಲಗ್ರಾಮಗಳಿರುವುದರಿಂದ ಗಂಡಕೀ ನದಿ ಪವಿತ್ರವಾಗಿದೆ.

### ಶಾಲಗ್ರಾಮ ಮಹಿಮೆ

ಶಾಲಗ್ರಾಮ ಪೂಜೆ ಶುಚಿಯಿಂದ ಭಕ್ತಿಯಿಂದ ಮಾಡ ಬೇಕು.ಅನುದಿನ ಶುದ್ಧ ಜಲದಿಂದ ಅಭಿಷೇಕ, ತುಳಸಿ ಅರ್ಚನೆ ಮತ್ತು ನೈವೇದ್ಯ ತಪ್ಪದೆ ಮಾಡಬೇಕು. "ನೈವೇದ್ಯ ಯುಕ್ತಾಂ ತುಲಸೀಂ ಚ ಮಿಶ್ರಿತಾಂ ವಿಶೇಷತಃ ಪಾದ ಜಲೇನ ವಿಷ್ಣೋಃ।ಯೋಽಶ್ನಾತಿ ನಿತ್ಯಂ ಪುರತೋ ಮುರಾರೇಃ ಪ್ರಾಪ್ನೋತಿ ಯಜ್ಞಾಯುತ ಕೋಟಿ ಪುಣ್ಯಮ್। ತುಳಸಿ ತೀರ್ಥದಿಂದ ಶಾಲಗ್ರಾಮ ಅಭಿಷೇಕ, ಶ್ರೀಹರಿಗೆ ನೈವೇದ್ಯ ಸಮರ್ಪಣೆ ಮಾಡಿದರೆ ಕೋಟಿ ಯಜ್ಞ ಫಲ ಸಿಗುವುದು. ಶಾಲಗ್ರಾಮದ ಸ್ಪರ್ಶವೇ ಪುಣ್ಯದಾಯಕ. ಶ್ರೀ ಹರಿಯು ಸರ್ವಾಂತರ್ಯಾಮಿ,ಆದರೂ ಶಾಲಗ್ರಾಮದ ಪೂಜೆ ಅತ್ಯಂತ ಶ್ರೇಷ್ಠ.''ಯಥಾ ಶಾಲಗ್ರಾಮ ವಿಷ್ಣುಃ ಸಂನಿಹಿತಃ ತದ್ವತ್'' ಶ್ರೀ ಹರಿಯು ಶಾಲಗ್ರಾಮದಲ್ಲಿ ಪ್ರತಿಷ್ಠಿತರಾಗಿರುವುದರಿಂದ ದೇವತೆಗಳು,ಹದಿನಾಲ್ಕು ಲೋಕಗಳು ಪ್ರತಿಷ್ಟಿತವಾಗಿರುತ್ತದೆ."ಅಕಾಲಮೃತ್ಯುಹರಣಂ ಸರ್ವವ್ಯಾಧಿ ವಿನಾಶನಮ್। ವಿಷ್ಣೋಃ ಪಾದೋದಕಂ ಪೀತ್ವಾ ಶಿರಸಾಧಾರಯಾಮ್ಯ ಹಮ್", ಸರ್ವವ್ಯಾಧಿ ನಿವಾರಣೆಯಾಗಿ ಅಕಾಲ ಮೃತ್ಯು ಕಂಟಕಗಳಿಂದ ಪಾರಾಗುವರು.ತಿರುಮಲೆ ಶ್ರೀನಿವಾಸನ ಗರ್ಭಗುಡಿಯಲ್ಲಿ ಶ್ರೀನಿವಾಸ ದೇವರ ಪೂಜೆಯ ಜೊತೆ ಶಾಲಗ್ರಾಮದ ಪೂಜೆಯು ನಡೆಯುವುದು.

### ಶ್ರೀ ತುಳಸಿಯ ಮಹಾತ್ಮೆ

ಸ್ಕಂದಪುರಾಣ, ಪದ್ಮಪುರಾಣ, ಬ್ರಹ್ಮವೈವರ್ತಪುರಾಣ ಗರುಡಪುರಾಣಗಳಲ್ಲಿ ಶ್ರೀ ತುಳಸಿಯ ಅಪಾರ ಮಹಿಮೆಯನ್ನು ವರ್ಣಿಸಲಾಗಿದೆ. ಶ್ರೀ ತುಳಸಿಯ ಎಲೆ, ಕಾಷ್ಠ ಮೂಲದಲ್ಲಿರುವ ಮಣ್ಣು (ಮೃತ್ತಿಕೆ) ಪರಮ ಪವಿತ್ರ. ಶ್ರೀ ತುಳಸಿ ಗಿಡದ ಹತ್ತಿರ ಗಾಳಿಯು ಪವಿತ್ರವಾಗುವುದು. ಭಕ್ತಿಯಿಂದ ತುಳಸಿ ದಳವನ್ನು ಶ್ರೀಹರಿಗೆ ಅರ್ಪಣೆ ಮಾಡಿದರೆ ನೂರು ಹೋಮ ಮಾಡಿದ ಫಲ ಸಿಗುವುದು. ಶ್ರೀಹರೀ ಅರ್ಚನೆ ಮತ್ತು ಅಲಂಕಾರ ಪ್ರಿಯ. ಪ್ರತಿನಿತ್ಯ ಶ್ರೀನಿವಾಸ ದೇವರಿಗೆ ಸುಪ್ರ ಭಾತ ಸೇವೆಯ ನಂತರ ತುಳಸಿ ಅರ್ಚನೆ ಸೇವೆ ನಡೆಯುವುದು.ಶ್ರೀ ತುಳಸಿಯ ಪೂಜೆ ಮಾಡಿ ಮೃತ್ತಿಕೆ ಹಣೆಯ ಸ್ಪರ್ಶಿಸಿದರೆ ಶತದಿನದ ಶ್ರೀ ಹರಿಯ ಪೂಜಾ ಫಲ ದೊರೆಯುವುದು. ತುಳಸೀ ಮಾಲೆಯಲ್ಲಿ ರೋಗ ನಿವಾರಣಾ ಶಕ್ತಿಯ ಜೊತೆಗೆ ಪವಿತ್ರೀಕರಣ ಶಕ್ತಿಯೂ ಅಪಾರವಿದೆ. ತುಳಸಿಮಾಲೆ ಧಾರಣೆಯಿಂದ ಪವಿತ್ರತೆ ಹೊಂದು ಅಶ್ವಮೇಧಯಾಗ ಫಲ ಪಡೆಯುವರು. ಮೃತ ದೇಹದ ದಹನ ಸಂಸ್ಕಾರ ಮಾಡುವಾಗ ತುಳಸಿ ಕಾಷ್ಠವನ್ನು ಇಟ್ಟರೆ ಮುಕ್ತಿ ಲಭ್ಯವಾಗಿ ಪುಣ್ಯ ಲೋಕಕ್ಕೆ



ಹೋಗುವರು. ಯಮಭಟರು ಬರಲು ಹಿಂದೆಜ್ಜೆ ಹಾಕುವರು. ತುಳಸಿ ತೀರ್ಥ ಅಥವಾ ತುಳಸಿ ದಳವನ್ನು ಅಂತ್ಯಕಾಲದಲ್ಲಿ ಸೇವಿಸಿದಾಗ ಮೋಕ್ಷ ಸಿಗುವುದು

ಯಜ್ಞಂ ದಾನಂ ಜಪಂ ತೀರ್ಥಂ ಶ್ರಾದ್ಧಂ ವೈ ದೇವತಾರ್ಚನಮ್।
ತರ್ಪಣಂ ಮಾರ್ಜನ ಚಾನ್ಯನ್ನ ಕುರ್ಯಾತ್ ತುಳಸೀಂ ವಿನಾ॥

ಶುಭ ಅಥವಾ ಅಶುಭ ಕಾರ್ಯಗಳಾದ ಯಜ್ಞ, ಯಾಗ, ದಾನ, ಜಪ ಶ್ರಾರ್ಧ, ಅರ್ಚನೆ ಮತ್ತು ತರ್ಪಣ ಮಾಡುವಾಗ ಶ್ರೀ ತುಳಸಿದಳ ಪವಿತ್ರತೆ ನೆಲಸಿ ಭಗವಂತನ ಸೇವಾಫಲ ಸಿಗುವುದು.ಒಂದು ಪ್ರದಕ್ಷಿಣವನು ಮಾಡಿದವರ ಹೊಂದಿ ಪ್ಪುದು ಭೂಪ್ರದಕ್ಷಿಣನು ಪುಣ್ಯ ಎಂದೆಂದಿವಳ ಸೇವಿಸುವ ನರರಿಗೆ ಇಂದಿರೆಯರಸ ಕೈವಲ್ಯ ವೀವ, ಹರಿಪಾದಕೆ ಶ್ರೀ ತುಲಸಿಯೇಲಿಸಿದನರರನು ಪರಮ ಪದ ಕೇರಿಸುವುದು ನಿರುತದಿ ತುಲಸಿಯ ಕಂಡರವಗೆ ನರಕಗಳ ದರುಶನಮತ್ತಿಲ್ಲ."ದರ್ಶನಾತ್ಪಾಪನಾಶೀನೀಂ ಸ್ಪರ್ಶನಾತ್ಪಾವನೀಂ ಅಭಿವನ್ಧನಾದ್ ರೋಗನಾಶಿನೀಂ ಸೇವನಾತ್". ದರ್ಶನದಿಂದ ಪಾಪನಾಶನ, ತುಳಸಿದಳ ಸೇವನೆಯಿಂದ ಆರೋಗ್ಯ ವೃದ್ಧಿ ಆಗುವುದು. ಶ್ರೀ ತುಳಸಿದಳ ಆರೋಗ್ಯ ದಾಯಿನಿ. ತುಳಸಿ ವನದಲ್ಲಿ ಕ್ರಿಮಿ,ಕೀಟಕ ಮತ್ತು ವಿಷ ಪ್ರಾಣಿಗಳು ಬರಲಾರವು. ತುಳಸಿ ಗಿಡ ಆಮ್ಲಜನಕವನ್ನು ಹೆಚ್ಚಾಗಿ ನೀಡುವುದು.ತುಳಸಿ ಗಿಡದಮೇಲಿಂದ ಬೀಸುವ ಗಾಳಿ ದಶ ದಿಕ್ಕುಗಳನ್ನು ವ್ಯಾಪಿಸಿ ಭೂತಪ್ರೇತ, ಪಿಶಾಚಿ, ವ್ಯಾಧಿ, ಬಾಧೆಗಳನ್ನು, ಮತ್ತು ರೋಗ ರುಜಿನಗಳನ್ನು ನಾಶ ಮಾಡುತ್ತದೆ.ಪರಮ ಪವಿತ್ರ ಶ್ರೀತುಳಸಿಗೆ ವೃಂದಾವನಿ, ವೃಂದ,ವಿಶ್ವ ಪೂಜಿತಾ, ಪುಷ್ಪಸಾರ, ನಂದಿನಿ, ಕೃಷ್ಣಜೀವನಿ, ವಿಶ್ವ ಪಾವನಿ, ಎಂಬ ಹೆಸರುಗಳಿವೆ.

### ಶ್ರೀ ಕೃಷ್ಣ ತುಲಾಭಾರ

ನಾರದ ಮಹಾಮುನಿ ಸತ್ಯಭಾಮ ದೇವಿಗೆ ವ್ರತ ಒಂದನ್ನು ವಿವರಿಸಿ ಅದರಿಂದ ತನ್ನ ಪ್ರೀತಿ ಶ್ರೀಕೃಷ್ಣ ಪರ



ಮಾತ್ಮನ ಮೇಲೆ ಇರುವುದನ್ನು ನಿರೂಪಿಸಲು ಸಾಧ್ಯ ಎಂದು ಹೇಳಿ ತುಲಾಭಾರದ ಪ್ರಸ್ತಾವನೆ ಮಾಡಿದರು. ಮೊದಲು ಕೃಷ್ಣ ಪರಮಾತ್ಮನನ್ನು ಮುನಿಗೆ ಒಪ್ಪಿಸಿ ನಂತರ ತುಲಾ ಭಾರದಲ್ಲಿ ಶ್ರೀ ಕೃಷ್ಣನ ಭಾರವನ್ನು ಬೆಲೆ ಬಾಳುವ ವಸ್ತುಗಳಿಂದ ತೂಗಿಸಿ ಶ್ರೀಕೃಷ್ಣನನ್ನು ಹಿಂಪಡೆಯ ಬಹುದು ಎನ್ನುವ ಪ್ರಸ್ಥಾಪನೆ ಮಾಡಿದರು.ಸತ್ಯಭಾಮದೇವಿ ಸತ್ರಾಜಿತ್ತು ರಾಜರ ಪುತ್ರಿ. ಸತ್ರಾಜಿತ್ತು ಮಹಾರಾಜರ ಬಳಿ ಶಮಂತಕ ಮಣಿ ಪ್ರತಿದಿನವೂ ಬಂಗಾರದ ರಾಶಿಯನ್ನು ಕೊಡುವುದು. ಶ್ರೀಮಂತಿಕೆ ವಂಶದಲ್ಲಿ ಮಹಾರಾಣಿಯಾಗಿ ಬೆಳೆದವರು ಶ್ರೀ ಸತ್ಯಭಾಮಾದೇವಿ. ತನ್ನ ಹತ್ತಿರ ಇರುವ ಬಂಗಾರ, ವಜ್ರ, ವೈಢೂರ್ಯ,ಕಿರೀಟ, ಕಂಕಣಗಳಿಂದ ಶ್ರೀ ಕೃಷ್ಣ ಪರಮಾತ್ಮ ನನ್ನು ತುಲಾಭಾರದಲ್ಲಿ ತೂಗಿಸಿ ಹಿಂಪಡೆದು ತನ್ನ ಪ್ರೇಮ,ಭಕ್ತಿಯನ್ನು ನಿರೂಪಿಸಲು ಸಂಕಲ್ಪ ಮಾಡಿದರು. ಸತ್ಯಭಾಮ ದೇವಿ ತುಲಾಭಾರವನ್ನು ಸಜ್ಜುಮಾಡಿದರು. ಶ್ರೀ ಕೃಷ್ಣರನ್ನು ನಾರದ ಮಹಾಮುನಿಗೆ ಒಪ್ಪಿಸಿ ತುಲಾಭಾರ ಆರಂಭಿಸಿದರು. ಒಂದು ಕಡೆ ಪರಮಾತ್ಮ ಇನ್ನೊಂದು ಕಡೆ ಸತ್ಯಾದೇವಿಯ ಬಂಗಾರ ಇಡುತ್ತಾ ತ್ರಾಸು ತೂಗುವದು ಗಮನಿಸುತ್ತಿದ್ದರು. ಎಷ್ಟೇ ರಾಶಿ ಬಂಗಾರ, ಮಣಿ, ಮಾಣಿಕ್ಯ, ವಜ್ರ, ವೈಡೂರ್ಯ ತ್ರಾಸಿನಲ್ಲಿ ಸಮರ್ಪಿಸಿದರೂ,ಒಂದಿಷ್ಟು ಕದಲದಿರಲು ನಾರದಮುನಿ ಶ್ರೀಕೃಷ್ಣ ತನ್ನ ವಶ ಮತ್ತು ಅವರ ಜೊತೆ ಹೋಗ ಬೇಕೆಂದು ಘೋಷಣೆ ಮಾಡಿದರು. ಸಂಕಟ ಸ್ಥಿತಿ ರುಕ್ಮಿಣಿ ದೇವಿಗೆ ತಿಳಿದು ಶ್ರೀ ತುಳಸಿ ದಳದೊಂದಿಗೆ ತುಲಾಭಾರ ಸ್ಥಳಕ್ಕೆ ಬಂದರು.ಶ್ರೀ ಕೃಷ್ಣ ಪರಮಾತ್ಮನ ಅಷ್ಟ ಸತಿಗಳೆಲ್ಲರೂ ಗಾಭರಿಗೊಂಡು ಪರಮಾತ್ಮನನ್ನು ದಾರಿ ತೋರಲು ಬೇಡಿಕೊಂಡರು.ತುಲಾ ಭಾರದಲ್ಲಿ ತೂಗುವ ತನಕ ಕೃಷ್ಣ ನಾರದ ಮುನಿಯ ವಶ, ನಿಸ್ಸಹಾಯ ಸ್ಥಿತಿ ಎಂದು ಶ್ರೀ ಕೃಷ್ಣ ಪರಮಾತ್ಮ ನುಡಿದರು. ಶ್ರೀ ರುಕ್ಮಿಣಿದೇವಿ ಭಗವಂತನ ಪ್ರಾರ್ಥನೆ ಮಾಡಿ ತುಳಸಿ ದಳವನ್ನು ಭಕ್ತಿಯಿಂದ ತ್ರಾಸಿನಲ್ಲಿ ಸಮರ್ಪಣೆ ಮಾಡಿದಾಗ ತ್ರಾಸು ತೂಗಿತು. ಶ್ರೀ ಕೃಷ್ಣ ಮುನಿಯ ವಶದಿಂದ ಬಿಡುಗಡೆ ಆದರು.ಹದಿನಾಲ್ಕು ಲೋಕಗಳನ್ನು ಪಾಲಿಸುವ ಜಗತ್ತಿನ ಒಡೆಯ ಒಂದು ತುಳಸಿ ದಳಕೆ ತೂಗಿದರು. ಭಕ್ತಿ ಮತ್ತು ಪರಮ ಪವಿತ್ರವಾದ ಶ್ರೀ ತುಳಸಿ ದಳದಿಂದ ಶ್ರೀ ಹರಿ ಕರುಣೆ ಸಾಧ್ಯ ಎಂದು ತೋರಲು ಇದು ನಿರ್ವಚನ.

### ಚಾತುರ್ಮಾಸ್ಯ ವ್ರತ

ಅಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ದ್ವಾದಶಿಯವರೆಗೆ ನಾಲ್ಕು ತಿಂಗಳುಗಳ ಕಾಲ ಚಾತುರ್ಮಾಸ್ಯ ಕಾಲ.ಚಾತುರ್ಮಾಸ್ಯ ವ್ರತ ಬಹುಪುಣ್ಯ ಕೊಡುವ ವ್ರತ. ಪ್ರತಿದಿನ ವೇದಪಾರಾಯಣ, ಗೀತಾಪಾರಾಯಣ ಪುರಾಣ



ಪಠಣ ಮತ್ತು ದೇವರ ಸೇವೆ ಮಾಡಬೇಕು. ಆಹಾರದಲ್ಲಿ ಕಟ್ಟುಪಾಡು ಇರಬೇಕು. ನದಿ, ಸರೋವರ, ಸಮುದ್ರಗಳಲ್ಲಿ ಸ್ನಾನ ಮಾಡಬೇಕು. ಅಷಾಢ ಶುದ್ಧ ಏಕಾದಶಿ ದಿನ ಶ್ರೀ ಹರಿ ಯೋಗನಿದ್ರೆ ಆರಂಭವಾಗಿ ಕಾರ್ತೀಕ ಶುದ್ಧ ದ್ವಾದಶಿ ಯಂದು ಮುಕ್ತಾಯವಾಗುವುದು.ಕಾರ್ತೀಕ ಮಾಸದಲ್ಲಿ ಬರುವ ಮೊದಲನೆಯ ಏಕಾದಶಿಯನ್ನು ದೇವ ಪ್ರಬೋಧ ಏಕಾದಶಿ ಎನ್ನುವರು. ಶ್ರೀ ಹರಿಗೆ ತುಂಬಾ ಪ್ರೀತಿಕರವಾದ ಏಕಾದಶಿ. ಉತ್ತರ ಭಾರತದಲ್ಲಿ ಈ ಏಕಾದಶಿಯನ್ನು ದೇವ್ ಉಠನೀ (ದೇವರು ನಿದ್ದೆಯಿಂದ ಏಳುವ) ಏಕಾದಶಿ ಎಂದು ಕರೆಯುವರು.

### ತುಳಸಿ ಕಲ್ಯಾಣ

ಕಾರ್ತಿಕ ಮಾಸದ ಹನ್ನೆರಡನೇ ದಿನ (ಉತ್ಥಾನ ದ್ವಾದಶಿ) ತುಳಸಿ ಹಬ್ಬವನ್ನು ಆಚರಿಸುತ್ತಾರೆ. ಉತ್ಥಾನ ಎಂದರೆ ಮೇಲಕ್ಕೆ ಏಳು ಅನ್ನುವ ಅರ್ಥ. ದೇವ ದಾನವರು ಕ್ಷೀರಸಾಗರ ಮಥನ ಪ್ರಾರಂಭ ಮಾಡಿದ ದಿನವೂ ಕಾರ್ತಿಕ ಶುಕ್ಲ ಪಕ್ಷ ದ್ವಾದಶಿ.ಕಾರ್ತಿಕ ದ್ವಾದಶಿಯ ದಿನ ಶ್ರೀ ಹರಿ ತುಳಸಿ ವೃಂದಾವನದಲ್ಲಿ ಪ್ರವೇಶ ಮಾಡುವರು.ತುಳಸಿ ಕಲ್ಯಾಣವನ್ನು ಕ್ಷೀರಾಬ್ಧಿ ಶಯನವ್ರತ ಅಂತಲೂ ಕರೆ ಯುವರು.ಎಳ್ಳಲಿ ಎಣ್ಣೆಯಂತೆ, ಮೊಸರಲ್ಲಿ ಬೆಣ್ಣೆಯಂತೆ, ಪ್ರವಾಹದಲ್ಲಿ ನೀರಂತೆ ಇಂಧನದಲ್ಲಿ ಶಕ್ತಿಯಂತೆ ತುಳಸಿಯಲ್ಲಿ ಶ್ರೀಹರಿ ಇರುವರು ಎಂದು ಬ್ರಹ್ಮೋಪನಿಷತ್ ತಿಳಿಸುವುದು. ತುಳಸಿ ಕಲ್ಯಾಣ ದಿನವನ್ನು ದೇವ ದೀಪಾವಳಿ ಅಂತಲೂ ಕರೆಯುವರು.ಆ ದಿನ ಅನಿವಾರ್ಯವಾಗಿ ಪೂಜೆಮಾಡ ಲಾಗದಿದ್ದರೆ ಅನಂತರದ ಹುಣ್ಣಿಮೆಯ ತನಕ ಯಾವುದಾದ ರೊಂದು ದಿನ ಪೂಜೆ ಮಾಡಬಹುದು.ಸಂಧ್ಯಾ ಸಮಯದಲ್ಲಿ ಮನೆಯನ್ನು ಸ್ವಚ್ಛಗೊಳಿಸಿ,ತುಳಸಿ ವೃಂದಾವನವನ್ನು ಅಲಂಕರಿಸಬೇಕು.ಮನೆಯ ಅಂಗಳ ಹಾಗೂ ತುಳಸಿ ವೃಂದಾವನಗಳೆದುರು ರಂಗೋಲಿಗಳನ್ನು ಬಿಡಿಸಿ,ಮಾವಿನ ತೋರಣ ಕಟ್ಟಿ ಅಲಂಕರಿಸಬೇಕು.ವೃಂದಾವನವನ್ನು ನೀರಲಿ ತೊಳೆದು ಅರಿಶಿನ, ಕುಂಕುಮ ಹಚ್ಚಿ ಸಜ್ಜು ಮಾಡ ಬೇಕು. ವೃಂದಾವನದಲ್ಲಿ ಶಾಲಗ್ರಾಮ ಅಥವಾ ಶ್ರೀ ಕೃಷ್ಣನ ಪ್ರತಿಮೆ ಮತ್ತು ನೆಲ್ಲಿ ಕೊಂಬು ಇಟ್ಟು ಹೂವಿನಿಂದ ಅಲಂಕರಿಸ ಬೇಕು. ತುಳಸಿ ವೃಂದಾವನದ ಮುನ್ನ ದೀಪಾರಾಧನೆ ಮಾಡ ಬೇಕು. ಶ್ರೀ ಗಂಧ, ಅಕ್ಷತೆ ಅರಿಶಿನ, ಕುಂಕುಮ ಶ್ರೀ ತುಳಸಿಗೆ ಸಮರ್ಪಿಸಿ, ತುಳಸಿ ಸ್ತೋತ್ರ, ಶ್ರೀಹರಿ ಸ್ತೋತ್ರ, ಶ್ರೀ ತುಳಸಿ ಕಥೆಯನ್ನು ಪಠಣ ಮಾಡಿ ಹಣ್ಣು, ಹಾಲು, ಅವಲಕ್ಕಿ ಬೆಲ್ಲ ನೈವೇದ್ಯ ಸಮರ್ಪಿಸಿ,ಮಂಗಳಹಾರತಿ ಕೊಡಬೇಕು. ಘಂಟಾ ನಾದವ ಮಾಡಿ ಮಂಗಳ ನೀರಾಜನವ ಕೊಟ್ಟು ಮಂಗಳ ಗೀತೆಯಿಂದ ಲಕ್ಷ್ಮೀ ನಾರಾಯಣರನ್ನು ಸ್ಮರಣೆ ಮಾಡಬೇಕು. ತುಳಸಿ ಕಲ್ಯಾಣ ಮಂಗಳಕಾರಿ. ತುಳಸಿ ಸ್ತೋತ್ರದಲ್ಲಿ" ನಮಃ ತುಳಸಿ ಸರ್ವಜ್ಞೆ ಪುರುಷೋತ್ತ ಮವಲ್ಲ ಬೇಪಾಹಿಮಾಂ ಸರ್ವ ಪಾಪೇಭ್ಯಃ ಸರ್ವ ಸಂಪತ್ತ್ರ ದಾಯಿಕೆ,"ಮನೆಯಲ್ಲಿ ಪವಿತ್ರತೆ ಹಮ್ಮಿ ಸೌಭಾಗ್ಯ,ಸಿರಿ ಸಂಪದೆ ಐಶ್ವರ್ಯ ಪ್ರಾಪ್ತಿ ಆಗುವುದು. ಲಕ್ಷ್ಮೀನಾರಾಯಣ ಕೃಪಾ ಕಟಾಕ್ಷ ಪ್ರಾಪ್ತಿ ಆಗುವುದು. ಕಾರ್ತಿಕ ಮಾಸದಲ್ಲಿ ತುಳಸಿಯ ದಾನ ಸಹಸ್ರ ಗೋದಾನ ಫಲ ನೀಡುವುದು. ಶಾಲಗ್ರಾಮ ಪೂಜೆ, ತುಳಸಿ ದಳದ ಅರ್ಚನೆ ಮಾಡಿದಾಗ ನಾಲ್ಕು ವೇದ ಪಠನದ ಫಲ ಸಿಗುವುದು "ತುಳಸಿ ಪಾತು ಮಾಂ ನಿತ್ಯಂ ಸರ್ವಾ ಪದ್ಭ್ಯೋಽಪಿ ಸರ್ವದಾ। ಕೀರ್ತಿ ತಾಽಪಿ ಸ್ಮೃತಾ ವಾಽಪಿ ಪವಿತ್ರಯತಿ ಮಾನವಮ್"ತುಳಸಿಯ ದರ್ಶನ, ಸ್ಪರ್ಶನ, ಸ್ಮರಣೆ, ಧಾರಣ. ವಂದನೆ, ಉಪಾಸನೆ, ಮಾಡುವು ದರಿಂದ ಪವಿತ್ರರಾಗಿ ಶ್ರೀಹರಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗು ವರು.ತುಳಸಿ ಮತ್ತು ಶಾಲಗ್ರಾಮ ಕಲ್ಯಾಣ ಮಂಗಳಕರ, ಭಕ್ತಿ ಯಿಂದ ಆಚರಿಸಿದಾಗ ಅಮಂಗಳವೆಲ್ಲ ತೊಲಗಿ ಅಭೀಷ್ಟ ನೆರ ವೇರಿ, ಶ್ರೀಹರಿಯ ಕೃಪಾಕಟಾಕ್ಷ ಪ್ರಾಪ್ತಿಯಾಗುವುದು.ತುಳಸಿ ದೇವಿಗೆ ಜಯಮಂಗಳಂ ಪವಿತ್ರ ಕಲ್ಯಾಣಿಗೆ ಶುಭ ಮಂಗಳ.

ಶ್ರೀ ಕೃಷ್ಣಾರ್ಪಣಮಸ್ತು।



## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನು ಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ

# ಭಕ್ತಿ ಪಂಥದ ದಾಸಶ್ರೇಷ್ಠ - ಸಂತ ಕನಕದಾಸರು

ಶ್ರೀಮತಿ. - ಸುಮಾಚಂದ್ರಶೇಖರ್



ಸಾಂಸ್ಕೃತಿಕ ಅನನ್ಯತೆ, ಜೀವನತತ್ತ್ವ, ಸಾಮಾಜಿಕತೆ, ಧರ್ಮ, ತಾತ್ವಿಕ, ಮಹಿಳೆ, ಆಧ್ಯಾತ್ಮ ಹರಿಭಕ್ತಿ, ರಾಜಕೀಯ ಚಿಂತನೆ. ಹೀಗೆ ಎಲ್ಲವನ್ನು ತನ್ನ ಸಾಹಿತ್ಯದ ವಸ್ತುವಾಗಿಸಿಕೊಂಡಿದ್ದ ಕನಕದಾಸರನ್ನು ನೆನೆಯುವುದರ ಜೊತೆಗೆ ಅವರು ಆಶಿಸಿದ ದಾರಿಯಲ್ಲಿ ನಾವು ಸಾಗಬೇಕು. ಅವರ ಕೀರ್ತನೆಗಳನ್ನು ದಿನ ತಪ್ಪದೆ ಗುಣಗಬೇಕು, ಅನುಸರಿಸಬೇಕು ಅದು ಮಾತ್ರ ಕನಕದಾಸರಿಗೆ ನಾವು ತೋರುವ ಗೌರವ. ಕನಕ ಜಯಂತಿಗೊಂದು ಸಾರ್ಥಕತೆ. ಕನಕದಾಸರ ಸಂದೇಶ, ಆಶಯ ಎಲ್ಲರನ್ನೂ ಮುಟ್ಟಲಿ.

ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಬುದ್ಧ, ಬಸವ, ಜೈನ,ಮೀರಪಂಥ, ನಾಥಪಂಥ, ಕಬೀರ ಪಂಥ, ಚೈತನ್ಯ ಪಂಥ..ಮುಂತಾದವುಗಳೊಂದಿಗೆ 'ದಾಸಪಂಥ'ವು ಒಂದು. ಈ ಪಂಥ ನಮ್ಮ ಸಂಸ್ಕೃತಿಯಲ್ಲಿ ಅಮೂಲ್ಯ ಸ್ಥಾನ ಹೊಂದಿದೆ. ದಾಸರು ತಮ್ಮ ಕೀರ್ತನೆಗಳನ್ನು ಅನುಭಾವಾತ್ಮಕ ನೆಲೆಯಲ್ಲಿ ರಚಿಸಿದ್ದು ಬದುಕಿನ ಸರಳ ಸತ್ಯವನ್ನು ಸಾರುವ ಅವು ಇಂದಿಗೂ ಪ್ರಸ್ತುತವಾಗಿವೆ.ದಾಸರು ಎಂದಾಕ್ಷಣ ನಮ್ಮ ಸಂಸ್ಕೃತಿಗೆ ಬರುವುದು ಪುರಂದರದಾಸರು ಮತ್ತು ಕನಕದಾಸರು.

ಲೋಕಹಿತಕಾರಿಯಾಗಿ ಬಾಳಿದ ಕನಕದಾಸರು ಈ ನಾಡು ಕಂಡ ಒಬ್ಬ ಮೌನ ಹೋರಾಟಗಾರ. ಭಾರತೀಯ ಸಾಮಾಜಿಕ ಸಾಹಿತ್ಯಕ ದೀರ್ಘಪರಂಪೆಯಲ್ಲಿ ಕನ್ನಡ ಹರಿದಾಸಪಂಥದ ಕನಕದಾಸರಿಗೊಂದು ಅನನ್ಯ ಸ್ಥಾನವಿದೆ. ಅಂದಿಗೆ ಕೀಳೆಂಬ ಕುಲದಲ್ಲಿ ಹುಟ್ಟಿ ತಮ್ಮ ಸ್ವಸಾಮರ್ಥ್ಯ, ಸ್ವಪರಿಶ್ರಮ ಮತ್ತು ಸುಜ್ಞಾನದಿಂದ ಸದೃಢವಾದ ವ್ಯಕ್ತಿತ್ವವನ್ನು ಅರ್ಜಿಸಿಕೊಂಡು, ಹಿಂದುಧರ್ಮದಲ್ಲಿ ತುಂಬಿರುವ ಮೇಲು - ಕೀಳೆಂಬ ಮತ-ಮೌಢ್ಯವನ್ನು ಅಕ್ಷರದ ಮೂಲಕ ಪ್ರಶ್ನಿಸುತ್ತ, ಮೇಲರಿಮೆಯ ಜನರಿಗೆ ಪ್ರತಿಸವಾಲು ಹಾಕಿ, ಪ್ರತಿಭಟನೆಯ ಎಳೆಗಳ ನಡುವೆಯೇ ಅಂದಿನ ಸಮಾಜಕ್ಕೆ ಹೊಸ ಚಿಂತನೆಯನ್ನು ನೀಡಿದ್ದೂ ಒಂದು ಪ್ರಮುಖ ಘಟ್ಟವೆಂದೇ ಹೇಳಬಹುದು.ಕತ್ತಿ ಹಿಡಿದು ಕಲಿಯಾಗಿ, ಕಂಟ (ಬರೆಯುವ ಲೇಖನ ಸಾಮಗ್ರಿ) ಹಿಡಿದು ಕವಿಯಾಗಿ, ಹರಿಪಾರಮ್ಯಕ್ಕೆ ಶರಣಾಗಿ ಕನ್ನಡ ಸಾರಸ್ವತಲೋಕದಲ್ಲಿ ತಮಗೊಂದು ಉನ್ನತ ಸ್ಥಾನವನ್ನು ಕಂಡು ಕೊಂಡಿದ್ದಾರೆ. ಗುರು ವ್ಯಾಸರಾಯರ ಮಾರ್ಗದರ್ಶನದೊಂದಿಗೆ ಪುರಂದರದಾಸರ ಸಜ್ಜನ ಸಹ ವಾಸದೊಂದಿಗೆ ಹರಿದಾಸರಾಗಿ ತಮ್ಮ ಬದುಕನ್ನು ರೂಢಿಸಿಕೊಂಡ ಕನಕದಾಸರು, ಆಧ್ಯಾತ್ಮಿಕ ಹಂಬಲದೊಂದಿಗೆ ತಳ ಸಮುದಾಯಗಳ ಬೆಂಬಲಕ್ಕೆ ನಿಂತ ಅಪೂರ್ವ ವ್ಯಕ್ತಿತ್ವದ ಸಿದ್ಧಿಸಾಧಕರು.

## ಆಲಯದಿಂದ ಬಯಲಿಗೆ

ಕನಕದಾಸರ ಬದುಕಿನಲ್ಲಿ ಸಾಮಾನ್ಯವಾಗಿ ಎರಡು ಹಂತಗಳನ್ನು ಗುರುತಿಸಲಾಗುತ್ತದೆ.ಅವೆಂದರೆ-ಮೊದಲು ನಾಯಕನಾಗಿದ್ದವರು, ಅನಂತರ ದಾಸರದದ್ದು. ಬಹುಶಃ ಈ ಎರಡನ್ನು ಅವರ ಬದುಕಿನ ಬಹಿರಂಗದ ವಿವರಗಳು ಮಾತ್ರ ಎಂದು ಗ್ರಹಿಸುವ ಅಗತ್ಯವಿಲ್ಲವೆಂದು ತೋರುತ್ತದೆ. ಅವರ ಆಂತರಿಕ ವಿಕಾಸದಂತೆಯೇ ಅಭಿವ್ಯಕ್ತಿಯಲ್ಲಿನ ಹೊರಳು ದಾರಿಯಾಗಿಯೂ ಇದನ್ನು ಕಾಣಬಹುದು. ಕಟ್ಟಿಕೊಂಡಿದ್ದನ್ನೆಲ್ಲ ಬಿಡಿಸಿಕೊಂಡ ವಿಧಾನವಾಗಿಯೂ ಇದನ್ನು ಕಾಣಬಹುದು. ಕಟ್ಟಿಕೊಂಡಿದ್ದನೆಲ್ಲ ಬಿಡಿಸಿಕೊಂಡ ವಿಧಾನವಾಗಿಯೂ ಇದನ್ನು ಗುರುತಿಸಲು ಸಾಧ್ಯವಿದೆ.ಆದರೆ ಒಂದು ಸಂಗತಿಯೆಂದರೆ ಕನಕರ ಬದುಕಿನಲ್ಲಿ ಏನೇನು ಆಯಿತೋ ಆದಾವುದನ್ನೂ ಅವರು ಪೂರ್ವಯೋಜಿತ ಮಾದರಿಯಲ್ಲಿ ಮಾಡಲಿಲ್ಲವಂತೆ; ಅವರು

ನಂಬಿದ ದೇವನು ಅದನ್ನು ಆ ರೀತಿಯಲ್ಲಿ ಮಾಡಿಸಿದನಂತೆ. ಮಾಡುವುದರಿಂದ ಬಿಡಿಸಿಕೊಂಡು ಮಾಡಿಸಿಕೊಳ್ಳುವ ಸಂಗತಿಗೆ ತನ್ನನ್ನು ಒಪ್ಪಿಸಿಕೊಂಡದ್ದು ಕನಕರು ತುಳಿದ ದಾಸನ ದಾರಿಯೂ ಹೌದು. ಈ ಕಟ್ಟುವಿಕೆ ಮತ್ತು ಬಿಚ್ಚುವಿಕೆಗಳ ಹೆಣಿಗೆಯಲ್ಲೇ ಕನಕರ ಹೆಜ್ಜೆಯ ಗುರುತುಗಳಿವೆ. ಆದರೆ ಕನಕರ ಪಾಲಿಗೆ ಇವೆರಡೂ ಒಂದರೊಡನೆ ಒಂದು ಅತ್ಯಂತ ವ್ಯಾವರ್ತಕವಾದ, ಆತ್ಯಂತಿಕವಾಗಿ ನಿರಪೇಕ್ಷವಾದ ಸಂಗತಿಗಳೇನೂ ಆದಂತೆ ಕಾಣುವುದಿಲ್ಲ.ಆದ್ದರಿಂದಲೇ ಅದನ್ನು ಹೆಣಿಗೆ ಎಂದು ಕರೆದದ್ದು.ಅವೆರಡರ ನಡುವೆ ಗೆರೆ ಕೊರೆಯಲು ಬರುವಂತಿಲ್ಲ. ಆಲಯದಿಂದ ಬಯಲಿಗೆ ಸಾಗುವುದೆಂದರೆ ಆಲಯದೊಳಗೆ ಇರುವ ಬಯಲನ್ನು ಬಯಲಿನೊಳಗೇ ಇರುವ ಆಲಯವನ್ನೂ ವಿವೇಚಿಸಿಕೊಳ್ಳುವ ದಾರಿಯು ಹೌದು.ಈ ಜಿಜ್ಞಾಸೆಗೆ ಕನಕರು ಮುಖಾಮುಖಿಯಾದುದಕ್ಕೆ ಅವರ ಮಾತಿನಲ್ಲೇ ನಿದರ್ಶನಗಳಿವೆ. 'ಬಯಲು ಆಲಯದೊಳಗೋ ಆಲಯವು ಬಯಲೊಳಗೋ ಬಯಲು ಆಲಯವೆರಡು ನಿನ್ನೊಳಗೊ ಹರಿಯೇ ' ಎಂಬ ಉಲಿ ಈ ಹಿನ್ನೆಲೆಯಿಂದಲೂ ಬಂದಿರಲು ಸಾಕು, ಈ ಬಯಲು - ಆಲಯಗಳ ರೂಪಕದಲ್ಲೇ ಕನಕರ ಪ್ರತಿಬಿಂಬವಿದೆ.

ವರ್ಣಭೇದ, ವರ್ಗಭೇದಗಳು ಪ್ರಧಾನವಾಗಿದ್ದ 16 ನೇ ಶತಮಾನದ ಪೂರ್ವಾರ್ಧ ಕಾಲವದು. ಕುರುಬರ ಕುಲದಲ್ಲಿ ಹುಟ್ಟಿ ದರೂ ತನ್ನ ಪರಿಶುದ್ಧ ಭಗವದ್ಭಕ್ತಿ ಹಾಗೂ ಪಾಂಡಿತ್ಯಗಳಿಂದ ಭಾಗವತ ದಾಸಕೂಟದ ಒಬ್ಬ ಶ್ರೇಷ್ಠ ಹರಿದಾಸರೆನಿಸಿದರು. ಅವರ ಬದುಕು ಪಡೆದುಕೊಂಡ ತಿರುವುಗಳನ್ನು ನೋಡಿದರೆ ಯಾರಿಗಾದರೂ ರೋಮಾಂಚನವಾಗುತ್ತದೆ. ಕನಕದಾಸರ ಹುಟ್ಟು ಹೆಸರು "ತಿಮ್ಮಪ್ಪ'' ಬಾಲ್ಯದಲ್ಲೇ ಯುದ್ಧಕಲೆಯಲ್ಲಿ ನಿಪುಣನಾಗಿದ್ದ ತಿಮ್ಮಪ್ಪ ತಂದೆಯ ನಂತರ ಪಾಳೆಯಗಾರನಾಗಿ ತಿಮ್ಮನಾಯಕನಾದ.ತನ್ನ ಪಾಳೆಯಗಾರಿಕೆಯಲ್ಲಿ ತನ್ನೂರಿನ ಭೂಮಿಯಲ್ಲಿ ಅಪಾರ ಸುವರ್ಣನಿಧಿ ದೊರೆತು "ಕನಕನಾಯಕ''ನಾದ ಮುಂದೊಂದು ದಿನ ಯುದ್ಧ ಭೂಮಿಯಲ್ಲಿ ಹರಿಯ ನಾಮಸ್ಮರಣೆ ಮಾಡುತ್ತ ಲೋಕೋದ್ಧಾರಕ್ಕಾಗಿ ಲೋಕ ಸಂಚಾರ ಹೊರಟು''ಕನಕದಾಸ''ರಾದರು.ಮಾನವರನ್ನು ಮಾನವತೆಯ ಮಹೋನ್ನತೆಯತ್ತ ಕರೆದುಕೊಂಡು ಹೋಗಲು ಅಹೋರಾತ್ರಿ ಶ್ರಮಿಸಿದರು.

ಕನಕದಾಸರ ಒಂದು ವೈಶಿಷ್ಟ್ಯವೆಂದರೆ ಭಕ್ತಿಯ ಭಾವ ಪರವಶತೆ.ಅವರು ಭಗವಂತನಿಗೆ ತಮ್ಮ ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದರು.ಕಾಗಿನೆಲೆಯಾದಿ ಕೇಶವನಲ್ಲಿ ಅವರು ಹೀಗೆ ನಿವೇದಿಸಿಕೊಳ್ಳುತ್ತಿದ್ದರು.-"ದೀನನಾನು, ಸಕಲ ಲೋಕಕ್ಕೂ ದಾನಿನೀನು ಅಜ್ಞಾನಿ ನಾನು, ಮಹಾಮಹಿಮನು ನಾನು. ಸುಜ್ಞಾನಮೂರ್ತಿ ನನ್ನನ್ನು ರಕ್ಷಿಸುವ ಹೊಣೆ ನಿನದಯ್ಯ'' ಅವರು ಮುಂದುವರಿದು ಹೇಳುತ್ತಾರೆ.- "ಸಕಲಕ್ಕೂ ನೀನೇ ಕಾರಣವಿರುವಾಗ ಇಲ್ಲಿ ನನ್ನದೆನ್ನುವುದು ಏನು ಇಲ್ಲ. ನನ್ನ ಸುಖ-ದುಃಖಗಳು ನಿನ್ನ ದೇಣಿಗೆ''. ಕನಕದಾಸರು ನಿಜವಾದ ವೈರಾಗ್ಯ ಮೂರ್ತಿಗಳಾಗಿದ್ದರು. ಆಧ್ಯಾತ್ಮಿಕ ಸೆಲೆಯ ಸೀಮ ಪುರುಷರಾಗಿದ್ದರು. ಅವರ ಭಕ್ತಿಗೆ ಮೆಚ್ಚಿ, ಪರಿಶುದ್ಧ ಕರೆಗೆ ಓಗೊಟ್ಟು ಸಾಕ್ಷಾತ್ ಶ್ರೀಕೃಷ್ಣನೇ ಕನಕನತ್ತ ತಿರುಗಿ ದೇವಾಲಯದ ಗೋಡೆ ಒಡೆದು ದರ್ಶನ ನೀಡಿದ್ದು ಅವರ ನಿರ್ಮಲ ಭಕ್ತಿಗೆ ಸಾಕ್ಷಿ!

## ಸ್ವರ್ಗಕ್ಕೆ "ನಾನು" ಹೋದರೆ ಹೋದೇನು

ಮಹಾಜ್ಞಾನಿ ವ್ಯಾಸರಾಯರ ಆಶ್ರಮದ ಪಾಠಶಾಲೆ. ಎಲ್ಲ ಶಿಷ್ಯರು ಗುರು ವ್ಯಾಸರಾಯರಿಗಾಗಿ ಕಾಯುತ್ತಿದ್ದಾರೆ. ಅದೋ, ಗುರುಗಳು ಬಂದೇ ಬಿಟ್ಟರು. ಶಿಷ್ಯರೆದ್ದು ವಂದಿಸಿ ಕುಳಿತರು. ವ್ಯಾಸರಾಯರು ಪಾಠದ ಮಧ್ಯ ಶಿಷ್ಯರನ್ನು ಕೇಳಿದರು. "ನಿಮ್ಮಲ್ಲಿ ಯಾರು ಸ್ವರ್ಗಕ್ಕೆ ಹೋಗಬಲ್ಲಿರಿ?'' ಬಹಳಷ್ಟು ಶಿಷ್ಯಂದಿರು ಅಂದುಕೊಂಡರು 'ಇದೆಂಥ ಪ್ರಶ್ನೆ? ಅಷ್ಟರಲ್ಲಿ ಶಿಷ್ಯನೊಬ್ಬ ಎದ್ದುನಿಂತು ಹೇಳಿದ - "ನಾನು ಹೋದರೆ ಹೋದೇನು''. ಅವನ ಮಾತು ಕೇಳಿ ಎಲ್ಲ ಶಿಷ್ಯರು ನಕ್ಕರು. ಆಗ ಗುರುಗಳು ಹೇಳಿದರು. "ಅರ್ಥಮಾಡಿಕೊಳ್ಳದೇ ನಗುವ ನೀವೆಲ್ಲರೂ ಅಜ್ಞಾನಿಗಳು ನಿಮ್ಮಲ್ಲಿ ಇವನೊಬ್ಬನೇ ಜ್ಞಾನಿ!'' ಆ ಅನುಭಾವಿ ಶಿಷ್ಯರೇ ಕನಕದಾಸರು. ಕನಕರ ಹೇಳಿಕೆಯನ್ನು ಇತರ ಶಿಷ್ಯರಿಗೆ ವಿವರಿಸುತ್ತ ವ್ಯಾಸರಾಯರು ಹೇಳುತ್ತಾರೆ. " ಇಲ್ಲಿ ನಾನು ಎಂದರೆ ಅಹಂಕಾರ! ಅದು ಹೋದರೆ ಮಾತ್ರ ಮನುಷ್ಯ ಸ್ವರ್ಗಕ್ಕೆ ಹೋಗಬಹುದು.''

ಕನ್ನಡದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ಮಹತ್ವದ ಘಟ್ಟವಾದರೆ ಹದಿನಾರನೇ ಶತಮಾನ ಇನ್ನೊಂದು ಮಹತ್ವದ ಘಟ್ಟ.ಈ ಹದಿನಾರನೆಯ ಶತಮಾನದಲ್ಲಿ ಹರಿದಾಸ ಸಾಹಿತ್ಯ ಹೆಚ್ಚು ಜನ ಸಮ್ಮುಖಿವಾಯಿತು.ಈ ಕಾಲದಲ್ಲಿ ಕನ್ನಡ ತನ್ನ ಬಿಗುವಿನ ಹಾದಿಯನ್ನು ತೊರೆಯಿತು.ಜನಸಾಮಾನ್ಯರ ನಾಲಿಗೆಯಲ್ಲಿ ಅರಳುವ, ಹೊರಳುವ ದೇಶೀ ರೂಪದಲ್ಲಿ ಅವತರಿಸಿತು. ಜನಮಾನಸಕ್ಕೆ ಹತ್ತಿರವಾದ ಭಾಷೆ, ಶೈಲಿ, ದರ್ಶನ, ಯೋಚನೆ, ಅಭಿವ್ಯಕ್ತಿಗಳು ಅರಹುದು ಎನ್ನುವಂತೆ ಅಪೂರ್ವವಾಗಿ ಸಾಹಿತ್ಯದ ಸ್ವರೂಪವನ್ನು ಬದಲಿಸಿತು.ಇದಕ್ಕೆ ಹರಿದಾಸ ಪಂಥ ಎನ್ನುವ ಹೆಸರು ಬಂತು. ಈ ಹರಿದಾಸರು ಸಮಾಜ ಶುದ್ಧೀಕರಣದ ಕನಸು ಕಂಡಿದ್ದರು. ಭಾಗವತ ಧರ್ಮ ಮತ್ತು ಮಧ್ವಮತ ತತ್ತ್ವ ಇವರೆಲ್ಲರ ಬದುಕಿನ ಅಡಿಗಲ್ಲಾಗಿತ್ತು. ಕೀರ್ತನೆ ಸಂವಹನ ಮಾಧ್ಯಮವಾಯಿತು.

ಕನಕದಾಸರು ಯಾವುದೊಂದು ಮತದ ಬಂಧನಕ್ಕೂ ಕಟ್ಟು ಬಿದ್ದವರಲ್ಲ. ರಾಮಾನುಜ ಮತ ದೀಕ್ಷೆ, ಮಧ್ವಗುರುವಿನ ಪ್ರೀತಿ, ಜನಸಾಮಾನ್ಯರ ಬಗ್ಗೆ ಅಪಾರ ಕಳಾಕಳಿ... ಹೀಗೆ ಬಾಳಿದ ಸ್ವತಂತ್ರ ಚೇತನರವರು. ಎಲ್ಲಾ ಮತಧರ್ಮಗಳ ಒಳಿತನ್ನು ಸ್ವೀಕರಿಸಿ ಸ್ವತಂತ್ರ ವ್ಯಕ್ತಿತ್ವದ ತೇಜೋಮಹಿಮರವರು. ತಾನು ಅಂತಿದ್ದುದು ಮಾತ್ರವಲ್ಲ,ಇತರರನ್ನು ಇತರರಂತೆ ಇರಲು ಪ್ರೇರೇಪಿಸಿದವರು.ಸಮಾಜದ ಶೋಷಿತ ಬಡವರ್ಗದವರ ಹಿತವನ್ನು ಬಯಸಿದವರು. ಹಾಗಾಗಿಯೇ ಇವರನ್ನು ಬೇಲೂರು ಕೇಶವದಾಸರು ಜಾತಿ-ಜಾತಿಗಳಲ್ಲಿ ತಿರಸ್ಕೃತರಾದವರಿಗೆ ಪುರಸ್ಕಾರ ನೀಡಿದವರು ಕನಕದಾಸರು ಎಂದಿದ್ದಾರೆ. ಸುಲಿಗೆ ಮಾಡುವ ಪ್ರವೃತ್ತಿಯನ್ನು ನಿವಾರಿಸುವಲ್ಲಿ ಕಂಕಣಬದ್ಧರಾಗಿದ್ದರು ಎಂಬುದನ್ನು ಇವರ ರಾಮಧ್ಯಾನ ಚರಿತೆ, ಹಾಗೂ ಕೆಲ ಕೀರ್ತನೆಗಳು ಸಾರಿ ಹೇಳುತ್ತಿವೆ.

## ನಾಡೆಲ್ಲ ಹುಡುಕಿದರೂ ಸಮರಾರಿಲ್ಲ ಕನಕಗೆ

ಮಾನವ ಬದುಕನ್ನು ಸರಳಾತೀಸರಳವಾಗಿ ಕೀರ್ತನೆಗಳ ಮೂಲಕ ಕಟ್ಟಿಕೊಟ್ಟ ದಾಸರ ಮಾತುಗಳ ಹಿಂದಿನ ಅರ್ಥಗಳನ್ನು ಅವು ಇರುವಂತೆಯೇ ಗ್ರಹಿಸುವುದು ಇಂದಿನ ಅಗತ್ಯವಾಗಿದೆ.ನಮ್ಮ ಕಾಲದ ದುರಂತ ಎಂದರೆ; ಕನಕ ದಾಸರಂತಹ ಮಹನೀಯರು ತಮ್ಮ ಅನುಭವದ ಹಿನ್ನೆಲೆಯಲ್ಲಿ ರಚಿಸಿದ ಬರಹಗಳ ಆಧಾರದಲ್ಲಿ ಸಮಾಜವನ್ನು



ಸಂಸ್ಕೃತಿಯನ್ನು, ಅವುಗಳಲ್ಲಿನ ತಾರತಮ್ಯಗಳನ್ನು ಅರ್ಥಮಾಡಿ ಕೊಳ್ಳುತ್ತಿಲ್ಲ. ಬದಲಾಗಿ ಅವುಗಳನ್ನು 18 ಮತ್ತು 19 ನೇ ಶತಮಾನದಲ್ಲಿ ಯೂರೋಪಿಯನ್ನರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ನೆಲದ ಯಾವ ಗ್ರಹಿಕೆಗೂ ಸಂಬಂಧವಿಲ್ಲದಂತೆ ಸೃಷ್ಟಿಸಿದ ಚೌಕಟ್ಟಿನೊಳಗೆ ಗುರುತಿಸಿ ವಿವರಿಸುತ್ತಿದ್ದೇವೆ. ಆ ಮೂಲಕ ನಿಜ ಅರ್ಥದಲ್ಲಿ ಇಂದು ನಾವು ಹೊಸಹತುಶಾಹಿ ನಿರ್ಮಿಸಿದ ಭಾರತದ ಸಮರ್ಥನೆಗೆ ಕನಕಾದಿ ಮಹನೀಯರ ಮಾತುಗಳನ್ನು ಬಳಸುತ್ತಿದ್ದೇವೆ. ಅದನ್ನೇ ಪ್ರಗತಿ ಎಂದು ತಿಳಿದ್ದಿದ್ದೇವೆ. ಶಿಕ್ಷಣದ ಹೆಸರಿನಲ್ಲಿ ಅದನ್ನೇ ಕಲಿಸುತ್ತಿದ್ದೇವೆ. ನಮ್ಮ ಈ ಪ್ರವೃತ್ತಿಯಿಂದ ತಮ್ಮ ಅನುಭವದ ಮೂಲಕ ಜಗತ್ತಿಗೆ ಮಾದರಿಯಾಗಬಹುದಾದ ಚಿಂತನೆಗಳನ್ನು ರಚಿಸಿದ ಕನಕರಂತಹ ಅನುಭಾವಿಗಳು ಜಗತ್ತಿನ ಶ್ರೇಷ್ಠ ವಿದ್ವಾಂಸರ ಪಟ್ಟಿಯಲ್ಲಿ ಕಾಣಲಾಗಿಲ್ಲ ಎಂಬುದು ಒಂದು ನ್ಯೂನ್ಯತೆಯಾದರೆ, ಇನ್ನೊಂದು ಇವತ್ತಿನ ಆರೋಗ್ಯ ಪೂರ್ಣ ಸಮಾಜದ ನಿರೂಪಣೆಗೆ ಬೇಕಾಗಿರುವ ತಿಳಿವನ್ನು ರೂಪಿಸಲು ಕನಕರಂತವರು ಎಷ್ಟು ಮುಖ್ಯರೆಂಬುದನ್ನು ವಿವರಿಸುವ ಮಾದರಿಯ ಕೊರತೆಯನ್ನು ಎದುರಿಸುತ್ತಿದ್ದೇವೆ. ಈ ಎಲ್ಲಾ ವಿಶ್ಲೇಷಣೆಗಳು ನಾವು ಕನಕದಾಸರನ್ನು ನಮ್ಮ ಕಾಲದಲ್ಲಿ ಮರು ಓದು, ಏಕೆ ಮಾಡಬೇಕು ಎಂಬ ಅಂಶಗಳತ್ತ ನಮ್ಮ ಗಮನವನ್ನು ಸೆಳೆಯುತ್ತದೆ.

ಈ ನೆಲೆಯಲ್ಲಿ ನಾವು ಮೊದಲು ಮಾಡಬಹುದಾದ ಕೆಲಸ ಈಗಾಗಲೆ ಸಂಸ್ಕೃತ ಮತ್ತು ಪಶ್ಚಿಮದ ಚೌಕಟ್ಟುಗಳಲ್ಲಿ ಸಿಕ್ಕಿಕೊಂಡಿರುವ ಕನಕರ ಚಿಂತನೆಗಳನ್ನು ಮುಕ್ತಗೊಳಿಸಿ, ಅವರು ರೂಪಿಸಿದ ಸ್ವತಂತ್ರ್ಯ,ಚಿಂತನ ಧಾರೆಯನ್ನು ಗುರುತಿಸುವ / ಓದುವ ಮಾದರಿಗಳನ್ನು ಕಟ್ಟಿಕೊಳ್ಳುವುದು ಆಗಬೇಕಿದೆ. ಆಗ 16 ನೇ ಶತಮಾನದ ಕನಕದಾಸರನ್ನು ಇಂದು ಹೇಗೆ ಓದಬೇಕು,ಎಂಬ ಪ್ರಶ್ನೆಗೆ ಉತ್ತರ ಧಕ್ಕಬಹುದು. ಜತೆಗೆ ಮಾರುಕಟ್ಟೆ ಮತ್ತು ಧಾರ್ಮಿಕ ಮೂಲಭೂತವಾದಗಳಿಂದ ಆಳ್ವಪಡುತ್ತಿರುವ 21 ನೇ ಶತಮಾನದ ಜನಸಮುದಾಯಕ್ಕೆ 'ಆತ್ಮ ಯಾವ ಕುಲ,ಜೀವ ಯಾವ ಕುಲ, ತತ್ವೇಂದ್ರೀಯಗಳ ಕುಲ ಪೇಳಿರಯ್ಯ...' ಎಂಬ ಕನಕ ವಾಣಿಯನ್ನು ಸಮರ್ಥವಾಗಿ ಅನ್ವಯಿಸಿ ವಿವರಿಸಲು ಸಾಧ್ಯವಾಗಬಹುದು. ಈ ದಾರಿ ಆಯ್ದು ಕೊಳ್ಳುವ ಮೂಲಕ ಕನಕ ಜಯಂತಿಯನ್ನು ಅರ್ಥಪೂರ್ಣಗೊಳಿಸಬಹುದು.

ವೇದಾಂತದ ಮರ್ಮವನ್ನು, ಆಧ್ಯಾತ್ಮದ ಗುಟ್ಟನ್ನು ಇಷ್ಟು ಸರಳವಾಗಿ, ಹೃದ್ಯವಾಗಿ ತಿಳಿಸಿಕೊಟ್ಟ ಕನಕದಾಸರು ಒಬ್ಬ ವೇದಾಂತಿಯಷ್ಟೆ ಅಲ್ಲ. ಅವರು ವಿಜಯನಗರ ಅರಸರ ಕಾಲದಲ್ಲಿ ಪಾಳೆಪಟ್ಟಿನ ಒಬ್ಬ ನಾಯಕರು ಆಗಿದ್ದರು. ಅಧಿಕಾರ,ಅಂತಸ್ತು,ಢಣಾಯಕ ಪದವಿಯ ಸುಖ ಲೋಲುಪತೆ,ನಗಾರಿ ನೋಬತ್ತಿಬ ಆಕರ್ಷಣೆ ಮುಂತಾದ ವೈಭವಗಳು ಅವರನ್ನು ಕೈಬೀಸಿ ಕರೆದಿದ್ದವು. ಕೆಲಕಾಲ ಅವನ್ನು ಅವರು ಅನ್ನುಭವಿಸಿಯೂ ಇದ್ದರು.ಆದರೆ ಅವರು ತುಡಿತವಿದ್ದದ್ದು. ಸಮಾಜೋದ್ಧಾರಕ್ಕಾಗಿ ಸಮಾಜದಲ್ಲಿನೊಂದು ಬೆಂದವರ ಹಿತಕ್ಕಾಗಿ. ಅವರಿಗಾಗಿ ಏನಾದರೂ ಮಾಡಬೇಕು ಅನ್ನುವುದಕ್ಕಾಗಿ, ಅದಕ್ಕಾಗಿ ಅವರು ಅಧಿಕಾರ ಅಂತಸ್ತು, ವೈಭವಗಳನ್ನು ತೊರೆದು ಏಕನಾದ ಹಿಡಿದು, ಹೆಗಲಿಗೆ ಕಂಬಳಿ ಹೊದೆದು, ಅವಧೂತನಂತೆ, ಯೋಗಿಯಂತೆ ಮಾರ್ಪಾಡಾಗಿಬಿಟ್ಟರು. ದಾಸ ಶಿರೋಮಣಿ ಎನ್ನಿಸಿಕೊಂಡರು.ಅಪ್ರತಿಮ ವಾಗ್ಗೇಯಕಾರರೆನಿಸಿಕೊಂಡರು. ಕವಿಶ್ರೇಷ್ಠರಾಗಿ ಮೆರೆದರು. ಪ್ರಾಂತದರ್ಶಿ ಎನಿಸಿಕೊಂಡರು. ಮಹಾಮಾನವತಾವಾದಿಯಾಗಿ ನಾಡಿನ ಹಳ್ಳಿಯ ಒಂದೊಂದು ಗುಡಿಸಲಿನಲ್ಲೂ ಪ್ರೀತಿಯ ದೀಪ ಹಚ್ಚಿದರು. ದೀನದಲಿತರಿಗೆ ಸ್ಪಂದಿಸಿದರು. ಮಾನವೀಯತೆ, ಅಂತಃಕರಣಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. ಮನುಷ್ಯನನ್ನು ದೈವತ್ವಕ್ಕೆ ಎತ್ತುವ ಅಮೃತ ಚೇತನವಾದರು.ಕನ್ನಡ ನಾಡಿನಲ್ಲಿ ದಾಸಸಾಹಿತ್ಯಕ್ಕೆ ಅದರದ್ದೇ ಆದ ಒಂದು ವಿಶಿಷ್ಟ ಪರಂಪರೆ ಇದೆ. ಆಧ್ಯಾತ್ಮವನ್ನು ಸಮಾಜ ಮುಖಿಯಾಗಿಸಿದ್ದು, ತನ್ಮೂಲಕ ಜನಸಾಮಾನ್ಯರಲ್ಲಿ ಪರಿವರ್ತನೆ ಪಾವಿತ್ರ್ಯ, ಪ್ರಮಾಣಿಕತೆ ತಂದುಕೊಟ್ಟಿದ್ದು, ಎಲ್ಲದಕ್ಕಿಂತ ಮುಖ್ಯವಾಗಿ ಆಧ್ಯಾತ್ಮವನ್ನು ಪಂಡಿತರ ಕೋಟೆಯಿಂದ, ಮಡಿವಂತರ ಸೆರೆಯಿಂದ ಬಿಡಿಸಿ, ಜನಸಾಮಾನ್ಯರಿಗೂ ತಲುಪಿಸಿದ್ದು ಅವರ ಹೆಗ್ಗಳಿಕೆ. ಕನಕದಾಸರಂತೂ ಗ್ರಾಮೀಣ ಭಾಗದ ಕನ್ನಡ ಜನರ ಆಡುಮಾತಿಗೆ ನಾಲಗೆಯಾಗಿ ಕೆಲಸ ಮಾಡಿದರು. ಪರಿಪಕ್ವ ಜೀವಾನುಭವ,ವಿವೇಕ, ಸಮಚಿತ್ತ, ಜಾನಪದ ಸಿದ್ಧಿ, ಭಾಷೆಯ ಮೇಲಿನ ಹಿಡಿತ ಮೊದಲಾದವುಗಳಿಂದ ದಾಸ ಸಾಹಿತ್ಯಕ್ಕಷ್ಟೇ ಅಲ್ಲ, ಇಡೀ ಕನ್ನಡ ಸಾಹಿತ್ಯ ಲೋಕಕ್ಕೇ ಒಂದು ಹೊಸ ಆಯಾಮವನ್ನು ತಂದು ಕೊಟ್ಟರು.

**ಸರಳ ಮಾರ್ಗ:**

ಸಂತರಾದ ಕನಕರು ತೋರಿದ ಮಾರ್ಗ ಅಸಾಧಾರಣವಲ್ಲ. ಎಲ್ಲರೂ ಅನುಸರಿಸಬಹುದಾದ ಸರಳ ಮಾರ್ಗ ಅದು. ಆದರೆ ನಾವು ಅದನ್ನು ಮರೆತಿದ್ದೇವೆ. ಈ ಭೂಮಿಗೆ ನಾವೆಲ್ಲ ಎಲ್ಲಿಂದಲೋ ಬಂದ ಅತಿಥಿಗಳು. ಎಷ್ಟು ಕಾಲ ಇರುತ್ತೇವೋ ಯಾರಿಗೂ ತಿಳಿದಿಲ್ಲ. ಅನ್ಯರ ಮನೆಗೆ ಹೋದಾಗ ನಾವೆಷ್ಟು ಎಚ್ಚರದಲ್ಲಿ ಇರುತ್ತೇವೋ ಅಷ್ಟೇ ಎಚ್ಚರದಲ್ಲಿ ಇಲ್ಲೂ ಇರಬೇಕಾದದು ನಮ್ಮ ಕರ್ತವ್ಯ ಏಕೆಂದರೆ ಇಲ್ಲಿರುವುದು ಯಾವುದೂ ನಮಗೆ ಯಾರಿಗೂ ಸೇರಿದ್ದಲ್ಲ. ಹೊಟ್ಟೆ ಬಟ್ಟೆಗಳ ಕನಿಷ್ಠ ಅಗತ್ಯ ಪೂರೈಕೆಯೊಂದಿಗೆ ಕಲೆ, ಸಾಹಿತ್ಯ, ಸಂಗೀತಗಳ ಆರಾಧನೆ ಮಾಡುವುದಷ್ಟೇ ನಮ್ಮ ಕೆಲಸ. ಆದರಿಂದ ಸಕಲ ಜೀವಜಗತ್ತಿಗೂ ಕ್ಷೇಮ ಎಂಬುದನ್ನು ತೋರಿಸಿದ್ದಾರೆ ಕನಕರು.

ಭಗವಂತ, ದೇವರು ಎಂದಾಕ್ಷಣ ಅವನನ್ನು ಕಾಣಲು ವೇದ,ಶಾಸ್ತ್ರಗಳ ಅಧ್ಯಯನ,ದ್ವಿಜತ್ವ ಇತ್ಯಾದಿಗಳ ಕಟ್ಟು ಪಾಡುಗಳನ್ನು ತೋರಿಸಲಾಗುತ್ತದೆ. ಆದರೆ, ಅವನನ್ನು ಕಾಣಲು ಅದೆಲ್ಲದರ ಅಗತ್ಯವಿಲ್ಲ ಯಾರು ಬೇಕಾದರೂ ಸಾಧನೆಯ ಮೂಲಕ ಸಾಧಿಸಬಹುದು ಎಂದು ಮಧ್ಯಯುಗದಲ್ಲಿ ಬಾಳಿ ಬದುಕಿನ ಕನಕದಾಸರು ತಮ್ಮ ಬದುಕಿದ ಮೂಲಕ ತೋರಿಸಿ ಕೊಟ್ಟರು. ಭಗವಂತನನ್ನು

ಕಾಣಲು ನಿರ್ದಿಷ್ಟ ಜಾತಿ, ಮತ, ಕುಲಗಳ ಅಗತ್ಯವಿಲ್ಲ.ಸಮಾಜದ ಕೆಳ ಜಾತಿಯೊಂದರಲ್ಲಿ ಹುಟ್ಟಿ, ತನ್ನ ಸ್ವಂತದ ಸಾಧನೆಯಿಂದ ತಿಳುವಳಿಕೆಯ ಅತ್ಯುನ್ನತ ಹಂತವನ್ನು ಮುಟ್ಟಿದವರು ಕನಕದಾಸರು. ಹಾಗೆ ಸಾಧನೆಯನ್ನು ಮಾಡುವಾಗ ಹೆಜ್ಜೆ ಹೆಜ್ಜೆಗೂ ಸಮಾಜದ ವಿರೋಧ ವನ್ನು ಎದುರಿಸಿದರು.ಅದನ್ನೆಲ್ಲ ಮೆಟ್ಟಿ ನಿಂತು ದಾರ್ಶನಿಕರಾದದ್ದು ಸಣ್ಣ ಮಾತಲ್ಲ.

## ಕುಲ ಕುಲವೆನ್ನದಿರಿ

ಹಿಂದಿನ ಎಲ್ಲರಂತೆ ಕನಕದಾಸರು ಬದುಕಿದ್ದ ಕಾಲ, ಹುಟ್ಟಿದ ನಿರ್ದಿಷ್ಟ ಜಾತಿ ಯಾವುದರಲ್ಲೂ ಖಚಿತತೆ ಇಲ್ಲ, ಎಲ್ಲದರಲ್ಲೂ ಗೊಂದಲವಿದೆ. ಕುರುಬರು, ಬೇಡರು, ಆದಿ ಬಣಜಿಗರು ಹೀಗೆ ವಿವಿಧ ಜಾತಿಗಳನ್ನು ಅವರಿಗೆ ಅಂಟಿಸಲಾಗಿದೆ.ಅವರ ಸುತ್ತ ಇನ್ನೂ ಅನೇಕ ದಂತ ಕಥೆಗಳು ಹುಟ್ಟಿಕೊಂಡಿವೆ. ಆದರಿಂದಾಗಿ ಅವರ ಕುರಿತು ಇದಮಿತ್ಥಂ ಎಂದು ಹೇಳುವುದು ಇನ್ನಷ್ಟು ಜಟಿಲವಾಗಿದೆ. ಇವೆಲ್ಲವುಗಳ ಮಧ್ಯೆ ಅವರು ರಚಿಸಿದ ಕೃತಿಗಳು ನಮ್ಮ ಕಾಲದವರೆಗೆ ಉಳಿದುಕೊಂಡು ಬಂದದ್ದು ನಮ್ಮ ಭಾಗ್ಯ. ಕನ್ನಡ ಸಾರಸತ್ವ ಲೋಕಕ್ಕೆ ಕೀರ್ತನೆಗಳನ್ನಲ್ಲದೆ ಸಾಂಗತ್ಯದಲ್ಲಿ 'ಮೋಹನ ತರಂಗಿಣಿ', ಭಾಮಿನಿ ಷಟ್ಪದಿಯಲ್ಲಿ 'ನಳಚರಿತ್ರೆ', ರಾಮಾಧ್ಯಾನ ಚರಿತ್ರೆ, ಹರಿಭಕ್ತಿ ಸಾರ ಎಂಬ ಕಾವ್ಯಗಳನ್ನು ರಚಿಸಿದ್ದಾರೆ. 'ನೃಸಿಂಹಸ್ತವ' ಎಂಬ ಇನ್ನೊಂದು ಕಾವ್ಯವನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ ಎಂದು ಹೇಳಲಾಗುತ್ತದೆ ಯಾದರೂ ಅದಿನ್ನೂ ದೊರೆತ್ತಿಲ್ಲ.ಇವುಗಳನ್ನೆಲ್ಲ ನೋಡಿದಾಗ ಮತ್ತು ಅದರಿಂದಾಗಿ ವಾಸ್ತವದಲ್ಲಿ ಅವರು ಏರಿದ ಮಟ್ಟವನ್ನು ಗಮನಿಸಿದಾಗ ಉಳಿದೆಲ್ಲ,ಅವರ ಜಾತಿ ಮತ ಕುಲಗಳು, ದಂತ ಕಥೆಗಳು ಗೌಣ ವಾಗುತ್ತವೆ. ಜಾತಿಯನ್ನು ಮೀರಿ ಬೆಳೆದ ವ್ಯಕ್ತಿತ್ವ ಎಂಬುದು ಮನದಟ್ಟಾ ಗುತ್ತದೆ.

## ಮೌಢ್ಯಾಚಾರಣೆಗೆ ವಿರೋಧ

ಸಮಾಜವನ್ನು ಅವರು ತೀರ ಹತ್ತಿರದಿಂದ ಕಂಡಿದ್ದರಿಂದ ಸಮಾಜದಲ್ಲಿರುವ ಜಾತಿಯತೆ, ಮೇಲು - ಕೀಳು, ಬಡವ ಬಲ್ಲಿದರೆಂಬ ಭೇದಭಾವ ಹಾಗೂ ಅನೇಕ ಮೌಢ್ಯಾಚರಣೆಗಳನ್ನು ವಿರೋಧಿಸು ತ್ತಾರೆ. ಹಿಂದೆ ದಣ್ಣಾಯಕರಾಗಿದ್ದ ಅವರು ಮುಂದೆ ಹರಿದಾಸರಾದರೂ ಸಂದರ್ಭ ಬಂದಾಗ ಅವರ ಧೈರ್ಯ ಸಾಹಸ ಪ್ರವೃತ್ತಿಯ ಹೃದಯ ಎಂತಹ ಸಂದರ್ಭಗಳು ಎದುರಾದರೂ ಅವುಗಳನ್ನು ಖಂಡಿಸಿ, ಆರ್ಭಟಿಸುತ್ತ ಮೇಲೆದ್ದ ಅವರ ಸಾಹಿತ್ಯದ ಸಾಲುಗಳು ಸಾರ್ವತ್ರಿಕ ಸತ್ಯವಾಗಿವೆ.

ಒಡೆದ ಮಡಿಕೆ ತಂದು ಹಿಡಿದು ನಾಮವ ಮಾಡು।
ಕೊಡುವೆ ನೀ ಕಾಸಿಗೆ ಒಂದೊಂದನು।
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿ ಸೆಟ್ಟಿ

ಎಂದು ಹಾಡುತ್ತಾ ತಿರುಪತಿ ತಿಮ್ಮಪ್ಪನನ್ನು ನಿಂದಾ ಸ್ತುತಿಯ ಮೂಲಕ ಸ್ಮರಿಸುತ್ತಾರೆ. ಇನ್ನೊಂದು ಕೀರ್ತನೆಯಲ್ಲಿ 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ, ತೋರು ಈ ಧರೆಯೊಳಗೆ ಒಬ್ಬರನು ಕಾಣೆ ಕೃಷ್ಣ' ಎಂದು ಭಗವಂತನನ್ನು ಕೂಡ ಪ್ರಶ್ನಿಸುತ್ತಾರೆ. ಭಗವಂತನನ್ನೇ ಪ್ರಶ್ನಿಸಿದ ಕನಕದಾಸರು ಸಮಾಜದಲ್ಲಿರುವ ಅಂಕು - ಡೊಂಕು, ಮೌಢ್ಯ ಮತಾಚರಣೆಗಳನ್ನು ಕಂಡು ಸಹಿಸಲಾರದೆ ನೇರವಾಗಿ ಖಂಡಿಸುತ್ತಾರೆ.

ಮಂತ್ರಾಕ್ಷತೆಯನ್ನು ಕೈಗೆ ಕೊಟ್ಟು! ಮೋಕ್ಷವನ್ನು
ಹಾರೈಸುವಿರಿ। ಮಂತ್ರವೆಲ್ಲೊ ಅಕ್ಷತೆಯೆಲ್ಲೋ।
ಮೋಕ್ಷವೆಲ್ಲೋ ಮರ್ತ್ಯವೆಲ್ಲೋ । ಹೇಳುವವನು
ಅವಿವೇಕಿ । ಕೇಳುವವನು ಅಜ್ಞಾನಿ ॥

ಎನ್ನುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಪ್ರತಿಭಟಿಸುತ್ತಿರುವ ಮೌಢ್ಯವನ್ನು ಹಾಗೂ ಮೌಢ್ಯ ಬಿತ್ತುವವರನ್ನು ಹದಿನಾರನೇ ಶತಮಾನ ದಲ್ಲಿಯೇ ಕನಕದಾಸರು ವಿರೋಧಿಸುತ್ತಾರೆ. ಆ ಮೂಲಕ ಸಮಾಜವನ್ನು ಪರಿವರ್ತನೆ ಮಾಡಲು ತಮ್ಮ ಸಾಹಿತ್ಯವೆಂಬ ಕ್ರಾಂತಿ ಖಡ್ಗವನ್ನು ಬೀಸು ತ್ತಾರೆ.

ಸತ್ಯನೊಬ್ಬಮಗ ಶಾಂತನೊಬ್ಬ ಮಗದು -
ವೃತ್ತಿ ನಿಗ್ರಹನೊಬ್ಬ ಸಮಚಿತ್ತನೊಬ್ಬನೂ।
ಉತ್ತಮರೀ ನಾಲ್ಕು ಮಕ್ಕಳಿದ್ದ ಮೇಲೆ।
ಹೆತ್ತರೇನು ಇನ್ನು ಹೆರದಿದ್ದರೇನಯ್ಯ?

ಅಪುತ್ರಸ್ಯ ಗತಿರ್ನಾಸ್ತಿ (ಪುತ್ರನಿಲ್ಲದೆ ಗತಿಯಿಲ್ಲ) ಎಂಬ ಸಾಂಪ್ರ ದಾಯಿಕ ನಂಬಿಕೆಯನ್ನು ಕನಕದಾಸರು ಮಾರ್ಮಿಕವಾಗಿ ವಿರೋಧಿಸುವ ವರಲ್ಲದೆ ಸ್ತ್ರೀಪರವಾದ ನಿಲುವನ್ನು ವ್ಯಕ್ತಪಡಿಸುತ್ತಾರೆ.

## ಕನಕವೃಷ್ಟಿ

ಕನಕದಾಸರು ಈ ನಾಡು ಕಂಡ ಶ್ರೇಷ್ಠ ದಾಸರಲ್ಲಿ ಒಬ್ಬರು. ಜೀವನಾನುಭವದ ಅಮೃತ, ಲೋಕಾನುಭವದ ಸತ್ಯವನ್ನು ಕಾವ್ಯದ ಮೂಲಕ ಜನಸಾಮಾನ್ಯರಿಗೆ ಉಣಬಡಿಸಿ ಧನ್ಯತೆ ಮೂಡಿಸಿದವರು, ಪಂಡಿತ್ತೋತಮರಲ್ಲಿ ಸಖೇದಾಶ್ಚರ್ಯ ತಂದವರು. 'ಕುಲಕುಲವೆಂದು ಹೊಡೆದಾಡದಿರಿ, ಈ ಕುಲದ ನೆಲದ ಮಹಿಮೆ ಏನಾದರು ಬಲ್ಲೀರಾ ಬಲ್ಲೀರಾ'ಅಂತ ಜಾತಿ ವಾದಿಗಳನ್ನು ಜರಿದು ಜಾತ್ಯಾತೀತ ಭಾವ ಸ್ಫುರಿಸುವಂತೆ ಮಾಡಿದವರು. ಕನಕದಾಸರು ಕನ್ನಡ ಭಾಷೆಯನ್ನು ಬಳಸಿದ ಪರಿ ಅನನ್ಯ.

ಕನಕದಾಸರು ಅಧ್ಯಾತ್ಮ ಸಾಧನೆಯಲ್ಲಿ ಆತ್ಮಸಾಕ್ಷಾತ್ಕಾರ ಕಂಡ ಅಗ್ರಪಂಕ್ತಿಯ ಕೀರ್ತನಕಾರರು. ಭೇದರಹಿತ ತತ್ವೋಪಾಸಕರಾಗಿ ಕಾವ್ಯ ಮಾರ್ಗದ ಕಡೆಗೆ ಸಾಗಿದ ಮಾನವೀಯತೆಯ ಮಹಾಪುರುಷರು ಅವರು. ಚಿನ್ನ ಮಣ್ಣಿನಲ್ಲಿ, ಮುತ್ತು ಚಿಪ್ಪಿನಲ್ಲಿ, ತಾವರೆ ಕೆಸರಿನಲ್ಲಿ, ಕಸ್ತೂರಿ ಮೃಗದ ನಾಭಿಯಲ್ಲಿ ಹುಟ್ಟುತ್ತದೆ ಎಂದು ಮೇಲೆ ಜನ್ಮಸ್ಥಾನದ ಗಣನೆ ಏಕೆ? ಹರಿವ ನೀರಂಗೆ ಉರಿವ ಸೂರ್ಯಂಗೆ ಬೀಸುವ ತಂಗಾಳಿಗೆ, ಸರ್ವಸಾಕ್ಷಿ ಅಗ್ನಿಗೆ ಜಾತಿಯಿಲ್ಲ ಎಂದ ಮೇಲೆ ನಡುವೆ ಎತ್ತಣ ಜಾತಿ? ಅನ್ನುತ್ತಲೇ ಸಮಾ ನತೆಯ ಬೆಳಕಿಗಾಗಿ ಹಗಲಿರುಳು ಹಂಬಲಿಸಿದ ಮಹಾಮೂರ್ತಿ ಅವರು. ಕಾವ್ಯಾಂತರಾರ್ಥದ ಶ್ರೀಮಂತಿಕೆಯನ್ನು ಕೀರ್ತನರಚನೆಯಲ್ಲಿ ಶೃಂಗಾರ ಗೊಳಿಸಿದ ಅವರ ಅಸೀಮ ಶಕ್ತಿಯನ್ನು ಎಷ್ಟು ಕೊಂಡಾಡಿದರೂ ಸಾಲದು. ಅವರದು ಕನಕ ಕನ್ನಡ "ವರವ ಕೊಡು ಎನಗೆ ವಾಗ್ದೇವಿ" ಅನ್ನುವ ಪ್ರಾರ್ಥನಾ ಸ್ತುತಿಯ ಕೊನೆಯಲ್ಲಿ "ಅವಿರಳಪುರಿ ಕಾಗಿನೆಲೆಯಾದಿ ಕೇಶವನ ಅಸುತನಿಗೆ ಸನ್ನುತ ರಾಣಿವಾಸ" ಎಂದು ವರ್ಣಿಸುವಾಗ ಶ್ರೀ

ಹರಿಯ ಸುತ ಬ್ರಹ್ಮ ಅವನ ರಾಣಿ ಶಾರದೆ ಎಂಬ ಅರ್ಥ ದರಿವಾದಾಗ ಆಗುವ ಕಾವ್ಯಾನಂದ ಹೇಳತೀರದು.ಹಾಗೆಯೇ ಅವರ ಇನ್ನೊಂದು ಪ್ರಾರ್ಥನೆಯಲ್ಲಿ "ನಮ್ಮಮ್ಮಾ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹ ನಾರಮ್ಮಾ" ಎಂದು ಪ್ರಶ್ನಿಸುತ್ತಲೇ ಕಮ್ಮಗೋಲನ ವೈರಿ ಸುತನಾದ ಸೊಂಡಿಲ ಹೆಮ್ಮಯ್ಯ ಗಣನಾಥನೆ ಎಂದು ಉತ್ತರಿಸುತ್ತಾರೆ. ಪರಶಿವನ ಸುತನಾದ ಹೆಮ್ಮೆಯ ಗಣಪ ಎಂಬ ಭಾವಾರ್ಥ ಹೊಳೆದೊಡನೆ ಆಗುವ ಸಂತೋಷ ಅಷ್ಟಿಷ್ಟಲ್ಲ.

"ದಾಸಗೊಲಿದು ತೇರನೇರಿ ತೇಜಿಪಿಡಿದು ನಡೆಸಿದಾತ ಈತನೀಗ ವಾಸುದೇವ" ಅನ್ನುತ್ತಾ ಭಗವಂತನ ಅನಂತ ಶಕ್ತಿಯನ್ನು ಶ್ರೀಮಠದಲ್ಲಿದ್ದ ಶ್ರೇಣಿಕರಿಗೆ ಪರಿಚಯಿಸುತ್ತಾರೆ. ಕನಕದಾಸರ ಅಮೃತ ಲೇಖನಿಯಿಂದ ಮೂಡಿಬಂದ, ಬಂದಿರುವ ಈ ದೇವರನಾಮದಲ್ಲಿ ತನ್ನ ಆರಾಧ್ಯ ದೈವ ಆದಿಕೇಶ ವನ ವಿವಿಧ ಶಕ್ತಿಗಳು ಗೋಚರಿಸುತ್ತವೆ. ಈ ನಿರ್ದಿಷ್ಟ ಭಾವವನ್ನು ನಾಲ್ಕು ಪ್ರಸಂಗಗಳಿಂದ ವಿಷದೀಕರಿಸಿದ ಸಂತೃಪ್ತ ಭಾವ ಅವರದಾಗಿದೆ.

"ಊರಿಗೆ ಬಂದರೆ ದಾಸಯ್ಯ
ಕೋಲು ಕೊಳಲು ಕೈಲಿ ದಾಸಯ್ಯ
ನೀ ಕಲ್ಲಿಗೆ ವರವಿತ್ತ ದಾಸಯ,
ಮಲ್ಲನ ಮರ್ಧಿಸಿ ಮಾವನ
ಮುಡುಹಿದ ನೀಲಮೇಘಶ್ಯಾಮ ದಾಸಯ್ಯ'

ಅನ್ನುವ ತಮ್ಮ ಅಪೂರ್ವ ದೇಸಿತನದಿಂದಲೇ ಭಗವಂತನ ಕಲ್ಯಾಣ ಗುಣಗಳನ್ನು, ಅವನ ಲೀಲಾ ವಿನೋದಗಳನ್ನು ಹಾಡುತ್ತಾ "ನಮ್ಮ ಆದಿಕೇಶವ ದಾಸಯ್ಯ" ಎಂದು ಕೀರ್ತನೆಯನ್ನು ಮುಗಿಸಿ, ಪರಮಾತ್ಮನ ಹೊಗಳಿಗೆ ಎಂದೆಂದಿಗೂ ಬತ್ತದಂತೆ ಎಚ್ಚರಿಸಿದ್ದಾರೆ. ಇನ್ನೊಂದು ಕೃತಿಯಲ್ಲಿ ತಿರುಪತಿಯ ವೆಂಕಟರಮಣನನ್ನು ಪರಿಹಾಸ್ಯ ಮಾಡುತ್ತಾ ತಿರುಪತಿಯಲ್ಲೆಲ್ಲಾ ಸಂಚರಿಸುತ್ತಲೇ ಬಂದೆವಯ್ಯಾ ಗೋವಿಂದ ಶೆಟ್ಟಿ ನಿನ್ನ ಕಲ್ಯಾಣೋತ್ಸವವನ್ನು ನೋಡಲು ಬಂದೆ" ಅನ್ನುತ್ತಲೇ "ಹೊಡೆದ ಮಡಕೆಯನ್ನೆಲ್ಲಾ ಅರೆದು ನಾಮವ ಮಾಡಿ ಕೊಡುವೆ ನೀ ಕಾಸಿಗೆ ಒಂದೊಂದನು ಒಡಲು ತುಂಬಿ ಮಿಕ್ಕ ಅನ್ನ ಮಾರಿ ಒಡವೆಯ ಗಳಿಸುವೆ ಲೋಭಿ ಶೆಟ್ಟಿ" ಎಂದು ವಿಡಂಬಿಸುತ್ತಲೇ ಆದಿ ಕೇಶವನ ಅಂತಃಶಕ್ತಿಯ ಅಂತರಂಗ ದರ್ಶನ ಮಾಡಿ ಸುತ್ತಾ ರೂಪಕ ಚಕ್ರವರ್ತಿಯಾಗುತ್ತಾರೆ.

ಕವಿ ಶರೀರ ನಶ್ವರ, ಆದರೆ ಕವಿ ಅಮರ, ಇದಕ್ಕೆ ಕನಕದಾಸರೇ ಸಾಕ್ಷಿ ಮೋಹನ ತರಂಗಿಣಿ, ರಾಮಧ್ಯಾನ ಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ ಲೋಕಕ್ಕೆ ಸಮರ್ಪಿಸಿದ ಮಹಿಮಾತೀತರು. ಕನಕದಾಸರು ಭಾಮಿನಿ ಷಟ್ಪದಿಯಲ್ಲಿ ರಚಿಸಿರುವ ಈ ಕಾವ್ಯ ಶಿಖರಗಳು ಎಂದೆಂದಿಗೂ ಅಜರಾಮರ. "ಗಿಳಿಯ ಮರಿಯನ್ನು ತಂದು ಪಂಜರದೊಳಗೆ ಪೋಷಿಸಿ ಕಲಿಸಿ ಮೃದು ನುಡಿಗಳನು ಲಾಲಿಸಿ ಕೇಳು ಪರಿಣಿತರಂತೆ" ಅನ್ನುವ ಹರಿಭಕ್ತಿ ಸಾರದ ಅವರ ವಿನೀತ ಭಾವ. "ಮರುಗಲಿನ್ನೇಕರಸ ಬಿಡು ವಿಧಿ ಬರೆದ ಬರಹವ ತಪ್ಪಿಸಲು ಹರಿಹರ ವಿರಂಚಾದ್ಯರಿಗೆ ಸಾಧ್ಯವೇ" ಅನ್ನುತ್ತಾ ಗಂಡನನ್ನು ಸಂತೈಸುವ ನಳ ಚರಿತ್ರೆಯ ದಮಯಂತಿಯ ಮಾತುಗಳು ಅನುದಿನ ಅನುಭವಿಸಿರುವ ಸಂಕಟಗಳಿಗೊಂದು ಧೈರ್ಯದ ದಾರಿದೀಪವಾಗಿ ಇಂದಿಗೂ ಕಾವ್ಯದಲ್ಲಿ ರಾರಾಜಿಸುತ್ತಿರುವ ಈ ಸಾಲುಗಳನ್ನು ಮರೆಯಲು ಸಾಧ್ಯವೇ? "ಸತ್ಯಹೀನನು ಬಡವರನು ಕಣ್ಣೆತ್ತಿ ನೋಡೆನು ಧನಾಢ್ಯರನು ಬೆಂಬತ್ತಿ ನಡೆಯುವದಪೇಕ್ಷೆ ನಿನ್ನದು ಹೆತ್ತ ಬಾಣಂತಿಯರಿಗೆ ರೋಗಿಗೆ ಪತ್ಯ ನೀನಹೆ ಹೆಣದ ಬಾಯಿಗೆ ತುತ್ತು ನೀನು ನಿನ್ನ ನಿರರ್ಥಕ" ಎಂದು ರಾಗಿ ಮತ್ತು ಬತ್ತದ ನಡುವೆ ಜಗಳ ತಾರಕಕ್ಕೇರಿ ಬಡವ ಬಲ್ಲಿದ, ಮೇಲು - ಕೀಳು ಈ ತಾರತಮ್ಯದ ಪರಿಹಾರ ಹೇಗೆ ಎಂಬುದು ಕನಕದಾಸರ "ಶ್ರೀರಾಮಧ್ಯಾನ ಚರಿತ್ರೆ"ಯಲ್ಲಿ ನಿರೂಪಿತ ವಾಗಿದೆ.ಧಾನ್ಯಗಳನ್ನು ಕಾವ್ಯದ ಪ್ರತಿಮೆಗಳನ್ನಾಗಿ ಮಾಡಿರುವ ಕನಕ ದಾಸರ ಪ್ರೌಢಿಮೆ ಅನನ್ಯವಾದುದು. ಸಾಹಿತ್ಯಲೋಕದಲ್ಲಿ ಇದೊಂದು ಅಪೂರ್ವ ಪ್ರಸಂಗ ಎನ್ನಬಹುದಾಗಿದೆ.

ಮೋಹನ ತರಂಗಿಣಿ ಕನಕದಾಸರು ಶ್ರೀ ಕೃಷ್ಣನಿಗೆ ಎತ್ತಿದ ಆರತಿಯಂತೆ ಕಾಣುತ್ತಿದೆ. ಶೃಂಗಾರ, ಭಕ್ತಿ, ಪ್ರೇಮಗಳು ಪರಸ್ಪರ ಏಕವಾಗಿ ನಡೆಯುತ್ತಿರುವಂತೆ ಭೌತಿಕ ಹಾಗೂ ಲೌಕಿಕಗಳು ಒಂದ ನ್ನೊಂದು ಕೈಹಿಡಿದು ಕೊಂಡಿವೆ ಅನ್ನುವುದು ಈ ಕಾವ್ಯಾನು ಸಂಧಾನದ ಮುಖೇನ ಕಂಡು ಬರುತ್ತಿವೆ.

ಕೃಷ್ಣ ರುಕ್ಮಿಣಿಯರು, ಕಂದರ್ಪ ರತಿ, ಅನಿರುದ್ಧ ಉಷೆ ಈ ಪ್ರೇಮಕಥನಗಳು ಕಾವ್ಯವಾಗಿ ಅರಳಿರುವ ಪರಿ ಅದ್ಭುತ.ಇದು ಕನಕದಾಸರ ತಾರುಣ್ಯದಲ್ಲಿ ಸೃಷ್ಟಿಯಾಗಿರಬಹುದಾದ ಕವಿಯ ಹೆಂಡತಿ ಜೀವಂತವಾಗಿದ್ದಾಗ ರಚನೆಯಾಗಬಹುದೆಂದು ಊಹಿಸಬಹುದಾಗಿದೆ. ಹೀಗಿದ್ದರೂ ಯಾರೂ ಅನುಭವಿಸಲಾಗದ ನಿಂದೆ, ಅಪಮಾನ, ಕುಹಕ ಗಳನ್ನು ಕನಕದಾಸರು ಅನುಭವಿಸಬೇಕಾಗಿ ಬಂದದ್ದು ವಿಪರ್ಯಾಸವೇ ಸರಿ. ಕೋಣಮಂತ್ರದಿಂದ ಪ್ರಾರಂಭವಾದ ಅವರ ಸತ್ವ ಪರೀಕ್ಷೆ, ಬಾಳೆ ಹಣ್ಣಿನ ಪ್ರಸಂಗ, ಗುರುಗಳ ಮುಷ್ಟಿಯಲ್ಲಿ ಮಂತ್ರಾಕ್ಷತೆಯನ್ನು ಗುರುತಿಸಿದ್ದು, ಶುಕನ ಸರ್ಪಗಳ ರೂಪದಲ್ಲಿಯೇ ಭಗವಂತ ಗೋಚರಿ ಸುತ್ತಾನೆ ಎಂದು ಸಾಕ್ಷೀಕರಿಸಿದ್ದು ಕೊನೆಗೆ ಉಡುಪಿಯ ಕೃಷ್ಣ ದಾಸರಿರುವ ಕಡೆಗೆ ಮುಖ ಮಾಡಿದ್ದು, ಭಕ್ತಿ ಪರವಶತೆಯಿಂದ "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ" ಎಂದು ಮನತುಂಬಿ ಮಾರ್ಮಿಕವಾಗಿ ಹಾಡಿದ್ದು ನಿತ್ಯಸತ್ಯವೇ ಆಗಿದೆ.

ಬೀಜವೃಕ್ಷದೊಳಾಯ್ತು, ವೃಕ್ಷಬೀಜವಾರಿಂದಾಯ್ತು, ಈ ಬೀಜ ವೃಕ್ಷ ನ್ಯಾಯವ ಭೇದಿಸುವರಾರಿನ್ನು ಅನ್ನುವ ತರ್ಕವನ್ನು ತತ್ವಮುಖಿಗಳಿಗೆ ಒಡ್ಡುತ್ತಲೇ "ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ ನೀ ದೇಹದೊಳಗೋ ದೇಹ ನಿನ್ನೊಳಗೋ, ಬಯಲು ಆಲಯ, ಬುದ್ಧಿ ಸಕ್ಕರೆಯ ಸವಿ, ಜಿಹ್ವೆ, ಮನಸ್ಸು ಕುಸುಮದಲ್ಲಿನ ಗಂಧ ಇವೆಲ್ಲವೋ ಭಗವಂತನಿಂದಾದ ದೈವಕ್ಕೆ ಮಾತ್ರ ಎಂಬುದನ್ನು ಕನಕದಾಸರು ಕೀರ್ತನೆ ಯಲ್ಲಿ ಪ್ರತಿಪಾದಿಸಿರುವ ರೀತಿ ಅಸದೃಶ್ಯವಾದುದು."ಡೊಂಕುಬಾಲದ ನಾಯಕರೇ ನೀವೇನು ಊಟದ ಮಾಡಿದಿರಿ"ಎಂದು ಕೇಳುತ್ತಲೇ ಕನಕ ಕುಟ್ಟೊ ಜಾಗಕ್ಕೆ ಇಣುಕು ಹಾಕುವುದು, ಹುಗ್ಗಿ ಮಾಡುವ ಕಡೆಗೇ ಹೋಗಿ ತಗ್ಗಿ ಬಗ್ಗಿ ನೋಡುತ್ತಾ ಒನಕೆಯಲ್ಲಿ ಸೌಟಿನಲ್ಲಿ ಹೊಡೆಸಿಕೊಂಡು ನರಳುವ ಪರಿಯನ್ನು ಮಾನವನ ಶ್ವಾನ ಸ್ವಭಾವವನ್ನು ದಾಸರು ಯಥವತ್ತಾಗಿ ಚಿತ್ರಿಸುತ್ತಲೇ ಅಂದಿನ ವಿಡಂಬನೆಗೊಳಪಡಿಸುತ್ತಾರೆ.



# ಚರಿತ್ರೆಯಲ್ಲಿ ತಿರುಚಾನೂರು ಕ್ಷೇತ್ರ

- ತೆಲುಗು ಮೂಲ. ಐ.ಎಲ್.ಎನ್. ಚಂದ್ರಶೇಖರರಾವು
ಅನುವಾದ : ಸೂರ್ಯವಂಶಿ

ಕಲಿಯುಗದ ಪ್ರತ್ಯಕ್ಷ ದೈವ ಶ್ರೀ ವೇಂಕಟೇಶ್ವರ ಸ್ವಾಮಿ. ಆತನ ಹೃದಯ ಸಾಮಾಜ್ಞಿ ಶ್ರೀ ಪದ್ಮಾವತೀದೇವಿ. ಶ್ರೀ ವೇಂಕಟೇಶ್ವರಸ್ವಾಮಿ ಆಪದ್ಬಾಂಧವನೆಂದೂ, ಅನಾಥ ರಕ್ಷಕನೆಂದೂ, ಭಕ್ತ ಜನಪ್ರಿಯನೆಂದೂ ಹೆಸರುಗಳಿಸಿದರೆ ಆತನ ದೇವಿಯಾದ ಪದ್ಮಾವತೀ ತಾಯಿಯಂತೆ ಸಲಹುವ, ಭಕ್ತರ ಕಲ್ಪವಲ್ಲಿಯಾಗಿ, ಕರುಣಾಮಯಿಯಾಗಿ, ಪ್ರೇಮ, ವಾತ್ಸಲ್ಯಗಳ ಗಣಿಯಾಗಿ ಹೆಸರುಗಳಿಸಿ ಅಸಂಖ್ಯಾತ ಭಕ್ತರ ಆರಾಧನೆಯನ್ನು ಸ್ವೀಕರಿಸುತ್ತಿದ್ದಾಳೆ. ಅಂತಹಾ ಶ್ರೀ ಪದ್ಮಾವತಿ ಅಮ್ಮನವರು ನೆಲೆಸಿರುವ ದಿವ್ಯಕ್ಷೇತ್ರ-'ತಿರುಚಾನೂರು'.

ತಿರುಮಲೆ ಎಷ್ಟು ಪವಿತ್ರವೋ----ಅಷ್ಟೇ ಪವಿತ್ರತೆಯನ್ನು, ವೈಭವವನ್ನು ಸ್ವಂತ ಪಡಿಸಿಕೊಂಡಿರುವ ತಿರುಚಾನೂರು,ಚಿತ್ತೂರು ಜಿಲ್ಲೆಯಲ್ಲಿನ ತಿರುಪತಿ ಪಟ್ಟಣಕ್ಕೆ 5 ಕಿಲೋ ಮೀಟರ್ ದೂರವಿದೆ.

ಪೂರ್ವಕಾಲದಲ್ಲಿ ಶ್ರೀ ಶುಕಮಹರ್ಷಿ ಈ ಪ್ರಾಂತದಲ್ಲಿ ನಿವಸಿಸಿದ್ದರಿಂದ ಈ ಪ್ರಾಂತಕ್ಕೆ 'ಶ್ರೀ ಶುಕನೂರು' ಎಂಬ ಹೆಸರು ಬಂದಿದೆ. ಶ್ರೀಶುಕನೂರು ಎನ್ನುವ ಹೆಸರು ತಮಿಳಿನಲ್ಲಿ 'ತಿರುಚ್ಚಗನೂರು' ಎಂದು ಕರೆಯಲ್ಪಟ್ಟು, ನಂತರದ ಕಾಲದಲ್ಲಿ ಬಳಕೆಯಲ್ಲಿ 'ತಿರುಚಾನೂರು' ಆಗಿದೆ. ತಿರುಚಾನೂರು ಕ್ಷೇತ್ರಕ್ಕೆ 'ಅಲಿಮೇಲುಮಂಗಾಪುರ', 'ಅಲಮೇಲು ಮಂಗಪಟ್ನಂ' ಎಂಬ ಹೆಸರುಗಳೂ ಇವೆ.

ತಿರುಮಲೆಯ ಕ್ಷೇತ್ರ ಅತ್ಯಂತ ಪ್ರಾಚೀನವಾದ ಚರಿತ್ರೆಯನ್ನು ಹೊಂದಿದೆ. ಹಿಂದೆ ತಿರುಮಲೆಗೆ ಹೋಗಬೇಕೆಂದರೆ ಸರಿಯಾದ ಸೌಲಭ್ಯಗಳು ಇಲ್ಲದಿದ್ದರಿಂದ ತಿರುಮಲೆಯ ಬ್ರಹ್ಮೋತ್ಸವಗಳ ತಿರುಚಾನೂರಿನಲ್ಲೇ ನಿರ್ವಹಿಸುತ್ತಿದ್ದರಂತೆ. ಪೂರ್ವದಲ್ಲಿ ತಿರುಮಲೆಯ ಕ್ಷೇತ್ರದಲ್ಲಿ ಕೇವಲ ಧ್ವಜಾರೋಹಣೆಯನ್ನು ಮಾತ್ರ ನೆರವೇರಿಸುತ್ತಿದ್ದರಂತೆ. ಉಳಿದ ವಾಹನ ಸೇವೆಗಳೆಲ್ಲವನ್ನೂ ತಿರುಚಾನೂರಿನಲ್ಲೇ ನಡೆಯುತ್ತಿದ್ದವೆಂದು ಚರಿತ್ರೆ ತಿಳಿಸುತ್ತಿದೆ. ನಂತರದ ಕಾಲದಲ್ಲಿ ಶ್ರೀರಾಮಾನುಜಾಚಾರ್ಯರು ಈ ಪದ್ಧತಿಗೆ ವಿದಾಯ ಹೇಳಿ, ಉತ್ಸವಗಳು ತಿರುಮಲೆಯಲ್ಲೇ ನಡೆಯುವ ಏರ್ಪಾಟುಗಳನ್ನು ಮಾಡಿದರಂತೆ. ಅಷ್ಟೇ ಅಲ್ಲದೆ ತಿರುಮಲೆಯ ಶ್ರೀ ವೇಂಕಟೇಶ್ವರ ಸ್ವಾಮಿಯ ಪ್ರತಿರೂಪವನ್ನು ತಿರುಚಾನೂರು ಆಲಯದಲ್ಲಿ ಇರಿಸಿ, ಪೂಜೆಗಳನ್ನು ಮಾಡುವುದರ ಮೂಲಕ ತಿರುಮಲೆಗೆ ಹೋಗಲಾಗದ ಭಕ್ತರುಗಳಿಗೆ ತಿರುಚಾನೂರಿನಲ್ಲೇ ದರ್ಶನ ಭಾಗ್ಯವನ್ನು ಒದಗಿಸಿದಂತೆ ಕ್ರಿ.ಶ. ಒಂಭತ್ತನೆಯ ಶತಮಾನಕ್ಕೂ ಮೊದಲಿನ ಶಾಸನದಲ್ಲಿ ತಿಳಿಸಲಾಗಿದೆ. ಸ್ವಾಮಿಗೆ ತಿರುಚಾನೂರಿನಲ್ಲೆ ಆಲಯವನ್ನು ನಿರ್ಮಿಸಿದರು. ಈ ಆಲಯಕ್ಕೆ 'ತಿರುವಿಲನ್ ಕೋಯಿಲ್' ಎಂದೂ, ಅದರಲ್ಲಿರುವ ಸ್ವಾಮಿಯನ್ನು 'ತಿರುವೇಂಕಟ ಪೆರುಮ ನಡಿಗಳ್' ಎಂಬ ಹೆಸರುಗಳನ್ನು ಇರಿಸಿದಂತೆ ಶಾಸನಗಳ ಮೂಲಕ ತಿಳಿದು ಬರುತ್ತಿದೆ.

ತಿರುಚಾನೂರಿನಲ್ಲಿ ಸುಮಾರು ಐವತ್ತಕ್ಕೂ ಹೆಚ್ಚಿನ ಶಾಸನಗಳು ಲಭ್ಯವಾಗಿವೆ. ಈ ಶಾಸನಗಳೆಲ್ಲವೂ ತಿರುಚಾ

ನೂರಿನ ಚರಿತ್ರೆಗೆ ಕೈಗನ್ನಡಿಯಂತಿವೆ. ಇವುಗಳ ಪ್ರಕಾರ ತಿರುಪತಿ ಪ್ರಾಂತ್ಯದಲ್ಲಿ ತಿರುಚಾನೂರು ಆಧ್ಯಾತ್ಮಿಕತೆ ಮತದ ಕಾರ್ಯಕ್ರಮಗಳಿಗೆ ಕೇಂದ್ರವಾಗಿದೆ. ಕ್ರಿ.ಶ. 8 ನೆಯ ಶತಮಾನದ ಪ್ರಾರಂಭದಲ್ಲೇ ತಿರುಚಾನೂರು ಕ್ಷೇತ್ರ ವೈಷ್ಣವ ಶಾಖೆಗೆ ಒಂದು ಪ್ರಧಾನ ಕೇಂದ್ರವಾಗಿ ರಾರಾಜಿಸಿದೆ. 9 ನೆಯ ಶತಮಾನದ ಪ್ರಾರಂಭದಿಂದ ಅನೇಕ ವೈಷ್ಣವರು ಬಂದು ತಿರುಚಾನೂರಿನಲ್ಲಿ ಸ್ಥಿರಗೊಂಡರು. ಈ ಸಮಯದಲ್ಲೇ ತಿರುಮಲೆಯ ಬಗೆಗೆ ತಿಳಿದಿದ್ದರೂ ಅಲ್ಲಿಗೆ ತಲುಪುವುದು ಕಷ್ಟ ಕರವಾಗಿದ್ದರಿಂದ ವೈಷ್ಣವರೊಂದಿಗೆ ಇನ್ನಿತರ ಭಕ್ತರುಗಳು ತಿರುಮಲೆಗಿಂತಲೂ ತಿರುಚಾನೂರಿಗೇ ಹೆಚ್ಚು ಪ್ರಾಧಾನ್ಯತೆಯನ್ನು ನೀಡುತ್ತಿದ್ದರಂತೆ. ತಿರುಚಾನೂರಿನಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಯ ಪ್ರತಿರೂಪವನ್ನು ಪ್ರತಿಷ್ಠಾಪಿಸಿದ ಆಲಯ ಭಕ್ತರನ್ನು ವಿಶೇಷವಾಗಿ ಆಕರ್ಷಿಸುತ್ತಾ, ಪೂಜೆಗಳನ್ನು ಸ್ವೀಕರಿಸುತ್ತಿದೆ. ಕ್ರಿ.ಶ. 9 ನೆಯ ಶತಮಾನದ ಕೊನೆಯಲ್ಲಿ 'ತೊಂಡಮಂಡಲ'ಪ್ರಾಂತವನ್ನು ಚೋಳರು ಸ್ವಾಧೀನಪಡಿಸಿಕೊಂಡರು. ತಿರುಪತಿ,ತಿರುಚಾನೂರು ಪ್ರಾಂತಗಳು ತೊಂಡಮಂಡಲದಲ್ಲಿನ ಭಾಗಗಳಾಗಿದ್ದುವು. ಚೋಳರು ಶೈವಮತಾಭಿ ಮಾನಿಗಳು. ಚೋಳರ ಪ್ರಭಾವದಿಂದಾಗಿ ಬಲವಾದ ವೈಷ್ಣವ ಕ್ಷೇತ್ರವಾಗಿದ್ದ ತಿರುಚಾನೂರು ಪ್ರಾಂತಕ್ಕೆ ಶೈವ ಮತವೂ ಸೇರಿ ಕೊಂಡಿತು. ಚೋಳರು ತಿರುಚಾನೂರು ಪಶ್ಚಿಮ ಪ್ರಾಂತ (ಪ್ರಸ್ತುತದ ಯೋಗಿ ಮಲ್ಲವರಂ)ನಲ್ಲಿ ಶಿವಾಲಯವನ್ನು ನಿರ್ಮಿ ಸಿದರು. ಅದೇ ಇಂದಿನ ಪರಾಶರೇಶ್ವರ ಸ್ವಾಮಿ ಆಲಯ. ತೊಂಡಮಂಡಲದಲ್ಲಿ ಚೋಳರ ಅಧಿಕಾರ 13 ನೆಯ ಶತಮಾನದ ಮಧ್ಯಕಾಲದಲ್ಲಿ ಅಂತ್ಯಗೊಂಡಿತು. ಮೊದಲು ಜಟಾವರ್ಮ ಸುಂದರ ಪಾಂಡ್ಯನು ಚೋಳರಾಜ್ಯ ದಲ್ಲಿನ ಈ ಪ್ರಾಂತಗಳನ್ನು ಆಕ್ರಮಿಸಿಕೊಂಡಿದ್ದರಿಂದ ಚೋಳರ ಅಧಿಕಾರ ಅಂತ್ಯವಾಯಿತು. ನಂತರ ಕೆಲಕಾಲ ಯಾದವರು ಈ ಪ್ರಾಂತದಲ್ಲಿ ಅಧಿಕಾರ ಚಲಾಯಿಸಿದರು. ಈ ಸಮಯದಲ್ಲೇ ತಿರುಚಾನೂರಿನಲ್ಲಿ ಶ್ರೀ ಕೃಷ್ಣಸ್ವಾಮಿಯ ಆಲಯವನ್ನು ನಿರ್ಮಿಸಿದರು. ಆದರೆ ವಿಜಯನಗರ ಸಾಮ್ರಾಜ್ಯ ಕ್ರಿ.ಶ. 1336 ನೆಯ ವರ್ಷದಲ್ಲಿ ಸ್ಥಾಪನೆಗೊಂಡ ಕೆಲವು ಕಾಲಕ್ಕೆ ಈ ಪ್ರಾಂತ ಅವರ ಅಧೀನವಾಯಿತು. ಅವರ ಪಾಲನೆಯಲ್ಲಿ ತಿರುಮಲೆ, ತಿರುಚಾನೂರು ಅತ್ಯಂತ ಉಜ್ವಲ ಪ್ರಭೆಯನ್ನು ಪಡೆದು, ಉತ್ತಮವಾಗಿ ಅಭಿವೃದ್ಧಿಗೊಂಡುವು. ವಿಜಯನಗರ ಚಕ್ರವರ್ತಿಗಳ ಕಾಲದಲ್ಲಿ ಶ್ರೀ ಪದ್ಮಾವತಿ ಅಮ್ಮನವರ ಆಲಯದ ಮುಖ ಮಂಟಪ ನಿರ್ಮಿಸಲ್ಪಟ್ಟಿತು.

ನಂತರ ಬ್ರಿಟೀಷರು ಬಂದ ಮೇಲೆ ತಿರುಮಲೆಯ ಅಧಿಕಾರವನ್ನು ಹಾಥೀರಾಂಜಿ ಮಠಕ್ಕೆ ನೀಡಲಾಯಿತು.1843 ಜುಲೈ 16ನೆಯ ತಾರೀಖಿನಂದು ಆಲಯದ ಜವಾಬ್ದಾರಿಯನ್ನು ಸ್ವೀಕರಿಸಿ 1933ರವರೆಗೂ ಅವರು ಪಾಲನೆಯನ್ನು ಮಾಡಿದರು. ಈ ಸಮಯದಲ್ಲಿ ತಿರುಚಾನೂರಿನ ಅಭಿವೃದ್ಧಿಗೆ ಹಾಥಿರಾಂ ಮಠದವರು ವಿಶೇಷವಾಗಿ ಶ್ರಮಿಸಿದರು. ನಂತರದ ಕಾಲದಲ್ಲಿ ತಿರುಮಲೆ ತಿರುಪತಿ ದೇವಸ್ಥಾನಗಳ ಪಾಲಕ ಮಂಡಲಿ ಅಭಿವೃದ್ಧಿಯನ್ನು ಮುಂದುವರೆಸಿ ಆಲಯವನ್ನು ಅತ್ಯಂತ ಸುಂದರವಾಗಿ ತಿದ್ದುಪಡಿ ಮಾಡಿದರು.

ಅಷ್ಟೇ ಅಲ್ಲ - ಶ್ರೀ ವೇಂಕಟೇಶ್ವರಸ್ವಾಮಿಯನ್ನು ಭಕ್ತಿಯಿಂದ ಸೇವಿಸಿ ಕೀರ್ತಿಸಿದ ಪದಕವಿತಾ ಪಿತಾಮಹ ತಾಳ್ಲಪಾಕ ಅನ್ನಮಯ್ಯ -

ಚೊಚ್ಚಿತಿ ತಲ್ಲೀ! ನೀ ಮರುಗು

ಸೊಂಪುಗ ನೀರ ಕರುಣಾಕಟಾಕ್ಷ ಮೆಲ್ಲಬ್ಬೆದೋ ನೀಕು ನೇಡು ಪರ

ಮೇಶ್ವರಿ! ಯೋಯಲು ಮೇಲುಮಂಗ ----ಎಂದು

ಮೊಟ್ಟಮೊದಲ ಬಾರಿ ಶ್ರೀ ಪದ್ಮಾವತಿಯನ್ನು ಕುರಿತೇ ಶತಕವನ್ನು ರಚಿಸಿದರು.

ಶ್ರೀ ವೇಂಕಟೇಶ್ವರನ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿರುವ ಅನ್ನಮಯ್ಯ -

'ಅಲರುಲು ಕುರಿಯಗ----- ನಾಡನದೇ
ಅಲಕುಲ ಗುಲುಕುಲ ನಲಿಮೇಲುಮಂಗ'----- ಎಂದು
'ಪರಮಾತ್ಮಡೈನ ಹರಿಪಟ್ಟಪುರಾಣಿವಿ ನೀವು
ಧರಮಮು ವಿಚಾರಿನಿಚತಾಗು ನೀಕು ಅಮ್ಮ'....ಎಂದು

ಕೀರ್ತನೆಗಳಲ್ಲಿ ಶ್ರೀ ಪದ್ಮಾವತಿ ಅಮ್ಮನವರನ್ನು ಹಲವಾರು ರೀತಿಯಲ್ಲಿ ಹಾಡಿ ಹೊಗಳಿದ್ದಾರೆ. ಆಕೆಯಲ್ಲಿ ಮೊರೆ ಹೋಗಿದ್ದಾರೆ.

॥ಈಶಾನಾಂ ಜಗತೋಸ್ಯ ವೇಂಕಟಪತೇರ್ವಿಷ್ಣೋ ಪರಾಂಪ್ರೇಯಸೀಂ
ತದ್ವಕ್ಷಸ್ಥಲ ನಿತ್ಯವಾಸರಸಿಕಾಂ ತತ್‌ಕ್ಷಾಂತಿ ಸಂವರ್ಧಿನೀಂ
ಪದ್ಮಾಲಂಕೃತ ಪಾಣಿಪಲ್ಲವಯುಗಾಂ ಪದ್ಮಾ ಸನಸ್ಥಾಂ ಶ್ರಿಯಂ
ವಾತ್ಸಲ್ಯಾದಿ ಗುಣೋಜ್ವಲಾಂ ಭಗವತೀಂ ವಂದೇ ಜಗನ್ಮಾತರಮ್॥

# ಪ್ರಿಯವ್ರತ ಮಹಾರಾಜ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ಪ್ರಿಯವ್ರತ ಮಹಾರಾಜನ ವೃತ್ತಾಂತವು ಭಾಗವತದ ಪಂಚಮ ಸ್ಕಂದದಲ್ಲಿ ಬರುತ್ತದೆ. ಸ್ವಾಯಂಭುವ ಮನುವಿನ ಪುತ್ರರಲ್ಲೊಬ್ಬನಾದ ಪ್ರಿಯವ್ರತ ತನ್ನ ಗುರುವಾದ ನಾರದ ಮುನಿಗೆ ಸಮರ್ಪಿಸಿದ ಪಾದ ಸೇವೆಯಿಂದ ಮಹಾಭಾಗವತನಾಗಿದ್ದಾನೆ. ಆ ವಿಧವಾಗಿ ಪಾರಮಾರ್ಥ ಜ್ಞಾನದಿಂದ ಆತನು ಪರಿಪೂರ್ಣತೆಯನ್ನು ಹೊಂದಿದ್ದಾನೆ. ಆದರೆ ತಂದೆಯ ಮಾತಿಗೆ ತಲೆಬಾಗಿಸಿ ಪ್ರಪಂಚ ಬಾಧ್ಯತೆಗಳನ್ನು ಸ್ವೀಕರಿಸಿದರೆ ತನ್ನ ಭಕ್ತಿ ಮಾರ್ಗ ತಪ್ಪಿಹೋಗುವುದೆಂದು ಪ್ರಿಯವ್ರತನು ಭಾವಿಸಿದ್ದಾನೆ. ಆಗ ಪ್ರಿಯವ್ರತನಿಗೆ ಮನವೊಲಿಸುವ ಜವಾಬ್ದಾರಿ ಸಾಕ್ಷಾತ್ ಬ್ರಹ್ಮದೇವನೇ ಸ್ವೀಕರಿಸಬೇಕಾಗಿ ಬಂದಿದೆ.

ಪರಮ ಶಕ್ತಿವಂತವಾಗಿ ಬ್ರಹ್ಮಾದಿ ಸ್ವರೂಪರಾದ ದೇವತೆಗಳನ್ನು ಮೂರ್ತೀಭವಿಸುವ ವೇದಗಳನ್ನು ಉಚ್ಛರಿಸಿ ತಪಸ್ಸು ಮಾಡುತ್ತಿರಲು ಆ ಪ್ರಾಂತ್ಯಕ್ಕೆ ಬ್ರಹ್ಮನು ಆಗಮಿಸಿದ್ದಾನೆ.ಬ್ರಹ್ಮದೇವನ ಆಗಮನ ವನ್ನು ಗಮನಿಸಿದ ಪ್ರಿಯವ್ರತನು ಕೂಡಲೇ ತನ್ನ ಆಸನದಿಂದ ಮೇಲೆದ್ದು ನಿಂತಿದ್ದಾನೆ. ಸ್ವಾಯಂಭುವ ಮನು ಮತ್ತು ನಾರದರು ಕೂಡ ಅದೇ ಆದರಗಳನ್ನು ಮಾಡಿದ್ದಾರೆ. ಎಲ್ಲರ ಕೈಯಿಂದ ಆದರಾತಿಥ್ಯಗಳನ್ನು ಹೊಂದಿದ ನಂತರ ಬ್ರಹ್ಮದೇವನು ಪ್ರಿಯವ್ರತನಿಗೆ ಉಪದೇಶ ಮಾಡಿದ್ದಾನೆ. ಅಂತಹ ಪ್ರಿಯವ್ರತನು ಬ್ರಹ್ಮದೇವನ ಆಜ್ಞೆಯನ್ನು ನೆರವೇರಿಸಲು ಸನ್ನದ್ಧನಾಗಿದ್ದಾನೆ.

ದೇವದೇವನ ಆಜ್ಞಾನುಸಾರ ಪ್ರಿಯವ್ರತನು ಪ್ರಾಪಂಚಿಕ ವ್ಯವಹಾರಗಳಲ್ಲಿ ಪೂರ್ತಿಯಾಗಿ ನಿರತನಾದರೂ ಭಗವಂತನ ಸ್ಮರಣೆಯನ್ನು ಮಾತ್ರ ಮರೆಯಲಿಲ್ಲ. ವಾಸ್ತವದಲ್ಲಿ ಆತನು ದೊಡ್ಡವರ ಮಾತನ್ನು ಪರಿಪಾಲಿಸಲು ಮಾತ್ರವೇ ಈ ಭೌತಿಕ ಜಗತ್ತನ್ನಾಳುವ ಜವಬ್ದಾರಿಯನ್ನು ಸ್ವೀಕರಿಸಿದ್ದಾನೆ. ನಂತರ ಆತನು ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯನ್ನು ವಿವಾಹವಾಗಿದ್ದಾನೆ. ಆಕೆಯ ಮೂಲಕ ಆಕೆಗೆ ಸೌಂದರ್ಯ ಸೌಶೀಲ್ಯ, ಔದಾರ್ಯ ಗುಣಗಳಲ್ಲಿ ತನ್ನನ್ನು ಮೀರಿಸುವ ಹತ್ತು ಮಂದಿ ಮಕ್ಕಳನ್ನು ಪಡೆದಿದ್ದಾನೆ. ಊರ್ಜಸ್ವತಿ ಎಂಬ ಪುತ್ರಿಯು ಸಹಾ ಜನಿಸಿದ್ದಾಳೆ. ಅಗ್ನಿಧ್ರುಡ,ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತಸ, ಘೃತಪೃಷ್ಠ, ಸವನ, ಮೇಧಾತಿಥಿ, ವಿತಿಹೋತ್ರ, ಕವಿ ಇವೇ ಪ್ರಿಯವ್ರತನ ಪುತ್ರರ ಹೆಸರು ಗಳು. ಇವರಲ್ಲಿ ಕವಿ, ಮಹಾವೀರ, ಸವನ ಎಂಬುವರು ನಿಷ್ಠೆಯುತರಾಗಿ ಬ್ರಹ್ಮಚರ್ಯವನ್ನು ಪಾಲಿಸಿದ್ದಾರೆ. ಚಿಕ್ಕವಯಸ್ಸಿನಿಂದಲೇ ಬ್ರಹ್ಮಚರ್ಯದ ಶಿಕ್ಷಣವನ್ನು ಪಡೆದು ಪರಮಹಂಸಾಶ್ರಮವನ್ನುಹೊಂದಿದ್ದಾರೆ ಈ ಮೂವರು ತನಯರು ಇಂದ್ರಿಯ ಕರ್ಮಗಳನ್ನು ಸಂಪೂರ್ಣವಾಗಿ ನಿಗ್ರಹಿಸಿ ಋಷಿಪುಂಗವರಾಗಿದ್ದಾರೆ. ವಾಸುದೇವನ ಚರಣ ಕಮಲಗಳ ಮೇಲೆಯೇ ತಮ್ಮ ಮನಸ್ಸನ್ನು ಕೇಂದ್ರೀಕರಿಸಿದ್ದಾರೆ.

ಪ್ರಿಯವ್ರತನ ಎರಡನೇ ಪತ್ನಿಯ ಮೂಲಕ ಉತ್ತಮ, ತಾಮಸ, ರೈವತವೆಂಬ ಮೂರು ಜನ ಮಕ್ಕಳು ಜನಿಸಿದ್ದಾರೆ. ಅವರೆಲ್ಲರು ಮನ್ವಂತರಗಳ



ಅಧಿಪತಿಗಳಾಗಿದ್ದಾರೆ. ಪ್ರಿಯವ್ರತನು ಮಹಾನ್ ಬಲ ಪರಾಕ್ರಮಿಯಾಗಿ ಹನ್ನೊಂದು ಅರಬ್ಬಿ ಸಂವತ್ಸರಗಳವರೆಗೆ ಪ್ರಪಂಚ ಪರಿಪಾಲನೆಯನ್ನು ಮಾಡಿದ್ದಾನೆ.ಒಂದು ಅರಬ್ಬಿ ಹತ್ತು ಕೋಟಿ ವರುಷಗಳಿಗೆ ಸಮಾನ. ಆತನು ಬಲವಾದ ತನ್ನ ಭುಜಗಳ ಮೇಲೆ ಬಿಲ್ಲು-ಗದೆಗಳನ್ನಿಡುತ್ತಲೇ ಧರ್ಮ ವಿರೋಧಿಗಳೆಲ್ಲರೂ ಪ್ರಾಣ ಭೀತಿಯಿಂದ ಓಟ ಕಿತ್ತುತ್ತಿದ್ದರು. ಪ್ರಿಯವ್ರತನ ಅಸಮಾನ ಪರಾಕ್ರಮವೇ ಅಂತಹುದು. ಈ ವಿಶ್ವವನ್ನೇ ಈ ರೀತಿಯಾಗಿ ಪ್ರಶಸ್ತವಾಗಿ ಪಾಲಿಸುವ ಸಮಯದಲ್ಲಿ ಒಮ್ಮೆ ಪ್ರಿಯವ್ರತನಿಗೆ ಸೂರ್ಯ ಪ್ರದಕ್ಷಿಣೆಯ ವಿಷಯದಲ್ಲಿ ಅಸಮಧಾನವುಂಟಾಗಿದೆ. ಸೂರ್ಯನು ತನ್ನ ರಥದಲ್ಲಿ ಸುಮೇರು ಪರ್ವತಕ್ಕೆ ಪ್ರದಕ್ಷಿಣೆ ಹಾಕುತ್ತಾ ಸಮಸ್ತ ಲೋಕಗಳಿಗೆ ಪ್ರಕಾಶವನ್ನೀಯುತ್ತಿರುತ್ತಾನೆ.ಆದರೆ ಪರ್ವತದ ಉತ್ತರದಿಕ್ಕಿಗೆ ಸೂರ್ಯನ ರಥ ಚಲಿಸಿದಾಗ ದಕ್ಷಿಣಕ್ಕೆ ಕತ್ತಲೆಯೂ ದಕ್ಷಿಣಕ್ಕೆ ಹೊರಟಾಗ ಉತ್ತರಕ್ಕೆ ಕತ್ತಲೆಯುಂಟಾಗುವುದು ಪ್ರಿಯವ್ರತನಿಗೇಕೋ ಸರಿಬರಲಿಲ್ಲ.ಆದ್ದರಿಂದ ವಿಶ್ವದ ಯಾವ ಭಾಗ ಕತ್ತಲೆಯಲ್ಲಿದೆಯೋ ಆ ಭಾಗವನ್ನು ಬೆಳಗಲು ಆತನು ತನ್ನ ಜ್ಯೋತಿರ್ಮಯ ರಥದಲ್ಲಿ ಸೂರ್ಯ ಕಕ್ಷೆಯಲ್ಲೇ ಚಲಿಸಿದ್ದಾನೆ.ಆಗ ವಿಶ್ವವೆಲ್ಲಾ ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಬೆಳಕನ್ನು ಹೊಂದಿದೆ. ದೇವದೇವನನ್ನು ಆರಾಧಿಸುವುದರಿಂದಲೇ ಪ್ರಿಯವ್ರತನು ಅಂತಹ ಅದ್ಭುತವಾದ ಕಾರ್ಯವನ್ನು ಮಾಡಲು ಶಕ್ತನಾಗಿದ್ದಾನೆ. ಪ್ರಿಯವ್ರತನು ಈ ಬಗೆಯಾಗಿ ತನ್ನ ರಥವನ್ನು ಸೂರ್ಯನ ಹಿಂದೆಯೇ ನಡೆಸುವುದರಿಂದ ಆತನ ರಥದ ಚಕ್ರವು ಋತು ಚಕ್ರವಾಗಿ ಸಮಸ್ತ ಭೂಮಂಡಲವು ಸಪ್ತ ಸಾಗರಗಳಾಗಿ ಹಾಗೂ ಸಪ್ತ ಭೂ ಮಂಡಲಗಳಾಗಿ ವಿಭಜಿಸಲ್ಪಟ್ಟಿವೆ.

ಜಂಬೂದ್ವೀಪ, ಪ್ಲಕ್ಷದ್ವೀಪ, ಶಾಲ್ಮಲಿದ್ವೀಪ, ಕುಶದ್ವೀಪ, ಕ್ರೌಂಚದ್ವೀಪ ಶಾಕದ್ವೀಪ, ಪುಷ್ಕರದ್ವೀಪವೆಂಬುವೇ ಆ ಸಪ್ತ ದ್ವೀಪಗಳು ಇವೆಲ್ಲವೂ ಒಂದಕ್ಕಿಂತ ಒಂದು ಮೀರಿ ಪರಿಮಾಣಗಳನ್ನು ಹೊಂದಿವೆ. ಪ್ರತಿಯೊಂದು ದ್ವೀಪವೂ ದ್ರವಪದಾರ್ಥಗಳಿಂದ ಸುತ್ತುವರಿದಿವೆ.ಇನ್ನು ಸಪ್ತ ಸಮುದ್ರಗಳು ಕ್ರಮೇಣ, ಲವಣಜಲ, ಕಬ್ಬಿನರಸ, ಸುರ, ಘೃತ, ಕ್ಷೀರ, ಮೊಸರು ಸಿಹಿನೀರು ಮುಂತಾದವುಗಳಿಂದ ತುಂಬಿವೆ. ಒಂದೊಂದು ಸಮುದ್ರವೂ ಒಂದೊಂದು ಭೂಖಂಡದ ಅಳತೆಯಲ್ಲಿವೆ. ಪ್ರಿಯವ್ರತನು ತನ್ನ ಸುತರಾದ ಅಗ್ನಿಧ್ರುಡ, ಇಧ್ಮಜಿಹ್ವ, ಯಜ್ಞಬಾಹು,ಹಿರಣ್ಯ ರೇತಸ, ಘೃತಪೃಷ್ಠ, ಮೇದಾತಿಥಿ, ವೀತಿಹೋತ್ರರನ್ನು ಈ ದ್ವೀಪಗಳಿಗೆ ಕಳುಹಿದ್ದಾನೆ.ತಂದೆಯ ಅನುಜ್ಞೆ ಮೇರೆಗೆ ಅವರೆಲ್ಲರೂ ಸಪ್ತ ದ್ವೀಪಗಳ ಅಧಿಪತಿಗಳಾಗಿದ್ದಾರೆ ತದನಂತರ ಪ್ರಿಯವ್ರತನು ತನ್ನ ಪುತ್ರಿಯಾದ ಊರ್ಜಸ್ವತಿಯನ್ನು ಶುಕ್ರಾಚಾರ್ಯರಿಗೆ ಕೊಟ್ಟು ವಿವಾಹ ಮಾಡಿದ್ದಾನೆ.ಆಕೆಯಿಂದ ಶುಕ್ರಾಚಾರ್ಯರಿಗೆ ದೇವಯಾನಿ ಎಂಬ ಪುತ್ರಿಯು ಜನ್ಮಿಸಿದ್ದಾಳೆ.

ಈ ರೀತಿಯಾಗಿ ರಾಜ್ಯಪಾಲನೆ ಮಾಡಿದ ನಂತರ ಪ್ರಿಯವ್ರತನು ತನಗೆ ಸಂಪೂರ್ಣವಾಗಿ ವಿಧೇಯರಾದ ಪುತ್ರರಿಗೆ ರಾಜ್ಯಭಾರವನ್ನು ವಹಿಸಿ ಮಡದಿ ಹಾಗೂ ಸಂಪದ್ಭರಿತವಾದ ರಾಜ್ಯವನ್ನು ಪೂರ್ಣರೀತಿಯಲ್ಲಿ ತ್ಯಜಿಸಿ ಆಧ್ಯಾತ್ಮಿಕ ಪಥಕ್ಕೆ ಹಿಂತಿರುಗಿ ಭಗವದ್ಧಾಮವನ್ನು ಸೇರಿಕೊಂಡಿದ್ದಾನೆ.

# ಪದಬಂಧ – 1

## ಕನ್ನಡ (8X8) ಪ್ರಶ್ನೆಗಳು

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1<br>9 | | | | | | | |
| 2 | | 10 | 11 | | | | | 5<br>14 |
| 3 | | | | | | | 6<br>13 | |
| 4 | | | | | | 7 | | |
| 5 | | | | | 12 | | | |
| 6 | | | | 17 | | | | |
| 7 | 15 | 16<br>2 | | | | | | |
| 8 | | 3 | | | | 8<br>18 | 4 | |

**ಎಡದಿಂದ ಬಲಕ್ಕೆ**

01. ಪಾಂಡ್ಯ ದೇಶದ ದಿವ್ಯದೇಶ 'ಉ' ಯಿಂದ ಆರಂಭ (7 ಅಕ್ಷರಗಳು)

02. ಪರಾಶರ ಭಟ್ಟರ ರಹಸ್ಯ ತ್ರಯಸಾರ (4ಅಕ್ಷರಗಳು)

03. ಆಚಾರ್ಯ ಪರಂಪರೆಯಲ್ಲಿ 5 ನೆಯವರು (3ಅಕ್ಷರಗಳು)

04. ಪೂರ್ವದಿಕ್ಕಿನಲ್ಲಿ ಉದಯಿಸುವವನೆಂಬ ನಂಬಿಕೆ (2ಅಕ್ಷರಗಳು)

**ಬಲದಿಂದ ಎಡಕ್ಕೆ**

05. ರಾಮಾನುಜರ ಕರ್ನಾಟಕದ ಸಾಲಿಗ್ರಾಮದ ಶಿಷ್ಯರು (5ಅಕ್ಷರಗಳು)

06 ತಿರುಮಲೆಗೆ ಹೊಂದಿಕೊಂಡ ಪ್ರಸಿದ್ಧ ಸ್ಥಳ (4ಅಕ್ಷರಗಳು)

07. ಶ್ರೀ ಕೃಷ್ಣನ ಪಟ್ಟ ಮಹಿಷಿ (3ಅಕ್ಷರಗಳು)

08. ಮಣವಾಳ ಮಾಮುನಿಗಳ ಶಿಷ್ಯರು 'ಅ' ಯಿಂದಾರಂಭ (3ಅಕ್ಷರಗಳು)

**ಮೇಲಿಂದ ಕೆಳಕ್ಕೆ**

09. ಪ್ರಾಣವನ್ನು ತಮಿಳಿನಲ್ಲಿ ಹೀಗೆನ್ನುತ್ತಾರೆ (3ಅಕ್ಷರಗಳು)

10. ಸ್ವರ್ಗಾಧಿಪತಿ (2ಅಕ್ಷರಗಳು)

11. ಪಾಂಡ್ಯ ದೇಶದ ದಿವ್ಯ ದೇಶ ತೋತಾದ್ರಿಯ ಮತ್ತೊಂದು ಹೆಸರು 'ವಾ' ಯಿಂದಾರಂಭ (5ಅಕ್ಷರಗಳು)

12. ಚಂದದಿ ಪೂರ್ಣ ಕಾಣುವವ ಹುಣ್ಣಿಮೆ ರಾತ್ರಿಯಲ್ಲಿ (2ಅಕ್ಷರಗಳು)

13. ನಮ್ಮಾಳ್ವಾರರ ಸಾಮವೇದ ಸಾರದ ಪ್ರಬಂದ (5ಅಕ್ಷರಗಳು)

14. ಸ್ವಾಮಿಯ ಮೂರನೇ (ಹಂದಿ) ಅವತಾರ (6ಅಕ್ಷರಗಳು)

– ಪಿ.ಜಿ. ಶ್ರೀನಿವಾಸನ್

– 52 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

**ಕೆಳಗಿನಿಂದ ಮೇಲಕ್ಕೆ**

15. ರಾಮಾನುಜರನ್ನು ಹೀಗೆ ಕರೆಯುತ್ತಾರೆ 'ಯತಿ' ಯಿಂದಾರಂಭ (5 ಅಕ್ಷರಗಳು)

16. ಮೊದಲಾಳ್ವಾರರು ಇದನ್ನು ಪ್ರಸಿದ್ಧಿಗೊಳಿಸಿದ್ದಾರೆ 'ಅ' ಯಿಂದ ಆರಂ (4ಅಕ್ಷರಗಳು)

17) ಪೆರಿಯಾಳ್ವಾರ್ ತಮ್ಮ ತಿರುಮೊಷಿಯಲ್ಲಿ 7 ಪತ್ತಿನಲ್ಲಿ ಪ್ರತಿ ಪಾಶುರದಲ್ಲಿ ಹೀಗೆ ಸ್ತುತಿಸುತ್ತಾರೆ. 'ಶ' ಯಿಂದ ಆರಂಭ (3ಅಕ್ಷರಗಳು)

18) ನೂರೆಂಟು ದಿವ್ಯ ದೇಶಗಳಲ್ಲಿ ಆಂಧ್ರಕ್ಕೆ ಸೇರಿದ್ದು 'ಅ' ಯಿಂದಾರಂಭ (4ಅಕ್ಷರಗಳು)

# ಯಾಜ್ಞವಲ್ಕ್ಯ ಜಯಂತಿ ತದಂಗವಾಗಿ

**- ಶ್ರೀಮತಿ. ಕೆ.ವಿ. ಪದ್ಮಾವತಿ**



ನಮ್ಮ ಭರತ ಭೂಮಿಯಲ್ಲಿ ಮಹಾನ್ ರಾಜರು, ಚಕ್ರವರ್ತಿಗಳು ಆಗಿ ಹೋದಂತೆ ಸಾಧು ಸಂತರು, ಶರಣರು,ಋಷಿಗಳು ಆಗಿಹೋಗಿದ್ದಾರೆ. ಲೌಕಿಕ - ಅಲೌಕಿಕ, ಪ್ರವೃತ್ತಿ-ನಿವೃತ್ತಿ,ಐಹಿಕ-ಪಾರಮಾರ್ಥಿಕ ತ್ಯಾಗ-ಭೋಗಗಳ ಸಮನ್ವಯದೊಂದಿಗೆ ಅರ್ಥಪೂರ್ಣ ಬದುಕನ್ನು ಮಾಡಿದವರು ನಮ್ಮ ಋಷಿವರೇಣ್ಯರ ಸಾಲಿನಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುವ ಅದ್ವಿತೀಯ ತೇಜಸ್ವಿಗಳೇ ಶ್ರೀ ಯಾಜ್ಞವಲ್ಕ್ಯರು. ಯಾಜ್ಞವಲ್ಕ್ಯರ ಕಠಿಣ ಸಾಧನೆ, ದೀರ್ಘ ತಪಸ್ಸುಗಳಿಗೆ ಹೆಸರಾದವರು.ವೇದದ್ರಷ್ಟಾರರು.ದಾರ್ಶನಿಕರು. ಸ್ಮೃತಿ ಕಾರರು. ಪ್ರತಿಮ ಮೇಧಾವಿಗಳು ಅಪೂರ್ವ ಪ್ರತಿಭಾ ವಂತರು.

ಆಲಂಬಿನಿ, ಬ್ರಹ್ಮರಾತ ದಂಪತಿಯ ತಪಸ್ಸಿನ ಫಲದಿಂದ ಜನಿಸಿ, ಅಲೌಕಿಕ ಲೀಲೆಗಳಿಂದ ತಂದೆ ತಾಯಿಗಳನ್ನು ಆನಂದ ಪಡಿಸಿದರು.ಉಪನಯನದ ನಂತರ ಸೋದರ ಮಾವನ ವೈಶಂಪಾಯನರಲ್ಲಿ ವಿದ್ಯಾಭ್ಯಾಸ ಮಾಡುತ್ತ, ಗುರುವಿಗೆ ಅತ್ಯಂತ ಆತ್ಮೀಯರಾದರು. ಶೀಘ್ರದಲ್ಲಿ ಎಲ್ಲ ವಿದ್ಯೆಗಳನ್ನು ಕಲಿತು ಚತುರ್ವೇದಿಗಳಾದರು. ವೇದ ವಿದ್ಯಾರ್ಜನೆಯಿಂದ ದೇಹ ಮನಸ್ಸುಗಳೆರಡೂ ತೇಜಃ ಪುಂಜವಾಗಿ ಸೂರ್ಯನಂತೆ ಪ್ರಬಲರಾದರು.

ಒಮ್ಮೆ ಆಶ್ರಮದ ಸಮೀಪವಿದ್ದ ವರ್ಧಮಾನ ಪುರದ ಧ್ರುವ ಎಂಬ ರಾಜ, ಔಷಧೋಪಚಾರಗಳಿಂದ ನಿವಾರಣೆ ಯಾಗದ ವ್ಯಾಧಿಯಿಂದ ಬಳಲುತ್ತಿದ್ದ.ಆತನ ಪ್ರಾರ್ಥನೆ ಯಂತೆ ಮಂತ್ರಪೂರಿತ ಜಲಾಕ್ಷತೆಗಳನ್ನು ತೆಗೆದುಕೊಂಡು ಹೋಗಿ ಆತನ ಮೇಲೆ ಸಂಪ್ರೋಕ್ಷಿಸಿ ಬರಬೇಕಿತ್ತು.ತಮ್ಮ ಸರದಿಯ ದಿನ ಯಾಜ್ಞವಲ್ಕ್ಯರು ಹೋಗಿದ್ದರು.ಬಹು ಹೊತ್ತಿನವರೆಗೆ ಕಾದರೂ ರಾಜ ಬರಲಿಲ್ಲ. ಅಧ್ಯಯನಕ್ಕೆ ತಡವಾಗುತ್ತಿದ್ದ ಕಾರಣ ಸಿಂಹಾಸನದ ಮೇಲೆ ಮಂತ್ರಪೂರಿತ ಜಲಾಕ್ಷತೆಗಳನ್ನಿಟ್ಟು ಹೊರಟರು. ಇದರ ಪ್ರಭಾವದಿಂದ ಒಣಗಿದ ಕಂಬಗಳು ಚಿಗುರಿದವು. ರಾಜನು ಈ ಅದ್ಭುತವನ್ನು ನೋಡಿ, ಪಶ್ಚಾತ್ತಾಪದಿಂದ ಆಶ್ರಮಕ್ಕೆ ಬಂದನು.ಇಂದು ಕಳಿಸಿದ ವಟುವನ್ನೇ ಮರುದಿನವೂ ಕಳಿಸುವಂತೆ ಗುರುಗಳಲ್ಲಿ ಮನವಿ ಮಾಡಿದ.ಅದರಂತೆ ಗುರುಗಳು ಅಪ್ಪಣೆ ಮಾಡಿದರು.ಹಾಗೆ ಮಾಡಿದರೆ ನನ್ನ ಸಹಾಧ್ಯಾಯಿಗಳಿಗೆ ಅಪಮಾನ ಮಾಡಿದಂತೆ ಆಗುತ್ತದೆ.ನನ್ನ ಸರತಿಯಂದು ಮಾತ್ರ ಹೋಗಿ ಬರುವೆನೆಂದು ಯಾಜ್ಞತ್ರವಲ್ಕ್ಯರು ಉತ್ತರಿಸಿದರು.ಈ ಘಟನೆಯಿಂದ ಗುರುಗಳಿಗೆ ಅಸಮಾಧಾನವಾಯಿತು.

ಒಮ್ಮೆ ಋಷಿಗಳೆಲ್ಲ ಸೇರಿ ಮೇರು ಪರ್ವತದಲ್ಲಿ ಸಭೆ ನಡೆಸಿದರು. ಸಭೆಗೆ ಬಾರದವರಿಗೆ ಏಳು ರಾತ್ರಿಯೊಳಗೆ ಬ್ರಹ್ಮಹತ್ಯಾದೋಷ ಪ್ರಾಪ್ತವಾಗುವುದೆಂದು ಕರೆಕೊಟ್ಟಿದ್ದರು. ಕಾರಣಾಂತರದಿಂದ ವೈಶಂಪಾಯನರು ಸಭೆಗೆ ಹೋಗಲಿಲ್ಲ. ತಮಗೆ ಬಂದ ಬ್ರಹ್ಮಹತ್ಯಾದೋಷ ನಿವಾರಣೆಗೆ ಎಲ್ಲ ಶಿಷ್ಯರು ಪುರಶ್ಚರಣೆ ಮಾಡಬೇಕೆಂದು ಗುರುಗಳು ಆಜ್ಞಾಪಿಸಿದರು. ಅಪ್ಪಣೆ ಕೊಟ್ಟರೆ ಎಲ್ಲ ಶಿಷ್ಯರ ಬದಲು ತಾನೊಬ್ಬನೇ ಪುರಶ್ಚರಣ ಮಾಡುತ್ತೇನೆ ಎಂದು ಯಾಜ್ಞವಲ್ಕ್ಯರು ಹೇಳಿದಾಗ ಗುರುಗಳಿಗೆ ಅದು ಉದ್ಧಟತನ ಎನಿಸಿತು. ನನ್ನಲ್ಲಿ ಅಧ್ಯಯನ ಮಾಡಿದ ವೇದವನ್ನು ನನಗೆ ಕೊಟ್ಟುಬಿಡು ಎಂದು ವೈಶಂಪಾಯನರು ಸಿಟ್ಟಿನಿಂದ ಆಜ್ಞಾಪಿಸಿದಾಗ ಯಾಜ್ಞವಲ್ಕ್ಯರು ವೇದವನ್ನು ವಮನ ಮಾಡಿದರು.

ಅಲ್ಲಿಂದ ಹೊರಟ ಯಾಜ್ಞವಲ್ಕ್ಯರು ವಿರಾಜ ತೀರ್ಥಕ್ಕೆ ಬಂದು ಗಾಯತ್ರಿ ದೇವಿಯನ್ನು ಕುರಿತು ತಪಸ್ಸನ್ನಾಚರಿಸಿದರು. ದೇವಿಯ ಅಪ್ಪಣೆಯಂತೆ ಸೂರ್ಯ ದೇವನನ್ನು ಮೆಚ್ಚಿಸಿದರು. ಭಾಸ್ಕರನು ಅಶ್ವರೂಪದಿಂದ ಪ್ರತ್ಯಕ್ಷನಾಗಿ ಆಯಾತ ಯಾಮ ಶುಕ್ಲ ಯಜುರ್ವೇದವನ್ನು ಉಪದೇಶಿಸಿದನು. ಇದನ್ನೇ ಬೃಹದಾರಣ್ಯಕದಲ್ಲಿ 'ಆದಿತ್ಯನಿಯಾನಿ ಶುಕ್ಲಾನಿ ಯಜುಂಸೀ ವಾಜಸನೇಯೇನ ಯಾಜ್ಞವಲ್ಕ್ಯನಾಖ್ಯಾಯಂತೇ' ಎಂಬ ವಾಕ್ಯವು ವಿವರಿಸಿದೆ.ಜಗತ್ಪ್ರಸಿದ್ಧ ಈಶಾವಾ ಸ್ಯೋಪನಿಷತ್ ಶುಕ್ಲಯಜುರ್ವೇದದ ಸಂಹಿತೆಯ 40 ನೇ ಅಧ್ಯಾಯದಲ್ಲಿದೆ.

ಅಸತೋಮಾ ಸದ್ಗಮಯ? ತಮಸೋಮ ಜ್ಯೋತಿರ್ಗಮಯ/ ಮೃತ್ಯೋರ್ಮಾ ಅಮೃತಂಗಮಯ।

ನನ್ನನ್ನು ಅವ್ಯವಸ್ಥೆಯಿಂದ ವ್ಯವಸ್ಥೆಯತ್ತ ನಡೆಸು. ಅಜ್ಞಾನಾಂಧಾಕಾರದಿಂದ ಜ್ಞಾನದ ಬೆಳಕಿನತ್ತ ನಡೆಸು.ಸಾವಿನಿಂದ ಅಮೃತದತ್ತ ನಡೆಸು ಎಂದು ಜನಸಾಮಾನ್ಯರ ಬಾಯಲ್ಲೂ ನಿತ್ಯ ನಲಿದಾಡುವ ವಿಶ್ವಪ್ರಸಿದ್ಧ ಸೂಕ್ತಿಗಳನ್ನು ಹೇಳಿದವರೂ ಯಾಜ್ಞವಲ್ಕ್ಯರೇ. ಇಂತಹ ಅಮೋಘ ತತ್ತ್ವವನ್ನು ಜಗತ್ತಿಗೆ ಸಾರಿದ ಯಾಜ್ಞವಲ್ಕ್ಯರ ವ್ಯಕ್ತಿತ್ವ ಮೇರು ಸದೃಶವಾದುದು. ಯಾಜ್ಞವಲ್ಕ್ಯರಿಗೆ ಬ್ರಹ್ಮರಾತ, ದೈವರಾತ, ವಾಜ ಸನೇಯ ಎಂಬಿತ್ಯಾದಿ ಹೆಸರುಗಳೂ ಇವೆ. ಯಜ್ಞಯಾಗಗಳಲ್ಲಿ ಅವರು ಸದಾ ಭಾಗವಹಿಸುತ್ತ, ಸದಾ ದೀಕ್ಷಾವಸ್ತ್ರಧಾರಣ ಮಾಡುತ್ತಿದ್ದುದರಿಂದ ಅವರಿಗೆ ಯಾಜ್ಞವಲ್ಕರೆಂದೂ, ಸದಾ ಆಧ್ಯಾತ್ಮ ಚಿಂತಕರಾದುದರಿಂದ ಬ್ರಹ್ಮರಾತಿಯೆಂದು, ನಿತ್ಯ ಅನ್ನದಾನ ಮಾಡುವ ಸೂರ್ಯನ ಉಪಾಸನೆಯಿಂದ ವೇದ ವಾಙ್ಮಯವನ್ನು ಕಂಡು ಹಿಡಿದಿದ್ದರಿಂದ ವಾಜಸನೇಯ ಎಂಬ ಹೆಸರೂ, ಸತತವಾದ ಯಜ್ಞಯಾಗಾದಿಗಳಿಂದ ದೇವತೆಗಳನ್ನು ಒಲಿಸಿಕೊಂಡಿದ್ದರಿಂದ ದೈವರಾತರೆಂಬ ಹೆಸರೂ ಅನ್ವರ್ಥವಾಗಿ ಬಂದವು.

ವೇದವೆಂದರೆ ತತ್ತ್ವಜ್ಞಾನ. ಇಂದ್ರಿಯಗಳ ಹಿಡಿತಕ್ಕೆ ಸಿಕ್ಕದಿರುವ ಲೋಕಾತೀತ ತತ್ತ್ವದ ಸ್ವರೂಪವನ್ನು, ಜಗದ್ರಹಸ್ಯವನ್ನು, ಜೀವೇಶ್ವರ ವಿವೇಕವನ್ನು, ಪರಮ ಸತ್ಯವನ್ನು

ತಿಳಿಸಿಕೊಡುವ ವಾಕ್ಯಬಂಧವೇ ವೇದ. ಅವುಗಳ ಅರಿವೆಂದರೆ ಅವುಗಳ ಕುರಿತಾದ ನಿರಂತರ ಧ್ಯಾನ ಮತ್ತು ತಪಸ್ಸು ಯಾಜ್ಞವಲ್ಕ್ಯರು ಅವುಗಳ ಅರಿವಿಗಾಗಿ ಆಯ್ಕೆ ಮಾಡಿಕೊಂಡಿದ್ದು ಗಾಯತ್ರೀ ಮಂತ್ರೋಪಾಸನೆ. ಆದಿತ್ಯದರ್ಶನಕ್ಕಾಗಿ ಅವರು ಹಗಲಿರುಳೂ ಗಾಯತ್ರೀ ಧ್ಯಾನದಲ್ಲಿ ತೊಡಗಿದರು. ವರ್ಷವಿಡೀ ತಪಶ್ಚರ್ಯೆಯಲ್ಲಿ ಮುಳುಗಿದರು. ಅದೊಂದು ದಿನ ಭಗವಾನ್ ಭಾಸ್ಕರನು ಇವರ ತಪಸ್ಸಿಗೆ ಮೆಚ್ಚಿ ಅಶ್ವ ರೂಪದಲ್ಲಿ ಪ್ರತ್ಯಕ್ಷನಾಗಿ ವೇದವನ್ನು ಉಪದೇಶಿಸಿದನು.ಸೂರ್ಯನಿಂದ ಉಪದೇಶಿಸಲ್ಪಟ್ಟ ಆ ಮಂತ್ರ ಭಾಗವು ಯಾಜ್ಞವಲ್ಕ್ಯರ ಮುಖದಿಂದ ಪ್ರವಹಿಸ ತೊಡಗಿತು. ಅದನ್ನು ಅವರ ಶಿಷ್ಯರಾದ ಕಣ್ವ ಮತ್ತು ಮಾಧ್ಯಂದಿನ ಎಂಬ ಇಬ್ಬರು ಶಿಷ್ಯರು ಅಕ್ಷರಗಳಲ್ಲಿ ಸೆರೆಹಿಡಿದರು.ಈ ವೇದವೇ ಮುಂದೆ ಶುಕ್ಲ ಯರ್ಜುವೇದವೆಂದು ಖ್ಯಾತಿಹೊಂದಿತು.



ವೇದಗಳಲ್ಲಿ ಮುಖ್ಯವಾಗಿ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತೆಂದು ನಾಲ್ಕು ಭಾಗಗಳನ್ನು ಕಾಣುತ್ತೇವೆ. ಒಟ್ಟಿಗೆ ಇದ್ದ ವೇದ ರಾಶಿಯನ್ನು ಹೀಗೆ ಈ ನಾಲ್ಕು ಭಾಗಗಳಾಗಿ ವಿಂಗಡಿಸಿದವರೇ ಯಾಜ್ಞವಲ್ಕ್ಯರು ಎಂಬ ಪ್ರತೀತಿಯಿದೆ.

ಪ್ರಕೃತಿಯ ಅದ್ಭುತಗಳನ್ನು ಕಂಡು ಬೆರಗಾಗಿ ಆ ಅದ್ಭುತ ಶಕ್ತಿಗಳನ್ನು ಇಂದ್ರ,ವರುಣ,ಅಗ್ನಿ,ವಾಯು ಇತ್ಯಾದಿ ದೇವತೆಗಳೆಂದು ಭಾವಿಸಿ ಅವರನ್ನು ಕೊಂಡಾಡಿರುವ ಭಾಗವೇ ಸಂಹಿತೆ. ಆ ನಾನಾ ದೇವತೆ ಗಳನ್ನು ಒಲಿಸಿಕೊಳ್ಳಲು ಮಾಡಬೇಕಾದ ಪೂಜೆ, ಪುನಸ್ಕಾರ,ಹೋಮ, ಹವನಾದಿಗಳೇ ಬ್ರಾಹ್ಮಣ.ಪರತತ್ತ್ವಕ್ಕೂ ಮನುಷ್ಯ ಜೀವಕ್ಕೂ ಇರುವ ಸಂಬಂಧವನ್ನು ತಿಳಿಸಿ ಕೊಡುವುದೇ ಉಪನಿಷತ್ತು.ಬ್ರಾಹ್ಮಣಕ್ಕೂ ಉಪನಿಷತ್ತಿಗೂ ನಡುವೆ ಸೇತುವೆಯಂತಿರುವ ಭಾಗವೇ ಅರಣ್ಯಕ. ಇದನ್ನು ಉಪನಿಷತ್ತಿನ ಪೀಠಿಕಾ ಭಾಗವೆಂದೂ ಕರೆಯಬಹುದು.

### ಜೀವನ ಪದ್ಧತಿ ಕಲಿಸುವ ಯಾಜ್ಞವಲ್ಕ್ಯ ಸ್ಮೃತಿ

ಯಾಜ್ಞವಲ್ಕ್ಯರು ಬ್ರಹ್ಮಜ್ಞಾನದ ಸಂಬಂಧ ಜನಕನ ಆಸ್ಥಾನದಲ್ಲಿ ನಡೆಸಿದ ಪ್ರಶ್ನೋತ್ತರಗಳು ಅವೆಲ್ಲ ಬೃಹದಾರಣ್ಯಕ ಉಪನಿಷತ್ತಿನ ಮುನಿ ಕಾಂಡವೆಂಬ 3 ನೇ ಅಧ್ಯಾಯದಲ್ಲಿ ಸಂಗ್ರಹಿತವಾಗಿದೆ. ಅದರಂತೆ ಪತ್ನಿ ಮೈತ್ರೇಯಿಗೆ ಬೋಧಿಸಿದ ಅಮೃತತತ್ವ ಮೋಕ್ಷದ ಬಗೆಗಿನ ಉಪದೇಶಗಳು ಮಹತ್ವದ ಸ್ಥಾನ ಪಡೆದಿದೆ.ಅವರು ಯಾಜ್ಞವಲ್ಕ್ಯ ಸ್ಮೃತಿ ಮತ್ತು ಯೋಗ ಶಾಸ್ತ್ರ ಎಂಬ ಗ್ರಂಥ ರಚಿಸಿದ್ದು,ಯಾಜ್ಞವಲ್ಕ್ಯ ಸ್ಮೃತಿ ಧರ್ಮಸಮ್ಮತ ವಾಗಿ ನಿತ್ಯ ಜೀವನ ನಡೆಸುವ ಪರಿಯನ್ನು ಸೂಚಿಸುತ್ತದೆ.

### ಜನಕನಿಂದ ಸನ್ಮಾನ

ವೇದದ ಕರ್ಮಾಂಗ ಮತ್ತು ಜ್ಞಾನಾಂಗಗಳೆರಡರಲ್ಲೂ ಅಸೀಮ ಪಾಂಡಿತ್ಯವನ್ನು ಗಳಿಸಿ ಜನಕಮಹಾರಾಜನ ಆಸ್ಥಾನದ ವಿದ್ವಾಂಸರಾಗಿದ್ದ ಯಾಜ್ಞವಲ್ಕ್ಯರು ತ್ರೇತಾಯುಗದಲ್ಲಿ ಮಾನ್ಯವಾಗಿದ್ದ ಯಾಜ್ಞವಲ್ಕ್ಯಸ್ಮೃತಿಯ ಕರ್ತೃವೂ ಹೌದು.ಯಾಜ್ಞವಲ್ಕ್ಯರು ಸುದೀರ್ಘವಾದ ಚರ್ಚೆ-ಸಂವಾದಗಳು ಬೃಹದಾರಣ್ಯ ಕೋಪನಿಷತ್ತಿನ ಮುನಿಕಾಂಡದಲ್ಲಿ ನಿರೂಪಿತ ವಾಗಿವೆ.ಯಾಜ್ಞವಲ್ಕ್ಯರು ರಾಜರ್ಷಿ ಜನಕ ಮಹಾರಾಜನ ಕುಲ ಗುರುವಾಗಿದ್ದರು. ಒಮ್ಮೆ ಜನಕನಿಗೆ ಬ್ರಹ್ಮಜ್ಞಾನಿರಾರೆಂದು ತಿಳಿದುಕೊಳ್ಳುವ ಆಸೆಯಾಯಿತು.ಬಹುದಕ್ಷಿಣಾ ಎಂಬ ಯಜ್ಞಕ್ಕೆ ಕುರು ಪಾಂಚಾಲಾದಿಗಳಿಂದ ವಿದ್ವಾಂಸರನ್ನು ಬರ ಮಾಡಿಕೊಂಡ ಪ್ರತಿ ಕೊಂಬಿಗೆ ಚಿನ್ನದ ಹತ್ತು ಪದಕಗಳನ್ನು ಕಟ್ಟಿದ ಸಾವಿರ ಗೋವುಗಳನ್ನು ತೋರಿಸಿ,ಬ್ರಹ್ಮನನ್ನು ಅರಿತವರು ಅವುಗಳನ್ನು ಹೊಡೆದುಕೊಂಡು ಹೋಗಲಿ ಎಂದ.ಯಾರೂ ಮುಂದೆ ಬರಲಿಲ್ಲ. ಯಾಜ್ಞವಲ್ಕ್ಯರು ತಮ್ಮ ಶಿಷ್ಯನನ್ನು ಕರೆದು ಆಶ್ರಮಕ್ಕೆ ಗೋವುಗಳನ್ನು ಹೊಡೆದುಕೊಂಡು ಹೋಗಲು ಅಪ್ಪಣೆ ಮಾಡಿದರು. ಜನಕ ಸಭೆಯಲ್ಲಿ ಯಾಜ್ಞವಲ್ಕ್ಯರು ತಾವು ಬ್ರಹ್ಮಿಷ್ಠರೆಂದು ನೇರವಾಗಿ ಹೇಳಿಕೊಳ್ಳದೆ ವಿದ್ವಾಂಸರು ಒಬ್ಬರ ಮೇಲೊಬ್ಬ ರಾದಂತೆ ಪ್ರಶ್ನೆಗಳನ್ನೆಸೆದಾಗ ಅದಕ್ಕೆ ಸಮರ್ಥವಾಗಿ ಉತ್ತರಿಸುತ್ತ ಪರೀಕ್ಷ್ವವಾಗಿ ತಾವು ಬ್ರಹ್ಮಿಷ್ಠ ಪಣಕ್ಕೆ ಯೋಗ್ಯರೆಂದು ತೋರಿಸಿಕೊಟ್ಟರು. ಆ ವಿದ್ವಾಂಸರಲ್ಲೆಲ್ಲ ಅತ್ಯಂತ ಹರಿತವಾದ ಪ್ರಶ್ನೆಗಳನ್ನು ಗಾರ್ಗಿ ವಾಚಕ್ನವಿಯು ಕೇಳಿದಾಗ ಅವಳಿಗೂ ಸಮಾಧಾನವನ್ನಿತ್ತು ತಮ್ಮ ಅಖಂಡ ವಿದ್ವತ್ತೆಯನ್ನು ಸ್ಥಾಪಿಸಿದರು ಯಾಜ್ಞವಲ್ಕ್ಯ ಮಹರ್ಷಿಗಳು.

### ಸ್ತ್ರೀಗೂ ಬ್ರಹ್ಮಜ್ಞಾನ

ಉಪನಿಷತ್ತುಗಳು ಅನೇಕ. ಅವುಗಳಲ್ಲಿ ಬೃಹದಾರಣ್ಯ ಕೋಪನಿಷತ್ತು ಒಂದು.ಗಾತ್ರದಿಂದಲೂ ವಿಷಯ ಸಮೃದ್ಧಿಯಿಂದಲೂ ಇದು ಅತ್ಯಂತ ಬೃಹತ್ತಾದುದು.ಯಾಜ್ಞವಲ್ಕ್ಯರ ಆತ್ಮತತ್ತ್ವ ಬೋಧೆ ಹೃದಯಂಗಮವಾಗಿ ಪ್ರಕಟಗೊಂಡಿದ್ದು ಇದರಲ್ಲೇ. ಅವರ ಮಡದಿ ಮೈತ್ರೇಯಿ ಆ ಕಾಲದ ಪ್ರಖ್ಯಾತ ಬ್ರಹ್ಮವಾದಿನಿಯಾಗಿದ್ದು ಯಾಜ್ಞವಲ್ಕ್ಯರೊಡನೆ ಆತ್ಮತತ್ತ್ವ ಜಿಜ್ಞಾಸೆಗೆ ಉಪಕ್ರಮಿಸಿದ್ದು ಈ ಉಪನಿಷತ್ತೇ. ಆಧ್ಯಾತ್ಮವಿದ್ಯೆ ಯಂತಹ ಶ್ರೇಷ್ಠ ಅಸಾಧಾರಣ ಬ್ರಹ್ಮವಿದ್ಯೆಯನ್ನು ತಮ್ಮ ಪತ್ನಿ ಮೈತ್ರೇಯಿಗೆ ಬೋಧಿಸಿ,ಸ್ತ್ರೀಯರೂ ಬ್ರಹ್ಮಜ್ಞಾನ ಪಡೆಯಲು ಅರ್ಹರು ಎಂಬ ಕ್ರಾಂತಿಕಾರಕ ಭಾವನೆ ಬಿತ್ತಿದ ಮಹಾಪುರುಷ ಯಾಜ್ಞವಲ್ಕ್ಯರು. ಅವರಿಗೆ ಕಾತ್ಯಾಯಿನಿ ಮತ್ತು ಮೈತ್ರೇಯಿಎಂಬ ಇಬ್ಬರು ಪತ್ನಿಯರಿದ್ದರು. ತಮ್ಮ ಜೀವಿತ ಕಾಲದಲ್ಲಿ ರಾಜಮಾನ್ಯರಾಗಿ ಅನೇಕ ವಿಧವಾದ ಸಂಪತ್ತು-ಸಮೃದ್ಧಿಯನ್ನು ಗಳಿಸಿದವರಾದರೂ ತಮ್ಮಬದುಕಿನ ಉತ್ತರಾರ್ಧಕಾಲದಲ್ಲಿ ತಮ್ಮ ಮಡದಿಯಾದ ಮೈತ್ರೇಯಿ ಮತ್ತು ಕಾತ್ಯಾಯನಿರಿಗೆ ಸಂಪತ್ತನ್ನು ಹಂಚಿ ವಾನಪ್ರಸ್ಥರಾಗುವುದಕ್ಕೆ ಯಾಜ್ಞವಲ್ಕ್ಯರು ನಿರ್ಣಯಿಸುತ್ತಾರೆ. ಜೇಷ್ಠಪತ್ನಿಯಾದ ಮೈತ್ರೇಯಿಯು ಪತಿಯಲ್ಲಿ ಅಮೃತತತ್ವವನ್ನು ಹೊಂದುವ ಬಗೆಯನ್ನು ಅಪೇಕ್ಷಿಸಿದಾಗ ಮಹರ್ಷಿಗಳಿಗೆ ಸಂತೋಷವಾಗಿ ಪತ್ನಿಗೆ ತತ್ತ್ವ ಬೋಧೆ ಮಾಡುತ್ತಾರೆ. ಮೈತ್ರೇಯಿಯು ಸ್ವತಃ ವೈದಿಕ ಋಷಿಕೆ; ಬ್ರಹ್ಮವಾದಿನಿಯೆಂದು ಪೂಜ್ಯಳಾದವಳು. ಅವಳಿಗೆ ಭೌತಿಕ ಪ್ರಪಂಚದ ಇತಿಮಿತಿಗಳನ್ನು ಆತ್ಮವಸ್ತುವಿನಲ್ಲಿಯೇ ಪರ್ಯವಸನವಾಗುವುದರಿಂದ ಆತ್ಮನಿಗಿಂತ ವ್ಯತಿರಿಕ್ತವಾದುದು ಯಾವುದೂ ಇಲ್ಲವೆನ್ನುತ್ತಾರೆ. ಮುಂದುವರಿದು, ಎಲ್ಲಕ್ಕೂ ಏಕಾಯನ ವಾದುದು ಆತ್ಮನೇ; ಅದು ಪ್ರಜ್ಞಾನಘನವೆಂದು ಹೇಳಿ ಆತ್ಮಜ್ಞಾನವಾದವನಿಗೆ ಭೌತಿಕ ವ್ಯವಹಾರವೂ ಬಗೆ ಹರಿಯಿತು; ಅವನಾಗಲೇ ಜೀವನ್ಮುಕ್ತನೇ ಆಗಿಬಿಡುತ್ತಾನೆ; ಇದಿಷ್ಟೇ ಅಮೃತತತ್ವವೆಂದು ತಿಳಿಸಿ ಪ್ರಸ್ಥಾನಗೈಯುತ್ತಾರೆ.

ಯಾಜ್ಞವಲ್ಕ್ಯರ ಕೊಡುಗೆ ಕೇವಲ ಧರ್ಮಶಾಸ್ತ್ರ ಮತ್ತು ವೇದಾಂತಕ್ಕೆ ಮಾತ್ರವಲ್ಲದೇ ಖಗೋಳಶಾಸ್ತ್ರಕ್ಕೂ ಸಂದಿದೆಯೆಂದು ಶತಪಥಬ್ರಾಹ್ಮಣವು ಹೇಳುತ್ತದೆ. ಮಹರ್ಷಿಗಳ ಜೀವನವು ಬಹುಮುಖಿ ವಿದ್ವತ್ತೆ, ಪ್ರಯೋಗಶೀಲತೆ, ಲೋಕಸಂಗ್ರಹ ಆಂತರ್ಯದಲ್ಲಿ ವೈರಾಗ್ಯ, ಸದಾ ತತ್ತ್ವದೃಷ್ಟಿ - ಇವುಗಳ ಬೆಳಕು. ಅದು ಇಂದಿಗೂ ಮಾರ್ಗದರ್ಶಕ ಆಧ್ಯಾತ್ಮಿಕ ಪ್ರಪಂಚದಲ್ಲಿ ಕ್ರಾಂತಿಯನ್ನು ಉಂಟು ಮಾಡಿದ ಯಾಜ್ಞವಲ್ಕ್ಯರ ಶ್ರೇಷ್ಠ ತತ್ತ್ವಗಳನ್ನು, ಅವರನ್ನು ಅರ್ಥಪೂರ್ಣ ರೀತಿಯಲ್ಲಿ ಸ್ಮರಿಸಿಕೊಳ್ಳುವುದೇ ನಿಜವಾದ ಜಯಂತಿ ಆಚರಣೆ ಎನಿಸುತ್ತದೆ.



# “ಅಸ್ಮದಾಚಾರ್ಯ ಪರ್ಯಂತಂ ವಂದೇ ಗುರುಪರಂಪರಾಂ”

**ಸ್ವಾಮಿದೇಶಿಕನ್ ಅವರ ಕೃತಿ ಸಮುಚ್ಚಯ – ಒಂದು ಅವಲೋಕನ ಅಥವಾ ಶ್ರೀ ವೇದಾಂತಾಚಾರ್ಯರು – ನಿಗಮಾಂತ ದೇಶಿಕರ ಕೃತಿ ಸಂಪುಟ ವಿಶೇಷತಃ “ಯಾದವಾಭ್ಯುದಯ” ಗಮನದಲ್ಲಿರಿಸಿಕೊಂಡು**

**ಡಾ॥ಎಸ್.ಕೆ. ರಾಮಶೇಷನ್**

ವಿಶ್ವವಿಖ್ಯಾತ “ಭಗವದ್ಗೀತೆ’’ ಯನ್ನು ರಣರಂಗದಲ್ಲಿ ಬೋಧಿಸಿದ ಶ್ರೀ ಕೃಷ್ಣಪರಮಾತ್ಮನು “ಜನ್ಮ ಕರ್ಮಚ ಮೇ ದಿವ್ಯಂ’’ ಎಂದು ಒಂದು ಶ್ಲೋಕದಲ್ಲಿ ಅಪ್ಪಣೆಕೊಟ್ಟಿದ್ದಾನೆ. ಇದು ಆ ದೇವದೇವೋತ್ತಮನ ಅವತಾರದ ಯಥಾತ್ಮ್ಯವನ್ನು (ಯಥಾವತ್ ತಿಳಿಸುವ ಅಮೃತವಾಣಿ. ಶ್ರೀ ಕೃಷ್ಣನ ಅಪ್ರಾಕೃತ, ದೈವೀಮಾನುಷ, ಹಾಗೂ ಎಲ್ಲ ರೀತಿಯಲ್ಲಿಯೂ ಅಸಾಧಾರಣ, ಅಪ್ರಮೇಯನಾದ (ಎಣಿಕೆಗೆ ನಿಲುಕದವನು) ಪರಮಾತ್ಮನ ಜನ್ಮಚೇಷ್ಟಿತಗಳನ್ನು - ದಿವ್ಯ ಲೀಲಾ ವಿಭೂತಿಯನ್ನು ಯಾರು ತಿಳಿದು ಅರಿತು, ಉಪಾಸನೆ ಮಾಡುವರೋ ಅವರಿಗೆ ಮರುಜನ್ಮವಿಲ್ಲ. ಇದನ್ನೇ ವಿಶಿಷ್ಟಾದ್ವೈತ ತತ್ತ್ವದ ಪ್ರಥಮ ಆಚಾರ್ಯರಾದ ಆಳ್ವಾರ್ ‘‘ಮರುಪ್ಪಿರವಿ ವೇಂಡೇನ್’’ (ಮರುಜನ್ಮಬೇಡುವುದಿಲ್ಲವಪ್ಪ) ಎಂದು ಪ್ರಾರ್ಥಿಸುವಲ್ಲಿ ಸ್ಪಷ್ಟ ಪಡಿಸುತ್ತಾರೆ. ತಮ್ಮ ನಾಲಾಯಿರ ದಿವ್ಯ ಪ್ರಬಂಧದ ಪಾಶುರ ಗಳಲ್ಲಿ, ಪರಮಾತ್ಮನ ಅವತಾರವು ಕರ್ಮಾಧೀನವಲ್ಲ, ತ್ರಿಗುಣಾತ್ಮಕ ವಾದುದು ಅಲ್ಲ, ಶ್ರೀ ಕೃಷ್ಣನ ಅವತಾರದ ಬಹು ಮುಖ್ಯ ಉದ್ದೇಶ. ಸಾಧು ಪರಿತ್ರಾಣ ಮತ್ತು ಚೇತನರ ಆಶ್ರಯಣ (ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ). ಇದೇ ರೀತಿಯಲ್ಲಿ ಭಗವಂತನನ್ನೇ ನಂಬುವ ಭಾಗವತೋತ್ತಮರ ಜೀವನಕ್ಕೂ, ಸರ್ವಥಾ ಅನ್ವಯಿಸಿ ಪರಿಶೀಲಿಸಬೇಕಾದ್ದು, ಬೋಧಪ್ರದ, ಹಾಗೂ ಉತ್ತಾರಕ ವಾದುದ್ದು ಕೃಷ್ಣನೇ “ಜ್ಞಾನೀಸಚಮಮ ಪ್ರಿಯಃ “ಜ್ಞಾನೇತು ಆತ್ಮೈವ ಮೇಮತಃ’’ ಎಂದು ಸಾರುತ್ತ, ಭಗವಂತನ ಮಹಿಮೆಗಿಂತಲೂ ಭಾಗವತರ ಮಹಿಮೆಯೇ ಹೆಚ್ಚು ಎಂದು ತಿಳಿಸಿದ್ದಾನೆ. ಇಂಥ ಭಾಗವತರ ದಿವ್ಯ - ನಿಸ್ವಾರ್ಥ ಸಪ್ರಾಮಣಿಕ - ಪರಿಶುದ್ಧವಾದ ಬದುಕನ್ನು ತಿಳಿಯುತ್ತ, ಅವರ ಉಪದೇಶವನ್ನು ಅರಿತು ನಡೆದಲ್ಲಿ ಎಲ್ಲ ಮಾನವರೂ ಮೋಕ್ಷವನ್ನು ಪಡೆಯುವವನು.ಪ್ರಕೃತ ವೇದಾಂತ ದೇಕರು, ವೇದಾಂತಾಚಾರ್ಯರ್, ನಿಗಮಾಂತಮಹಾ ದೇಶಿಕ, ಸ್ವಾಮಿದೇಶಿಕರ್, ಎಂದೆಲ್ಲಾ ರೀತಿ ಪ್ರಸಿದ್ಧರಾಗಿ,ಪರಮ ಭಾಗ ವತರಾದುದರಿಂದ ಅವರನ್ನು ಕುರಿತು ಅರಿತು ಕೊಳ್ಳುವುದು ಈಗಿನ ಧಾವಂತದ ಬದುಕಿಗೆ ಅತ್ಯಗತ್ಯವೆನಿಸುತ್ತದೆ.

ವೇದಾಂತದೇಶಿಕರ ಜೀವನ ಕುರಿತಂತೆ ಇಲ್ಲಿ ತಿಳಿಸುವುದು ಈ ಲೇಖನದ ಉದ್ದೇಶವಲ್ಲ; (ಬಹುವಿಸ್ತಾರವದು) ಅವರ ಕೃತಿ ಸಂಪದವನ್ನು ಕುರಿತಂತೆ ಪ್ರಬಂಧ ಅನುಸರಿಸುತ್ತ, ವಿಶೇಷತಃ ದೇಶಿಕರ ಮಹಾಕಾವ್ಯ ವೆಂದೆನಿಸುವ ಯಾದವಾಭ್ಯುದಯ’’ ಕುರಿತಂತೆ ಕೆಲವು ನಾಮ ತಿಳಿಸುವುದು ಮುಖ್ಯ ಧ್ಯೇಯ.

ದೇಶಿಕರು ಅವರದೇ ಆದ ‘‘ದೇಶಿಕ ಸಂಪ್ರದಾಯ’’ವನ್ನೇ ಸ್ಥಾಪಿಸಿದ್ದರೆಂಬುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಆಳ್ವಾರರ-ಭಗವದ್ರಾಮಾನುಜ ಪ್ರಣೀತ ‘‘ಶ್ರೀ ತತ್ತ್ವ’’- ವಿಶಿಷ್ಟಾದ್ವೈತವನ್ನು ಇನ್ನೂ ಆಧಾರ ಸಹಿತ ಪುನರ್ ಪ್ರತಿಪಾದಿಸಿ ಸ್ಥಾಪಿಸಿದ ದಿವ್ಯದಾರ್ಶನಿಕರು, ಶ್ರೀ ವೇದಾಂತದೇಶಿಕರು ಇಂಥ ಮಹನೀಯರನ್ನು ಇಲ್ಲಿ ಕುರಿತು ಒಂದೆರಡು ಶ್ಲೋಕಗಳಿಂದಲೇ ನೆನಪು ಮಾಡಿಕೊಳ್ಳುವುದು ಸೂಕ್ತ - ಸಮಂಜಸ, ಸ್ಮಹಣೀಯವೆನಿಸುತ್ತದೆ:-

1) ಶ್ರೀ ಮಾನ್ ವೇಂಕಟಾನಾಥಾರ್ಯ: ಕವಿತಾರ್ಕಿಕ ಕೇಶರೀ ವೇದಾಂತಾಚಾರ್ಯವರ್ಯೊಮೇ ಸನ್ನಿಧತ್ತಾಂ ಸದಾಹೃದಿ।

2) ಕವಿತಾರ್ಕಿಕ ಸಿಂಹಾಯ ಕಲ್ಯಾಣಗುಣಶಾಲಿನೇ। ಶ್ರೀಮತೇ ವೇಂಕಟೇಶಾಯ ವೇದಾಂತಗುರವೇ ನಮಃ॥;

(ಕಾವ್ಯ - ತರ್ಕ - ಕವಿ- ತಾರ್ಕಿಕ ಸಿಂಹರು ಈ ವೇದಾಂತ ದೇಶಿಕರು.)

3) ರಾಮಾನುಜ ದಯಾಪಾತ್ರಂ ಜ್ಞಾನವೈರಾಗ್ಯ ಭೂಷಣಂ।

ಶ್ರೀಮದ್ವೇಂಕಟನಾಥಾರ್ಯಂ ವಂದೇ ವೇದಾಂತ ದೇಶಿಕಮ್।

(ಬಹುಧಾನ್ಯಸಂವತ್ಸರ ಆವಣಿಮಾಸ ಶುಕ್ಲದ್ವಿತೀಯಾ ಹಸ್ತ ನಕ್ಷತ್ರದಂದು ಈ ಶ್ಲೋಕ ಹಾಗೂ ಈ ಮೊದಲು ಉಲ್ಲೇಖಿಸಿರುವ ಶ್ಲೋಕ ಪಠಿಸುವ ಪದ್ಧತಿ)

4) ಜಯತಿ ನಿಗಮ ಚೂಡಾ ದೇಶಿಕೇಂದ್ರೋದಯಾಳುಃ

ಜಯತಿ ಸುಮತಿ ಸೇವ್ಯಾ ಶೋಭನಾ ತಸ್ಯ ಸೂಕ್ತಿಃ।

ಜಯತಿ ಶುಭಗುಣಂ ತಂ ಶೀಲಯನ್ ಸೂರಿ ಸಂಘೋ

ಜಯತಿ ವಸುಮತೀ ಸಾತಸ್ಯಸಂಚಾರಧನ್ಯಾಃ॥

ವಿತ್ರಾಸಿನೀ ವಿಭುಧವೈರಿ ವರೂಥಿನೀನಾಂ ಪದ್ಮಾಸನೇನ ಪರಿಚಾರವಿಧೌ ಪ್ರಯುಕ್ತಾ

ಉತ್ಪ್ರೇಕ್ಷ್ಯತೇ ಬುಧಜನೈರುಪಪತ್ತಿ ಭೂಮ್ನಾ ಘಂಟಾಹರೇಃ ಸಮಜನಿಷ್ಟ ಯದಾತ್ಮನೇತಿ॥

(ವಿಷ್ಣು ಘಂಟಾವತಾರಃ - ತಿರುಮಲೆಯ ಶ್ರೀ ವೇಂಕಟೇಶ್ವರನ ದಿವ್ಯ ಘಂಟೆಯೇ ಶ್ರೀ ದೇಶಿಕರಾಗಿ ಅವತರಿಸಿದ್ದೆಂದು ವಿದ್ವಾಂಸರ ನಿರ್ಣಯ)



ಕಾಂಚೀ ಸನಿಹ ಕೂಪ್ಪಿಲ್ ಆಗ್ರಹಾರದಲ್ಲಿ ಅನಂತಸೂರಿ - ತೇಶಾರಾಣ ದಂಪತಿಗಳಿಗೆ ಶ್ರೀ ತಿರುಪತಿ ಶ್ರೀನಿವಾಸನ ದಿವ್ಯ ಅನು ಗ್ರಹದಿಂದ ಜನಿಸಿದ ದೇಶಿಕರು ಬಾಲ್ಯದಿಂದಲೇ ಪ್ರತಿಭಾವಂತ ರಾಗಿದ್ದವರೆಂದು ಅವರ ಜೀವನ ಚರಿತ್ರೆಯಿಂದ ತಿಳಿದುಬರುತ್ತದೆ.

ಪ್ರಶಮಿತ ಕಲಿದೋಷಾಂ ಪ್ರಾಜ್ಯ ಭೋಗಾನು ಬಂಧಾಂ

ಸಮುದಿತ ಗುಣಜಾತಾಂ ಸಮ್ಯಗಾಚಾರಯುಕ್ತಾಂ।

ಶ್ರಿತಜನಬಹುಮಾನ್ಯಾಂ ಶ್ರೇಯಸೀ ವೇಂಕಟಾದ್ರೌ

ಶ್ರಿಯ ಮುಪಚಿನು ನಿತ್ಯಂ ಶ್ರೀನಿವಾಸ ತ್ವಮೇವ

(ಶ್ರೀ ವೇಂಕಟಾಚಲ ಸ್ವಾಮಿಯಲ್ಲಿ ಶರಣುಹೊಂದುವ ಪ್ರಪತ್ತಿ)

7) ತುರಗ ವದನ ತೇಜೋ ಬೃಂಹಿತಾಶ್ಚರ್ಯ ಶಕ್ತಿಃ

ಕವಿಕಥಕ ಮೃಗೇಂದ್ರಃ ಸರ್ವತಂತ್ರಸ್ವತಂತ್ರಃ।

ಜಯತಿ ಗುಣಃ ಅಬಾಧಾಂ ವೇದಚೂಡಾರ್ಯ ಸಂಜ್ಞಾಂ

ಅನಿತರ ಜನ ಲಭ್ಯಾಂ ಲಂಭಿತೋ ರಂಗಭರ್ತ್ರಾಃ॥

ಹಯಗ್ರೀವರ ತೇಜಸ್ಸಿನಿಂದ ಪ್ರಸಾದಿತ, ಉಜ್ಜಲವಾದ ಪ್ರತಿಭಾ ಶಕ್ತಿಯುಳ್ಳ ಸರ್ವತಂತ್ರ ಸ್ವತಂತ್ರರಾದ ಕವಿತಾರ್ಕಿಕ ಸಿಂಹಾ ಗುರುಪೀಠಕ್ಕೆ ಅರ್ಹರಾಗಿ ವೇದಾಂತಾಚಾರ್ಯ ಎಂಬ ಅಸಾಧಾರಣ ಪ್ರಶಸ್ತಿಯನ್ನು ಶ್ರೀ ರಂಗನಾಥರಿಂದಲೇ ಹೊಂದಿ ಸರ್ವೋತ್ಕೃಷ್ಟರಾಗಿ ಪ್ರಕಾಶಿಸುತ್ತಿದ್ದಾರೆ.

(ದೊಡ್ಡಯ್ಯ ಚಾರ್ಯರೆಂಬ ವಿದ್ವಾಂಸರು ದೇಶಿಕರ ದಿವ್ಯಜ್ಞಾನ ಕಂಡು ಸ್ತುತಿಸಿದ್ದು)

8) ಶ್ರೀ ವಿಷ್ಣು ಚಿತ್ತ ಕುಲನಂದನ ಕಲ್ಪವಲ್ಲೀಂ

ಶ್ರೀ ರಂಗರಾಜ ಹರಿಚಂದನ ಯೋಗದೃಶ್ಯಾಂ

ಸಾಕ್ಷಾತ್ ಕ್ಷಮಾಂ ಕರುಣಯಾ ಕಮಲಾಂಇವಾನ್ಯಾಂ

ಗೋದಾಂ ಅನನ್ಯ ಶರಣಶರಣಂ ಪ್ರಪದ್ಯೇ॥

(ಸ್ವಾಮಿ ದೇಶಿಕನ್ ಅಂಡಾಳ್ - ಗೋದಾದೇವಿಯನ್ನು ಸ್ತುತಿ ಸುವ ಒಂದು ಪದ್ಯ), ತಮ್ಮ ಇಪ್ಪತ್ತನೆಯ ವಯಸ್ಸು ಕಳೆಯುವುದ ರೊಳಗೇ ವೇದಾಂತದೇಶಿಕರು ಸಕಲ ಶಾಸ್ತ್ರ ವ್ಯಾಸಂಗ ಮುಗಿಸಿ, ವಿದ್ಯಾ ಪಾರಂಗತರಾದರೆಂದು ಅವರ ಪ್ರಿಯ ಶಿಷ್ಯ, ಪ್ರತಿವಾದಿ ಭಯಂಕರ ಅಣ್ಣನ್ ಅವರೇ ಹಾಡಿದ್ದಾರೆ, ಹಾಗೂ ಅವರ ನಿತ್ಯ ಜೀವನವನ್ನು ಆಶ್ಲೋಕವು ಧ್ವನಿಸುತ್ತದೆ.

9)ವೇದಾಂತ ದೇಶಿಕರ ''ಕಾಮಾಸಿಕಾಷ್ಟಕ'' ನೃಸಿಂಹ ಸ್ತುತಿಯ ಒಂದು ಚರಣ ಯಾವಾಗಲೂ ಎಲ್ಲರಿಗೂ ನಿತ್ಯ ಪಾರಾಯಣದ ಸಾಲು - ಇದರಿಂದ ಅನನ್ಯ ಶರಣತ್ವವನ್ನು ಭಗವಂತನಲ್ಲಿ ಪ್ರಾರ್ಥಿಸುವುದು ಮಾತ್ರವಲ್ಲ ಇದರ ಪಠಣದಿಂದ ಬದುಕು ಉತ್ತಮಗೊಳ್ಳುತ್ತದೆ.

ತ್ವಯಿ ರಕ್ಷತಿ ರಕ್ಷಕೈಃ ಕಿಮನ್ಯೈಃ

ತ್ವಯಿ ಚಾರಕ್ಷತಿ ರಕ್ಷಕೈಃ

(ಚ ಅರಕ್ಷತಿ)

ಇತಿ ನಿಶ್ಚಿತಧೀ ಃ ಶ್ರಯಾಮಿ ನಿತ್ಯಂ

ನೃಹರೇ ವೇದವತೀ ತಟಾಶ್ರಯಂತ್ವಾಮ್।

ಅಯ್ಯಾ ಮಹಾನ್ ಚೇತನವೇ! ನೀನು ರಕ್ಷಿಸುವುದಾದರೆ ಬೇರೆ ಯಾರು ಬೇಕು? ನೀನು ರಕ್ಷಿಸದಿದ್ದರೆ ಬೇರೆ ಯಾರಿಂದಲಾಗಲೀ ರಕ್ಷಿಸಲಾದೀತು? ವೇಗವತೀ ನದಿತಟದಲ್ಲಿರುವ ನರಸಿಂಹ ಸ್ವಾಮಿಯೇ! ನಾನು ನಿನ್ನನ್ನೇ ಆಶ್ರಯಿಸಿದ್ದೇನೆಂಬುದು ಸತ್ಯಸತ್ಯ.

ಲೇಖನದ ವಿಸ್ತಾರಭಯದಿಂದ ಪ್ರಧಾನ ಲಕ್ಷ್ಯ ಕಾವ್ಯ ''ಯಾದವಾಭ್ಯುದಯ' ಕುರಿತಂತೆ ಕೆಲವು ಸಾಲುಗಳಲ್ಲಿ ತಿಳಿಸುವ ಮುನ್ನ ಶ್ರೀ ದೇಶಿಕರ ರಚನೆಯ ಬಾಹುಳ್ಯ ತಿಳಿಸುವ ಇಚ್ಛೆ ಈ ದಾಸನದು, ಅವರ ಕೃತಿ ಸಂಪದವೇ ಅತ್ಯಾಶ್ಚರ್ಯಕರ ಗಮನಿಸುವಾಗ

ಅ) ಸ್ತೋತ್ರಗಳು - 32 - ಶ್ರೀ ಹಯಗ್ರೀವ ಸ್ತುತಿ ಈ ಸ್ತುತಿ ಅಭೀತಿಸ್ತವ ಭೂಸ್ತುತಿ, ಗೋದಾಸ್ತುತಿ ಮೊದಲಾದುವು ಗೋಪಾಲ ವಿಂಶತಿ ಶರಣಾಗತಿ ದೀಪಿಕಾ ದಯಾಶತಕಂ (ಶ್ರೀನಿವಾಸನನ್ನು ಕುರಿತ 108 ಶ್ಲೋಕಗಳು)ಸುದರ್ಶನಾಷ್ಟಕ, ಭಗವಧ್ಯಾನ ಸೋಪಾನಂ, ದಶಾವತಾರ ಸ್ತುತಿ,ರಘುವೀರಗದ್ಯ, ಹೀಗೆ ಇನ್ನೂ ಪ್ರಸಿದ್ಧ - ಅಷ್ಟೇ ಪ್ರಭಾವೀ ಸ್ತೋತ್ರಗಳು.

ಆ) ಕಾವ್ಯಾದಿಗಳು - 7 (ಏಳು) ಯಾದವಾಭ್ಯುದಯಂ, ಹಂಸಸಂದೇಶಂ, ಸುಭಾಷಿತ ನೀಖೀ ಪಾದುಕಾಸಹಸ್ರಂ ಸಂಕಲ್ಪ ಸೂರ್ಯೋದಯಃ (ನಾಟಕ ಕೂಡ)

ಭೂಗೋಳ ನಿರ್ಣಯ: (12 ನೆ ಶತಕದಲ್ಲಿ ಇಡೀ ಭೂ ಮಂಡಲ ಕುರಿತು ವಿವರ)

ಭೂಗೋಳ ನಿರ್ಣಯ ವ್ಯಾಖ್ಯಾಃ

(ಇ) ಅನುಷ್ಠಾನ ಕುರಿತು ಶಾಸ್ತ್ರ ವಿಷಯ ಗ್ರಂಥಗಳು - 24

(ಈ) ರಹಸ್ಯ ಗ್ರಂಥ ವಿಶೇಷ 32 ಇದರಲ್ಲಿ ಶ್ರೀ

ರಹಸ್ಯತ್ರಯಸಾರ ಬಹು ಪ್ರಸಿದ್ದಿ - ಮಂತ್ರತ್ರಯ - ಓಂ ನಮೋ ನಾರಾಯಣಾಯ (ಅಷ್ಟಾಕ್ಷರೀ) ಮಂತ್ರದ್ವಯ (ಶ್ರೀ ಮನ್ನಾರಾಯಣ ಚರಣೋ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ ನಮಃ

ಚರಮಶ್ಲೋಕ : ಅನನ್ಯಃ ಚಿಂತಯಂತೋಮಲ ಯೇಜನಾಃ ಪರ್ಯುಪಾಸತೇ।
ತೇಷಾಂನಿತ್ಯಾಭಿಯುಕ್ತಾ ನಾಂ ಯೋಗಕ್ಷೇಮಂ ವಹಾಮ್ಯಹಂ।

ಇಂಥ ಮಹತ್ವದ ರಚನೆಯಲ್ಲಿ "ಯಾದವಾಭ್ಯುದಯ ಕುರಿತು ಪಕ್ಷಿನೋಟ ಮಾತ್ರಇಲ್ಲಿದೆ. (ಬಹು ವಿಸ್ತಾರವಾದ ಕಾವ್ಯವಿದು)

ದೇಶಿಕರ ಮಹಾಕಾವ್ಯಗಳಲ್ಲಿ 'ಪಾದುಕಾಸಹಸ್ರದಂಥ ಸ್ತುತಿ ಕಾವ್ಯ ಸೇರುವುದಾದರೆ ಯಾದವಾಭ್ಯುದಾಯದ ಮಹತ್ತು ವೈವಿಧ್ಯ. ವೈಶಿಷ್ಟ ರಚನಾಕೌಶಲ್ಯ,ಕಾವ್ಯ ಶಿಲ್ಪ, ದೇಶಿಕರ ಕವಿಹೃದಯ, ಎಲ್ಲ ಎಲ್ಲ ಅಂಶಗಳನ್ನು ಕುರಿತು ವಿಚಾರ ಮಾಡಿದರೂ ಈ ಲೇಖನ ನೂರಾರು ಪುಟಗಳು ಮೀರಿಯಾತು.

ಯಾದವಾಭ್ಯುದಯ ಪ್ರಧಾನವಾಗಿ ಈ ಭಾಗವತ - ಶ್ರೀ ಕೃಷ್ಣನನ್ನು ಕೇಂದ್ರ ಬಿಂದುವಾಗಿ ಉಳ್ಳ ಮಹಾಕಾವ್ಯ.

ಇಲ್ಲಿ ಕನ್ನಡದ ರುದ್ರ ಭಟ್ಟ ಕವಿಯ 'ಶ್ರೀಜಗನ್ನಾಥ ವಿಜಯ' ಎಂಬ ಚಂಪೂ ಕಾವ್ಯವೂ ಚಾಟುವಿಠಲನಾಥನ ಷಟ್ಪದಿಕಾವ್ಯವಾದ "ಶ್ರೀ ಭಾಗವತಷ್ಪಾದಿಗಳ" ಪೂಜ್ಯ ಶ್ರೀ ಸೋದೆ ವಾದಿರಾಜ ಸ್ವಾಮಿಗಳ "ಶ್ರೀ ರುಕ್ಮಿಣೀಶ ವಿಜಯಾ" ಕಾವ್ಯವೂ ಮೂಲ ಶ್ರೀ ಮದ್ಭಾಗವತ ಮಹಾಪುರಾಣವೂ ಎಲ್ಲವೂ ಮಾಲೆ ಮಾಲೆಯಾಗಿ ನೆನಪಾಗುತ್ತದೆ. ವಿಚಾರಣೀಯ ದೃಷ್ಟಿಯಿಂದ ಇಲ್ಲಿ ಈ ಕೃತಿಗಳ ಪ್ರಸ್ತಾಪಮಾತ್ರ ಮಾತಿದೆ ಯೆಷ್ಟೇ.

ಯಾದವಾಭ್ಯುದಯ - ಇಪ್ಪತ್ತನಾಲ್ಕು ಸರ್ಗ (24) ಗಳ ಮಹಾಕಾವ್ಯ - ವಿವಿಧ ಛಂದಸ್ಸುಗಳ ಬಳಕೆ ಇಲ್ಲಿ ಸಮೃದ್ಧ ಹಾಗೂ ಶ್ರೀದೇಶಿಕರ ಪಾಂಡಿತ್ಯಕ್ಕೆ ನಿದರ್ಶನ. ವೇದಾಂತಚಾರ್ಯರ ಅದ್ವಿತೀಯವಾದ ಕವಿತಾಶಕ್ತಿ ಹಾಗೂ ಅವರಿಗಿದ್ದ ಸರ್ವಷ್ಟೇ ಮುಖವಾದ ವಿಶೇಷ ಜ್ಞಾನ ಸ್ಪಷ್ಟವಾಗುತ್ತದೆ.

ಈ ಮಹಾಕಾವ್ಯಕ್ಕೆ ಪ್ರಖ್ಯಾತ ಅದ್ವೈತ ವಿದ್ವಾಂಸರೆನಿಸಿದ ಶ್ರೀ ಅಪ್ಪಯ್ಯ ದೀಕ್ಷಿತರು ವಿದ್ವತ್ವರ್ಣವಿದ್ಯಪೂರ್ಣ ವ್ಯಾಖ್ಯಾನವನ್ನು ರಚಿಸಿದ್ದಾರೆ.

ಯಾದವಾಭ್ಯುದಯದ ಶ್ರೀ ಕೃಷ್ಣ ವ್ಯಕ್ತಿತ್ವ ಅಪ್ರಮೇಯ ವೆನಿಸುತ್ತದೆ. (ಒಮ್ಮೊಮ್ಮೆಕವಿಕಾಳಿದಾಸನ "ರಘುವಂಶ" ಇಲ್ಲಿ ಸ್ಫೂರ್ತಿ ನೀಡಿದೆಯೇ ಎಂದೂ ಅನ್ನಿಸುತ್ತದೆ. ಆದರೆ ಸರ್ವತಂತ್ರ ಸ್ವತಂತ್ರ ಅಭಿವ್ಯಕ್ತಿ ಮನನೀಯ.)

ಇತ್ಥಂ ವಿಚಿಂತ್ಯಾ ಸರ್ವತ್ರಭಾವಾಃ ಸ್ಮತಿ ಪದೇ ಪದೇ।
ಕವಿಕಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷು ಅಪಿ॥

ಕವಿತಾರ್ಕಿಕ ಸಿಂಹಾರ ಕಾವ್ಯಗಳು ಎಷ್ಟೇ ಲಲಿತವಾಗಿ ಇದಲ್ಲಿ ಅವುಗಳ ಪ್ರತಿ ಪುಟದಲ್ಲೂ ಭಾವಗಳೂ-ಅರ್ಥಗಳು, ತುಂಬಿ ಮನ ಸೆಳೆಯುತ್ತದೆ.

ಶ್ರೀ ಕೃಷ್ಣ ದಿವ್ಯ ಚರಿತಾಮೃತವನ್ನು ಅಸ್ವಾದಿಸಿ ವಿಮುಕ್ತಿ ಪಡೆಯುವೆಂದೇ ರಚನೆ ಗೈದಿದ್ದಾರೆ ದೇಶಿಕರು ಎಂದರೆ, ಆಸ್ವಾದಿಸಿದಾಗಲೇ ಅರಿವಾದೀತು.

ಶಕ್ತ್ಯಾಶೌರಿಕಥಾಸ್ವಾದಃ ಸ್ಥಾನೇ ಮಂದ ಧಿಯಾಮಪಿ।
ಅಮೃತಾ ಯದಿಲಭ್ಯೇತ ಕಿಂ ನ ನೃಹ್ಯೇನ ಮಾನವೈಃ॥

(1 ನೆ ಸರ್ಗ, 3 ನೇ ಶ್ಲೋಕ) ಕಡಿಮೆ ತಿಳಿವಳಿಕೆಯುಳ್ಳವರು , ಕೂಡ ಶ್ರೀಕೃಷ್ಣನ ದಿವ್ಯ ಚರಿತ್ರೆಯನ್ನು ಓದಲು ಬಯಸುತ್ತಾರೆ. ಆತ ಮಗು, ಯೋಧ, ಮನ್ಮಥನ ತಂದೆ, ಮಹಾಕರುಣಿ, ಆರ್ತಪ್ರಾಣ ಪರಾಯಣ, ಎಲ್ಲವೂ ಆಗಿದ್ದಾನೆ. ಅಮೃತವನ್ನು ಆಸ್ವಾದಿಸಲು ಯಾರು ತಾನೇ ಬಿಡುವರು?

ಸವಿಷ್ಣು ರಿವಲೋಕಾನಾಂ ತರ್ಪಸ್ತೇಜಸಾಟುವ।
ಸಮುದ್ರ ಇಟ ರತ್ನನಾಂ ಸತಾಮೇಕಾಶ್ರಯೇ ಭವತ್।

ಶ್ರೀಕೃಷ್ಣಪಿತ ವಸುದೇವನು ಸಕಲ ಲೋಕರಕ್ಷಕನಾಗಿರುವ ಶ್ರೀ ಮಹಾವಿಷ್ಣುವಿನಂತೆ

ತೇಜಸ್ಸಿನ ನಿಧಿಯಾದ ಸೂರ್ಯ ದೇವನಂತೆ,

ರತ್ನವಳಿಗೆಲ್ಲ ತವರು ಮನೆಯಾದ ಸಮುದ್ರ ರಾಜನ ಹಾಗೆ, ಸಜ್ಜನರಿಗೆ ಆಶ್ರಯ ದಾತನಾಗಿದ್ದನು (ವಸುದೇವ)

ಪುರಃ ಸ್ಥಿತೇ ಗೋಪ್ತರಿ ವಿಶ್ವಹೇ ತೌಪಶ್ಚಾದವಸ್ಥಾಯಿನಿ ತತ್ ಪ್ರವರ್ತ್ಯೇ।
ಅನನ್ಯಯೇನಾತ್ ಸಂಥೋ ಬಭಾರ ಪ್ರಾಧಿತಚುದ್ಯಾಂ ಪ್ರಣವ ಪ್ರವೃತ್ತಿಮ್॥

ಮುಂದುಗಡೆ ಶ್ರೀ ಕೃಷ್ಣ ಅನಂತರ ಅರ್ಜುನನೂ ಕುಳಿತಿದ್ದ ಪಾಂಡವರು ಕುರುಕ್ಷೇತ್ರ ಸಮರದಲ್ಲಿ ಅದ್ಭುತ ವಿಜಯಗಳಿಸಲು ಸಾಧಕವಾದ ಆ ದಿವ್ಯ ರಥವು ವಾತ್ಮನಿಗೆ ಪರಮಾತ್ಮನಿಗೆ ನಿತ್ಯ ಕೈಂಕರ್ಯನೆಂಬ ಉದಾತವಾದ ವೇದಾಂತ ತತ್ವವನ್ನೇ ಬೋಧಿಸುತ್ತಿದ್ದಿಲ್ಲ. ಇದರ ಜೊತೆಗೆ ನೆನಪಾಗುವ ಬೇರೆ ಶ್ಲೋಕ:

ಯತ್ರ ಯೋಗೀಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ತತ್ರಶ್ರೀ ರ್ವಿಜಯೋಭೂತಿಃ ಧ್ರುವಾನೀತಿಃ ನ ಸಂಶಯಃ॥

ಇಂಗ್ಲಿಷ್ ಕಾವ್ಯದಲ್ಲಿ (ಸರಳರಗಳೆತರಹ) ಎಂದು ಇದೆ. ದೇಶಿಕರು ಹೀಗೆ ಬಹು ಛಂದಸ್ಸಿನ ರಚನೆಗಳನ್ನು ಲೀಲಾಜಾಲವಾಗಿ ಮಾಡಿರುವುದೇ ವಿಶೇಷ.

ಅನುಷ್ಟುಪ್, ಆರ್ಯಾ, ಚಿತ್ರ, ಚಂದ್ರಲೇಖಾ, ಉಪಚಾತಿ, ಪುಟ,ಮಂದಾಕ್ರಾಂತಿ ಸ್ವಾಮಿದೇಶಿಕರ ವಿದ್ವತಿಗೇ ಇವು ಸಾಕ್ಷಿ: ಚಂಪಕ ಮಾಲಿನೀ, ಧ್ರುತ ವಿಲುಚಿತ - ಪುಷ್ಪಿತಾಗ್ರ ಶಾರ್ದೂಲ ವಿಕ್ರೀಡಿತ , ಸ್ರಗ್ಧರಾ, ಹೀಗೆ ವಿವಿಧ ಛಂದೋ ರಚನೆ ಇದೆ.

ನಾನಾನಾನಾನಾನಾನಾನಾನಾ,
ನಾನಾ, ನಾ, ನಾ, ನಾ, ನಾ,ನಾ,
ನಾ, ನಾ, ನಾನಾನಾ, ನಾ ನಾನಾನಾನಾನಾ,
ನಾ, ನಾನಾನಾನಾ,

ಇದು ಚಕಾಕ್ಷರ ಶ್ಲೋಕವೆಂದು ಪ್ರಸಿದ್ಧ ಹಾಗೂಇಲ್ಲಿಯ ಅರ್ಥವು ಗಾನಕ್ಕೂ ಹೊಂದುತ್ತದೆ.

( 6 ನೇ ಸರ್ಗ, 96 ನೆ ಯ ಶ್ಲೋಕ)

ಈ ಕಾವ್ಯದಲ್ಲಿ ನೃಸಿಂಹಾವತಾರವನ್ನು ವರ್ಣಿಸುವಾಗ ದೇಶಿಕರು

ಸಟಾಪಟಲಭೀಷಣೇ
ಸರಭಾಸಾಟ್ಟಹಾಸೋದ್ಧಟೇ॥

ಇಲ್ಲಿ ನರಹರಿಯೇ ಉದ್ಭವನಾದ ವೈಭವದ ಚಿತ್ರಣ.

ಇದೇ ರೀತಿಯಲ್ಲಿ ಈ ಕೃಷ್ಣನು ಕಾಳಿಂಗ ಸರ್ಪದ (ಕಾಲೀ ಯನ) ಹೆಡೆಗಳ ಮೇಲೆ ತಕಧಿಮಿತತಕಧಿಮಿಯೆಂದು ನರ್ತಿಸುವುದನ್ನು ಒಂದು ಶ್ಲೋಕ ವರ್ಣಿಸುವ ನಾಟ್ಯಶೈಲಿ ಗಮನಿಸಿ.

ಲೋಲಾ ಪತಶ್ಚರಣ ಲೀಲಾಹತ ಕ್ಷರಿತ ಹಾಲಾಹಲೇ ನಿರುಳುಫಣೀ।;
ನೃತ್ಯಂತ ಮಪ್ರತಿಘ ಘಷ್ಯಂತ ಮಪ್ರತಿಮಂ ಅತ್ಯಂತ ಚಾರು ವಪುಷಮ್॥

ಕಾಳೀಯ ಮರ್ದನ ಚಿತ್ರಿಸುವ ಒಂದು ಶ್ಲೋಕ

ಇಲ್ಲಿ ಉದಾಹರಿಸಲೇ ಬೇಕು, ಅಷ್ಟು ಹೃನ್ಮನ ಸೆಳೆವಂಥ ಸಾಲು ಗಳು:-

ಮೋಲಾಪತಶ್ಚರಣ ಲೀಲಾಹತಿಕ್ಷರಿತ ಹಾಲಾಹಲೇ ನಿಜಫಣೆ
ನೃತ್ಯಂತಮ ಪ್ರತಿಘ ಕೃತ್ಯಂತಮಪ್ರತಿಮ ಮತ್ಯಂತ ಚಾರುವಪುಷಂ॥
ದೇವಾದಿಭಾಸ್ಸಮಯ ಸೇವಾದರತ್ವರಿತೆ ಹೇವಾಕಘೋಷ ಮುಖರೈಃ
ದೃಷ್ಟಾವಧಾನಮಥ ತುಷ್ಟಾವಶೌರಿ ಮಹಿರಿಷ್ಟಾವರೋಧ ಸಹಿತಃ॥

ತನ್ನ ಲೀಲೆಯಿಂದ ಚಂಚಲವಾದ (ನೃತ್ಯದಂತ " ತಕಥೈ" ಕುಣಿದ ಶ್ರೀಕೃಷ್ಣ) ಪಾದಾಘಾತದಿಂದ,

ವಿಷವನ್ನು ಕಾರುತ್ತಿರುವ ತನ್ನ ಹೆಡೆಗಳ ಮೇಲೆ ನರ್ತಿಸುತ್ತಿರುವ ಅಸದೃಶ್ಯವಾದ ಕಾವ್ಯಸಾಹಸದಿಂದಲೂ ಅತಿ ಸುಂದರವಾದ (ಕಾರ್ಯ) ದಿವ್ಯ ಶರೀರದಿಂದೊಡಗೂಡಿರುವ ಶ್ರೀಕೃಷ್ಣನನ್ನು, ಆ ಸಮಯಕ್ಕೆ ತಕ್ಕಂತೆ ಸ್ತೋತ್ರಗಳಿಂದ ಘೋಷಿಸುತ್ತ ಸೇವಿಸುತ್ತ ದೇವತೆಗಳೆಲ್ಲರೂ ಸಾವಧಾನ ದಿಂದ ವೀಕ್ಷಿಸುತ್ತಿರುವಾಗ, ಆ ಕಾಲಿಂಗ ಸರ್ಪವೂ ತನ್ನ ಪರಿವಾರ ದಿಂದೊಡಗೂಡಿ ಶ್ರೀ ಕೃಷ್ಣನನ್ನು ಬಹು ಪರಿಯಿಂದ ಸ್ತುತಿಸಿತು.

ಈ ಪದ್ಯದ ಅಶ್ವಧಾಟಿ, ಹಾಡಲೂ ಸೊಗಸು.

ಇದು ಕಾಲೀಯನ ಹೆಡೆಗಳ ಮೇಲೆ ತನ್ನ ದಿವ್ಯ ಚರಣಗಳನ್ನು ನೃತ್ಯಗತಿಯಲ್ಲಿ ಕುಣಿಸಿದ ರೀತಿ.

ಈ ಕೃಷ್ಣನ ಪ್ರೇಮಕ್ಕೆ ಪಾತ್ರನಾದ ಆತನ ಪ್ರೇಯಸಿಯರು, ಗೋಪಿಯರು ಇಡೀ ಗೋಕುಲ, ಆಕಾಶದಲ್ಲಿ ನೆರೆದ ದೇವಾನು ದೇವತೆಗಳು, ಋಷಿ, ಮುನಿ ಸಮೂಹ, ಅನುಭವಿಸಿದ ರೀತಿ: (2 ನೇ ಸರ್ಗ, 97 ನೇ ಶ್ಲೋಕ)

ಅವತರತ ಮುಕುಂದೇ ಸಂಪದಾಮೇಕಕಂದೇ
ಸುಲಭಿತ ಹರಿದರತಾಂ ಸ್ವಾದುಮಾಧ್ವೀಕದಿಗ್ಧಾಂ।
ಅಭಜತ ವಸುದೇವ ಸ್ಥಾನ ಮಾನಂದ ನಿಘ್ನೈಃ॥
ಅಮರ ಮಿಥುನ ಹಸ್ತೈರಾಹಿತಾಂ ಪುಷ್ಪವೃಷ್ಟಿಂ॥

ಸರ್ವಶ್ರೇಯಸ್ಸಿಗೂ ನಿಧಿ - ನಿಕ್ಷೇಪ (ಎನ್ನುತ್ತಾಳೆ ಅಂಡಾಳ್, ತಿರುಪ್ಪಾವೈ ಕಾವ್ಯದಲ್ಲಿ) ಸ್ಥಾನನೆನಿಸಿದ ಶ್ರೀ ಕೃಷ್ಣ ಪರಮಾತ್ಮನು ಅವತರಿಸಲು, ಸಕಲ (ಸಕಲರ) ಕಷ್ಟ ರೂಪಗಳೂ ನಿವಾರಣೆಗೊಂಡ ಮೃದು ಮಧುರ ಸುವಾಸನಾ ಪೂರಿತವಾದ ಪುಷ್ಪವೃಷ್ಟಿಯನ್ನು (ಹೂಮಳೆಯನ್ನು) ಮಹಾದಾನಂದದಿಂದ ದೇವತಾವೃಂದ, ಮುನಿ ಭಕ್ತ ಸಮೂಹ, ವಸುದೇವರ ಮನೆಯ ಮೇಲೆ ಸುರಿಸಿದರೂ, ವರ್ಷಿಸಿದರು.

ಶ್ರೀ ದೇಶಿಕರ ರಚನಾ ವೈಶಿಷ್ಟ್ಯವು ವರ್ಣನೆಗೆ ನಿಲುಕಟ್ಟು ಆ ಸೊಗಸು ವೈವಿಧ್ಯ ವೈಚಿತ್ರ್ಯ,ವೈಲಕ್ಷಣ್ಯಗಳನ್ನು ಕಾವ್ಯ ಅಭ್ಯಸಿಸಿಯೇ (ಆಚಾರ್ಯಮುಖೇನ) ತಿಳಿಯಬೇಕಷ್ಟೇ ಆಚಾರ್ಯರ ಚಂದ್ರಾಸ್ತ ವರ್ಣನಾ ಕೌಶಲ್ಯ ಸಂಧ್ಯಾಸಮಯ ವರ್ಣನೆ, ಶ್ರೀ ಕೃಷ್ಣ ವ್ಯಕ್ತಿತ್ವದ ಝಲಕ್ ನೀಡುವ ಸಂದರ್ಭಗಳು ಅದು ದೈವದತ್ತ - ಪ್ರಸಾದಿತ ರಚನೆ ಎನ್ನಿಸುತ್ತದೆ. "ಕವಿತಾ ವನಿತಾ ಚೈವ ಸ್ವಯಮೇವ ಸಮಾಗತಾ" ಎಂಬುವ ನಾಣ್ಣುಡಿಯೊಂದಿದೆ. ಅದು ಭಗವತ್ಪ್ರಸಾದವೇ ವಿನಹ ಬೇರೊಂದಲ್ಲ. ಯಾದವಾಭ್ಯುದಯವನ್ನು ಶ್ರೀ ವೇದಾಂತಾಚಾರ್ಯರು ಶ್ರೀ ಕೃಷ್ಣ - ಶ್ರೀ ಶ್ರೀನಿವಾಸ - ಶ್ರೀ ನಿಧಿ ಪ್ರೀತ್ಯರ್ಥ ವಾಗಿ ರಚಿಸಿದ್ದಾರೆ. ಹೆಚ್ಚೇನು ಹೇಳಲಾದೀತು? ಒಂದು ನುಡಿ ನೆನಪಾ ಗುತ್ತದೆ.

ತಾಯಿಗಿಂತ ಅಪ್ತಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ ಯಾದವಾಭ್ಯುದಯದಂಥ ಕಾವ್ಯ ಇನ್ನೊಂದಿಲ್ಲ, ವೇದಾಂತಾಚಾರ್ಯರಿಗೆ ಸಮಾನಕವಿಯೂ ಇಲ್ಲವೆಂದರೆ ಉತ್ಪ್ರೇಕ್ಷೆಯಾಗದು. ಏಕೆಂದರೆ, ದೈವಭಕ್ತಿ ಪ್ರೇಮ, ಅವರಲ್ಲಿ ಅತಿಶಯ ಅತಿಶಯವಾಗಿ ನೆಲಸಿತ್ತು. (ಶ್ರೀನಿವಾಸನನ್ನು ಕುರಿತ ಅವರ "ದಯಾಶತಕ" ಮತ್ತೇ ಇಲ್ಲಿ ಸ್ಮರಿಸುವ ಅಲ್ಲವೇ?) ಇದೊಂದು ಲೋಕಕ್ಕೆ ಹಿತ ಬಯಸುವ ಕಾವ್ಯ.

ಒಂದು ದೇಶಿಕರ ಸೂಕ್ತಿಯಿಂದ ಈ ಸಾಲುಗಳನ್ನು ಸುಪನ್ನ ಗೊಳಿಸೋಣ:-

ಛಿದ್ರಂ ಜನಯತಾಂ ನೀಚೈರಚ್ಛಿದ್ರಂ ಬಿಭ್ರತಾಂ ಅಪಿ।
ತ್ರಾಸಹೀನಾಸ್ಸುಮಣಯಃ ಸ್ವಭಾವಾದುಪಕುರ್ವತೇ॥

ಒಡಕನ್ನು ಉಂಟುಮಾಡುವ ನೀಚರಿಗಾಗಲೀ ಹೆದರದಂಥ ಒಳ್ಳೆಯ ರತ್ನಗಳು ಒಡಕಿಲ್ಲದುದನ್ನು ಧರಿಸುವವರಿಗಾಗಲೀ ಸ್ವಭಾವತಃ ಉಪಕಾರವನ್ನೇ ಮಾಡುತ್ತವೆ. ಅಂತೆಯೇ ಹೊಗಳಿಕೆಯನ್ನೂ ತೆಗಳಿಕೆ ಯನ್ನೂ ಲಕ್ಷಿಸದ ಸಮಚಿತ್ತರು ಸ್ವಭಾವತಃ ಉಪಕಾರಿಣೇ ಆಗಿರುತ್ತಾರೆ.

- ದೇಶಿಕರ ಸ್ವಭಾವಕ್ಕೆ ಈ ಸಾಲುಸಾಕ್ಷ್ಯಿ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಇಲ್ಲಿರುವ ನೀತಿ ಅನುಸರಣೀಯ ಅಲ್ಲವೇ?



## ತಿರುಮಲೆ ತಿರುಪತಿ ದೇವಸ್ಥಾನಗಳು



### 30-09-2019 ರಿಂದ 08-10-2019 ರ ವರೆಗೆ ನಡೆದ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ವಾಹನ ಸೇವೆಗಳು,ಕಲಾ ಪ್ರದರ್ಶನಗಳ ದೃಶ್ಯಗಳು




ತಿರುಮಲೆ ಮಾಢಬೀದಿಗಳಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರ ಮುಂದೆ ಗರುಡಧ್ವಜದ ಮೆರವಣಿಗೆ



ತಿರುಮಲೆ ಸ್ವಾಮಿಯವರ ಆಲಯದಲ್ಲಿ ಧ್ವಜಸ್ಥಂಭಕ್ಕೆ ಗರುಡಧ್ವಜವನ್ನು ಹಾರಿಸುತ್ತಿರುವುದು



ಅಂಧ್ರಪ್ರದೇಶದ ರಾಷ್ಟ್ರದ ವತಿಯಿಂದ ಸ್ವಾಮಿಯವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ಮುಖ್ಯಮಂತ್ರಿ ಗೌ॥ ಶ್ರೀ ವೈ. ಎಸ್. ಜಗನ್‌ಮೋಹನ್ ರೆಡ್ಡಿ ಯವರು



ನಂತರ ದೊಡ್ಡಶೇಷವಾಹನ ಸೇವೆಯಲ್ಲಿ ಪಾಲ್ಗೊಂಡ ಆಂಧ್ರಪ್ರದೇಶದ ರಾಷ್ಟ್ರ ಮುಖ್ಯಮಂತ್ರಿ ಗೌ॥ ಶ್ರೀ ವೈ.ಎಸ್.ಜಗನ್‌ಮೋಹನ್‌ರೆಡ್ಡಿ ಯವರು

ತಿರುಮಲೆ ತಿರುಪತಿ ದೇವಸ್ಥಾನಗಳು

30-09-2019 ರಿಂದ 08-10-2019 ರ ವರೆಗೆ ನಡೆದ

# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ವಾಹನ ಸೇವೆಗಳ ದೃಶ್ಯಗಳು



ದೊಡ್ಡಶೇಷವಾಹನದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರು !




ಚಿಕ್ಕಶೇಷವಾಹನದಲ್ಲಿ ಸ್ವಾಮಿಯವರು ! ಜೀಯರ್ ಸ್ವಾಮಿಗಳು, ಅಧ್ಯಾಪಕರ ದಿವ್ಯಪ್ರಬಂಧಪಾರಾಯಣ



ಹಂಸವಾಹನದಲ್ಲಿ ಸ್ವಾಮಿಯವರು !



ಸಿಂಹವಾಹನದಲ್ಲಿ ಸ್ವಾಮಿಯವರು !



ಮುತ್ತಿನ ಚಪ್ಪರವಾಹನದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರು!



ಕಲ್ಪವೃಕ್ಷ ವಾಹನದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರು !



ಸರ್ವಭೂಪಾಲ ವಾಹನದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರು !



ಜಗನ್ಮೋಹನಿ ಅಲಂಕಾರದಲ್ಲಿ ಸ್ವಾಮಿಯವರು !

## 30-09-2019 ರಿಂದ 08-10-2019 ರ ವರೆಗೆ ನಡೆದ

# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ವಾಹನ ಸೇವೆಗಳ ದೃಶ್ಯಗಳು



ಗರುಡ ವಾಹನದಲ್ಲಿ ಶ್ರೀ ಗರುಡಾಚಲಪತಿ !



ಹನುಮಂತ ವಾಹನದಲ್ಲಿ ಶ್ರೀ ವೆಂಕಟಾದ್ರಿರಾಮನು !



ಗಜವಾಹನದಲ್ಲಿ ಶ್ರೀನಿವಾಸನು !



ಸೂರ್ಯ ಪ್ರಭವಾಹನದಲ್ಲಿ ಶ್ರೀ ಸಪ್ತಗಿರೀಶನು !



ಚಂದ್ರಪ್ರಭ ವಾಹನದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯವರು !



ಸ್ವರ್ಣ ರಥೋತ್ಸವದಲ್ಲಿ ಶ್ರೀದೇವಿ, ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರು !



ಅಶ್ವವಾಹನದಲ್ಲಿ ಆನಂದನಿಲಯನು !



ಚಕ್ರತೀರ್ಥೋತ್ಸವದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯವರು !

ತಿರುಮಲೆ ತಿರುಪತಿ ದೇವಸ್ಥಾನಗಳು

## 30-09-2019 ರಿಂದ 08-10-2019 ರ ವರೆಗೆ ನಡೆದ

## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ವಾಹನ ಸೇವೆಗಳ ದೃಶ್ಯಗಳು



ಸ್ವಾಮಿಯ ದರ್ಶನಾಂತರ ಆಂಧ್ರಪ್ರದೇಶದ ರಾಜ್ಯಪಾಲರು ಗೌ॥ ಶ್ರೀ ಬಿಶ್ವಭೂಷಣ್ ಹರಿಚಂದನ್‌ರವರಿಗೆ ಸ್ವಾಮಿಯವರ ಚಿತ್ರಪಟವನ್ನು
ತಿ.ತಿ.ದೇ. ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಗೌ॥ ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು,
ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ರವರು ನೀಡಿದರು



ಆಂಧ್ರಪ್ರದೇಶದ ರಾಷ್ಟ್ರ ಮುಖ್ಯಮಂತ್ರಿ ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಯವರಿಗೆ
ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,



ಊಂಜಲ್ ಸೇವೆ



ಸ್ನಪನ ತಿರುಮಂಜನ






ಕಲಾ ಬೃಂದಗಳು







# ಶ್ರೀ ಪದ್ಮಾವತಿ ದೇವಿ ಬ್ರಹ್ಮೋತ್ಸವ

ಮೂಲ.ಡಾ॥ ಎ. ವಿಭೀಷಣಶರ್ಮ
ಅನುವಾದ : ಕೆ. ನರಸಿಂಹಮೂರ್ತಿ

ಶ್ರೀ ಮಹಾವಿಷ್ಣುವು ಭೂಲೋಕದಲ್ಲಿ 108 ದಿವ್ಯ ತಿರುಪತಿಯಲ್ಲಿ ಅರ್ಚಾಮೂರ್ತಿಯಾಗಿ ರಾರಾಜಿಸುತ್ತಿದ್ದಾನೆ. ಅದರಲ್ಲೂ ಸಾಕ್ಷಾತ್ ಸ್ವಯಂ ವ್ಯಕ್ತಮೂರ್ತಿಯಾಗಿ ಶ್ರೀರಂಗ, ಶ್ರೀಮುಷ್ಣಂ, ತೋತಾದ್ರಿ, ಸಾಲಿಗ್ರಾಮ, ನೈಮಿಷ, ಬದರಿಕಾಶ್ರಮ, ಕಂಚಿ, ವೇಂಕಟಾಚಲವೆಂಬ ಎಂಟು ಕ್ಷೇತ್ರಗಳಲ್ಲಿ ಸ್ವಯವ್ಯಕ್ತಮೂರ್ತಿಯಾಗಿ ಪೂಜೆಗಳನ್ನು ತೆಗೆದುಕೊಳ್ಳುತ್ತಿದ್ದಾನೆ. ಈ ಎಂಟು ಕ್ಷೇತ್ರಗಳಲ್ಲಿ ತಿರುಮಲೆಕ್ಷೇತ್ರ ಸ್ವಾಮಿಯ ಪ್ರತ್ಯಕ್ಷ ಮಹಿಮೆಗಳನ್ನು ಸಾಕ್ಷಿಯಾಗಿ ಶೋಭಿತವಾಗಿದೆ. ಆ ಪದ್ಮನಾಭನಾದ ತಿರುಮಲೆಸ್ವಾಮಿಯ ಪಟ್ಟದರಸಿಯಾದ “ಅಲಮೇಲುಮಂಗ” ತಿರುಚಾನೂರಲ್ಲಿ ನೆಲೆನಿಂತಿದ್ದಾಳೆ.

ಅಷ್ಟೇ ಅಲ್ಲದೇ ಕಲಿಯುಗದೈವನಾದ ಶ್ರೀನಿವಾಸ ಪ್ರಭುವು ತಪವನ್ನಾಚರಿಸಿದ ಪುಣ್ಯ ಪ್ರದೇಶವಿದು ತಿರುಚಾನೂರು. ಸೂರ್ಯನಾರಾಯಣನನ್ನು ಮುಂದಿಟ್ಟುಕೊಂಡು ತನ್ನ ಹೃದಯ ಪದ್ಮದಲ್ಲಿ ವಾಸಿಸುವ ಸಿರಿದೇವಿಕ್ಕೋಸ್ಕರ ದೀಕ್ಷೆಯನ್ನು ಹೊಂದಿ 12 ವರ್ಷಗಳವರೆಗೆ ತಪವನ್ನಾಚರಿಸಿದ್ದಾನೆ. - ಅಗಣಿತ ಮಹಿಮೆಗಳ ನೆಲೆಯಾದ ಪದ್ಮಸರೋವರದಿಂದ ಕಾರ್ತಿಕ ಮಾಸ ಶುಕ್ಲಪಕ್ಷದ ಪಂಚಮಿತಿಥಿ, ಉತ್ತರಾಷಾಢ ನಕ್ಷತ್ರದಲ್ಲಿ ಶುಕ್ರವಾರದಂದು ಸ್ವರ್ಣಕಮಲದಲ್ಲಿ ಅವತರಿಸಿದ್ದಾಳೆ.

ಈ ಕ್ಷೇತ್ರದಲ್ಲಿ ಪ್ರತಿವರ್ಷ ವೃಶ್ಚಿಕಮಾಸದ ಪಂಚಮಿಯ ದಿನ ಅವಬೃಥವನ್ನು ಸಂಕಲ್ಪಿಸಿ, ಈ ಒಂಬತ್ತು ದಿನದ ಮುಂಚೆ ಧ್ವಜಾರೋಹಣ ಮಾಡಲಾಗುತ್ತದೆ. ಚಿಕ್ಕ ಶೇಷವಾಹನ ಮೊದಲಾದ ಅನೇಕ ವಾಹನಗಳ ಮೇಲೆ ಅಮ್ಮನವರು ಮೆರವಣಿಗೆ ಹೊರಟು ಬ್ರಹ್ಮೋತ್ಸವದ ತೇರು ಬೀದಿಗಳಲ್ಲಿ ಸುತ್ತುತ್ತಾ ಭಕ್ತರಿಗೆ ಸಕಲ ಸನ್ಮಂಗಳಕರವಾದ ಫಲಗಳನ್ನು ಪ್ರಸಾದಿಸುತ್ತಾಳೆ.

## ಧ್ವಜಾರೋಹಣ

ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನ ಮಡದಿ, ಹೃದಯೇಶ್ವರಿಯ ಬ್ರಹ್ಮೋತ್ಸವವು "ಗಜಧ್ವಜಾರೋಹಣ" ದಿಂದ ಶ್ರೀಕಾರಗೊಳ್ಳುತ್ತವೆ.ಧ್ವಜಾರೋಹಣವು ಬ್ರಹ್ಮೋತ್ಸವದ ಪ್ರತೀಕವಾಗಿ ಆರಂಭ ಗೊಳ್ಳುತ್ತದೆ.ಧ್ವಜಾಲಯವೇ ಧ್ವಜದ ಪರಿಷದೇವತೆಗಳನ್ನು ಮತ್ತಿತರ ಭಕ್ತರನ್ನು ಆಹ್ವಾನಿಸುವುದೇ ಧ್ವಜಾ ರೋಹಣದ ಅಂತರಾರ್ಥ.

## ಚಿಕ್ಕ ಶೇಷವಾಹನ

ಶ್ರೀ ಪದ್ಮಾವತಿ ದೇವಿಯ ಬ್ರಹ್ಮೋತ್ಸವದಲ್ಲಿ ಮೊಟ್ಟಮೊದಲನೇಯದು "ಚಿಕ್ಕ ಶೇಷವಾಹನ". ಶೇಷನು ಶ್ರೀವೈಕುಂಠದಲ್ಲಿ ನಿತ್ಯಸ್ವರೂಪನಾಗಿ ಲಕ್ಷ್ಮೀನಾರಾಯಣರಿಗೆ ಸೇವೆಗಳನ್ನು ಸಲ್ಲಿಸುತ್ತಾನೆ. ಶ್ರೀನಿವಾಸನು ಶೇಷಪರ್ವತದ ಮೇಲೆಯೇ ಶೋಭಿತ ನಾಗಿದ್ದಾನೆ.ಸ್ವಾಮಿಯ ಹೃದಯೇಶ್ವರಿಯಾದ ಪದ್ಮಾವತಿಯ ಪಟ್ಟದರಸಿಗೆ ಜರಗುವ ಕಾರ್ತಿಕ ಮಾಸದ ಬ್ರಹ್ಮೋತ್ಸವದಲ್ಲಿ ಶೇಷನು - ಚಿಕ್ಕ ಶೇಷನಾಗಿ ಸೇವೆಗಳನ್ನು ಸಲ್ಲಿಸುತ್ತಾನೆ. ಶೇಷಾಂಶಭೂತವಾದ ಈ ಪ್ರಪಂಚವು ಸಿರಿದೇವಿಯ ರಕ್ಷಣೆಯಲ್ಲಿ ಸುಖವನ್ನು ಹೊಂದಿದೆ.

## ದೊಡ್ಡ ಶೇಷವಾಹನ

ಶ್ರೀ ಪದ್ಮಾವತಿ ಮಾತೆಗೆ ಕಾರ್ತಿಕದ ಬ್ರಹ್ಮೋತ್ಸವದಲ್ಲಿ ಎರಡನೇಯದು ದೊಡ್ಡಶೇಷವಾಹನ. ಮಹಾಶೇಷನು ನಿತ್ಯಮುಕ್ತರಲ್ಲಿ ಆದ್ಯನಾಗಿ ಲಕ್ಷ್ಮಿ ಸಹಿತನಾದ ಸ್ವಾಮಿಯ ದಾಸನಾಗಿ, ಸಖನಾಗಿ, ಶಯ್ಯೆಯಾಗಿ, ಸಿಂಹಾಸನವಾಗಿ, ಛತ್ರಿಯಾಗಿ ಸಮಯೋಚಿತದಂತೆ ಸೇವೆಗಳನ್ನರ್ಪಿಸುತ್ತಿದ್ದಾನೆ.

ಪರಮಪುರುಷನಾದ ಶ್ರೀನಿವಾಸನ ಹೃದಯೇಶ್ವರಿಯಾದ ಪದ್ಮಾವತಿಯೇ ವಿವಿಧ ಅಂಶಗಳಿಂದ ಜೀವರಿಗೆ ಘನತೆಯನ್ನು ತಂದು ಕೊಡುತ್ತಾಳೆ.ಆ ದಿವ್ಯ ತತ್ತ್ವವನ್ನು " ಓ ತಾಯಿಯೇ! ಮಹಾಲಕ್ಷ್ಮೀ! ಪುರುಷರಲ್ಲಿರುವ ಭಾಗ್ಯಲಕ್ಷಣವು ನಿನ್ನಂಶವೇ! ಸ್ತ್ರೀಯರಲ್ಲಿರುವ ಸುಲಕ್ಷಣವೂ ನಿನ್ನಂಶವೇ,ಗಜ, ತುರಗ, ಮೃಗ-ಪಕ್ಷಿ, ಹಾವುಗಳಲ್ಲಿರುವ ಶ್ರೇಷ್ಠತೆಗಳೂ ನಿನ್ನಂಶವೇ, ಗಿಡ-ಮರ, ಹಸಿರುಬಳ್ಳಿ, ಪಶುಗಳು, ಪಗಡಗಳಲ್ಲಿ ಹೀಗೆ ಒಂದೊಂದರಲ್ಲಿರುವ ಅಸಾಧಾರಣವಾಗಿ ಗೋಚರಿಸುವ ಸಂಪದಗಳೆಲ್ಲ ನಿನ್ನಂಶಗಳೇ" ಎಂದು ಅಗಸ್ತ್ಯರು ಪ್ರತಿಪಾದಿಸಿದ್ದಾರೆ. ಶೇಷವಾಹನದ ಮೇಲಿನ ಅಮ್ಮನವರ ದರ್ಶನವು ವಿಷತುಲ್ಯವಾದ ಮಾನವರ ಪಾಪಗಳನ್ನೆಲ್ಲಾ ತೊಲಗಿಸುತ್ತವೆ.

## ಹಂಸವಾಹನ

ಶ್ರೀ ಪದ್ಮಾವತಿದೇವಿಯು ವಾರ್ಷಿಕ ಬ್ರಹ್ಮೋತ್ಸವದಲ್ಲಿ ಎರಡನೇ ದಿನ ರಾತ್ರಿವೇಳೆ ಹಂಸವಾಹನದ ಮೇಲೆ ಆಶೀನಳಾಗಿ ವೀಣಾಪಾಣಿಯಾಗಿ ದರ್ಶನವೀಯುತ್ತಾಳೆ. ಸರಸ - ಸದ್ಗುಣದ ಶಾರದಾಂಬೆಯಾಗಿ ಅಲಮೇಲುಮಂಗಮ್ಮಾ ದರ್ಶನ ಗೈಯುತ್ತಾಳೆ.ವಾಗ್ದೇವಿಯ ವಾಹನ ಹಂಸ. ಹಂಸಕ್ಕೆ ಹಾಲು - ನೀರನ್ನು ಬೇರೆ ಮಾಡುವ ವಿವೇಕವಿದೆ. ನೀರನ್ನು ಬಿಟ್ಟು ಹಾಲನ್ನು ತೆಗೆದುಕೊಳ್ಳುತ್ತದೆ. ಸಕಲ ವಿದ್ಯೆಗಳೂ ಪದ್ಮಾವತಿ ಅಮ್ಮನವರ ಅನುಗ್ರಹದಿಂದ ಕೈಗೂಡುತ್ತವೆ.

"ವೀಣಾವಾದನ ಮಾಡಿದಳೇ ಅಲಮೇಲುಮಂಗಮ್ಮ
ವೇಣುಗಾನ ಲೋಲನಾದ ವೇಂಕಟೇಶನಿಗಾಗಿ"

- ಎಂದು ಅನ್ನಮಯ್ಯ ಸ್ತುತಿಸಿದ್ದಾರೆ. ನಿತ್ಯ ವೇಣುಗಾನಲೋಲನಾದ ಶ್ರೀವೇಂಕಟೇಶನಿಗಾಗಿ ವೀಣಾವಾದನ ಮಾಡುವ ಅಲಮೇಲುಮಂಗ ಹಂಸವಾಹಿನಿಯಾಗಿ ಅಂದು ತಿರುಮಾಢ ರಥಬೀಧಿಗಳಲ್ಲಿ ವಿಹರಿಸುತ್ತಾಳೆ. ತಾಳ್ಳಪಾಕ ಕವಿಗಳ ಸ್ತುತಿಗಳಲ್ಲಿ ಹೊರಹೊಮ್ಮಿರುವ ನಿನಾದವೆಲ್ಲಾ ಅಲಮೇಲುಮಂಗಮ್ಮ ಅನುಗ್ರಹವೇ. ಯೋಗಿಗಳ ಮನೋವಿಹಾರಿಯಾದ ವೇಂಕಟೇಶ್ವರನ ಮೇಲಿನ ಭಕ್ತಿಯನ್ನು,ಶರಣಾಗತಿಯನ್ನು ಸಮಸ್ತ ಭಕ್ತವೃಂದಕ್ಕೆ ಪ್ರಸಾದಿಸುವ ಕರುಣಾಂತರಂಗದ ಸಾಕಾರ ಅಲಮೇಲುಮಂಗಮ್ಮ.

## ಮುತ್ತಿನ ಚಪ್ಪರದ ವಾಹನ

ಶ್ರೀ ಪದ್ಮಾವತಿದೇವಿ ಮೂರನೇ ದಿನ ಮುಂಜಾನೆ ಮುತ್ತಿನ ಚಪ್ಪರದ ಮೇಲೆ ವಿಹರಿಸುತ್ತಾಳೆ. ಮುತ್ತನ್ನುದುರಿಸುವ ಮುತ್ತುಗಳೆಂದರೆ ಅಲಮೇಲುಮಂಗಮ್ಮಳಿಗೆ ಅತಿಪ್ರೀತಿ.ಸ್ವಾತಿಮಳೆಯ ಹನಿ ಸಾಗರದಲ್ಲಿರುವ ಕಪ್ಪೆಚಿಪ್ಪಿನಲ್ಲಿ ಬಿದ್ದು ಬೆಲೆ ಬಾಳುವ ಮುತ್ತುಗಳಾಗಿ ರೂಪಾಂತರ ಹೊಂದುತ್ತವೆಂದೂ,ಆನೆಯ ಶಿರಮಧ್ಯದ ಕುಂಭಸ್ಥಳದಲ್ಲಿ ಮುತ್ತು ಗಳಿರುತ್ತವೆಂದೂ,ತಾಮ್ರಪರ್ಣಿ ನದಿತೀರದಲ್ಲಿ ದೊರಕುತ್ತವೆಂದೂ,ಕಲ್ಪವೃಕ್ಷದ ಬೇರುಗಳಲ್ಲಿ ಮುತ್ತುಗಳಿರುತ್ತವೆಂದೂ ಪುರಾಣಗಳು ತಿಳಿಸುತ್ತವೆ.ಮುತ್ತುಗಳನ್ನು ಆಭರಣಗಳಾಗಿ ಧರಿಸಲು,ಅಕ್ಷತಾರೋಹಣ ಹಾಕಿಕೊಳ್ಳಲು ಬಳಸುವುದು ಸದಾ ಚಾರ.

ಅಲಮೇಲುಮಂಗಳ ನಗುವೇ ಮುತ್ತು ಮಣಿಗಳಾಗಿ ಆ ಮುತ್ತು ಮಣಿಗಳ ಹಾರವೇ ಶ್ರೀ ವೇಂಕಟೇಶನ ಶ್ಯಾಮದೇಹಕ್ಕೆ ಮನೋಜ್ಞವಾದ ಶೋಭೆಯನ್ನು ತರುತ್ತದೆ. ಬಿಳಿಯದಾದ, ನುಣುಪಾದ ಮುತ್ತಿನ ಹಂದಿರದಲ್ಲಿ ಮೆರವಣಿಗೆ ಹೊರಟ್ಟಿರುವ ಅಲಮೇಲುಮಂಗಮ್ಮನನ್ನು ಸೇವಿಸುವ ಭಕ್ತವೃಂದಕ್ಕೆ ತಾಪತ್ರಯಗಳು ತೊಲಗಿ ಕೈವಲ್ಯ ಭಾಗ್ಯವುಂಟಾಗುತ್ತದೆ. ಆ ಲೋಕಮಾತೆಯನ್ನು ಬ್ರಹ್ಮಾದಿಗಳು ಶ್ರೀ ವೇಂಕಟೇಶ್ವರನ ಕೃಪಾಕಟಾಕ್ಷವನ್ನು ಹೊಂದುವ ಯೋಗ್ಯತೆಯನ್ನು ಪ್ರಸಾದಿಸಬೇಕೆಂದು ಅನುದಿನ ಕೋರಿಕೊಳ್ಳುತ್ತಾರೆ.

### ಸಿಂಹವಾಹನ:

ಕಾರ್ತಿಕ ಬ್ರಹ್ಮೋತ್ಸವದಲ್ಲಿ ಪದ್ಮಾವತಿ ಮಾತೆ ಮೂರನೇ ದಿನ ರಾತ್ರಿ ಸಿಂಹವಾಹನದ ಮೇಲೆ ದರ್ಶನವೀಯುತ್ತಾಳೆ. ಸಿಂಹವು ಪರಾಕ್ರಮ, ಯೋಗಶಕ್ತಿಯ ಪ್ರತೀಕ. ಅಮ್ಮನವರಿಗೆ ಸಿಂಹ ವಾಹನವಾದ ವೇಳೆಯಲ್ಲಿ ದುಷ್ಟಶಿಕ್ಷಣೆ, ಶಿಷ್ಟರಕ್ಷಣೆ ಉಂಟಾಗುತ್ತದೆ. ಭಗವತಿ ಪದ್ಮಾವತಿ ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ (ಪ್ರಭೆ), ಜ್ಞಾನ, ವೈರಾಗ್ಯವೆಂಬ ಆರು ಗುಣಗಳನ್ನು ಭಕ್ತರಿಗೆ ಅನುಗ್ರಹಿಸುತ್ತಾಳೆ.

ಸಾನುರಾಗಿಯಾಗಿ, ಶ್ರೀಹರಿ ವಕ್ಷಃಸ್ಥಳವಿಹಾರಿಣಿಯಾಗಿ ಸ್ತುತಿಸಲ್ಪಡುವ ಅಲಮೇಲುಮಂಗ ಹಿಂಗದ ಸಿರಿಗಳನ್ನೀಯುವ ಮಹಾ ಶಕ್ತಿ ಸ್ವರೂಪಿಣಿ. ಈ ಜಗತ್ತಿನಲ್ಲಿ ಪರಾಕ್ರಮದಿಂದ, ಕಾಂತಿಯಿಂದ ಸ್ಫುಟವಾಗಿ ಗೋಚರಿಸುವ ವೈಭವವನ್ನು ಶ್ರೀನಿವಾಸನು ವಿಭೂತಿಯಾಗಿ ತಿಳಿಸುತ್ತಾನೆ. ಈ ವಿಭೂತಿರೂಪಗಳೆಲ್ಲವೂ ಮೇಳೈಸಿದ ಸಮ್ಮೈಕ್ಯರೂಪವೇ ಸಿಂಹವಾಹನದ ಮೇಲೆ ತಿರುಚಾನೂರು ಬೀದಿಗಳಲ್ಲಿ ಮೆರವಣಿಗೆಯಲ್ಲಿರುವ ಅಲಮೇಲುಮಂಗ. ಅಲಮೇಲುಮಂಗ ಈ ಸೃಷ್ಟಿಗೇ ಪುಷ್ಟಿಕೊಡುವ ಮಂಗಳದೇವತೆ.

### ಕಲ್ಪವೃಕ್ಷವಾಹನ

ಕಲ್ಪವೃಕ್ಷ ಪದ್ಮಾವತಿದೇವಿಗೆ ಬ್ರಹ್ಮೋತ್ಸವಗಳಲ್ಲಿ ನಾಲ್ಕನೇ ದಿನದ ಮುಂಜಾನೆಯ ವಾಹನವಾಗಿದೆ. ಅಮೃತಕ್ಕಾಗಿ ಕ್ಷೀರಸಾಗರ ಮಥನವಾದಾಗ ಲಕ್ಷ್ಮೀದೇವಿಯ ಒಡನಾಡಿ ಬಂದಿದೆ ಈ ಕಲ್ಪವೃಕ್ಷ. ಹಸಿವು - ಬಾಯಾರಿಕೆಗಳನ್ನು ತೊಲಗಿಸಿ ಪೂರ್ವಜನ್ಮ ಸ್ಮರಣೆಯನ್ನು ಅನುಗ್ರಹಿಸುವ ಈ ಉದಾರವೃಕ್ಷ ಎಲ್ಲಾ ಬಯಕೆಗಳನ್ನು ತೀರಿಸಬಲ್ಲದು. ಮಂಗಮ್ಮನ ಪಾದಾರವಿಂದಗಳು ಕಲ್ಪತರುವಿನ ಮೂಲವನ್ನು ತಲುಪಿಸುತ್ತವೆಂದು ಅನ್ನಮಯ್ಯ ಸ್ತುತಿಸಿದ್ದಾನೆ.

ತರುಣಿ ಪಾದಗಳು ಕಲ್ಪತರುವಿನ ಪದತಲಗಳು
ಕರಗದ ಪ್ರಕಾಶವನ್ನೀವ ಅಮರ ಜ್ಯೋತಿಗಳು

ಲಕ್ಷ್ಮಿಯೇ ಪದ್ಮಾವತಿಯಾಗಿ ಕಲಿಯುಗದೈವವಾದ ಶ್ರೀ ವೇಂಕಟೇಶನನ್ನು ಶ್ರೀ ವೈಕುಂಠದಿಂದ ಭೂಮಿಗೆ ತಂದಿದ್ದಾಳೆ. ಆಲಮೇಲುಮಂಗ ಅನುಗ್ರಹದಿಂದ ಉತ್ಸಾಹ, ಉಲ್ಲಾಸ, ಆನಂದಗಳುಂಟಾಗುತ್ತದೆ.

### ಹನುಮದ್ವಾಹನ

ಕಾರ್ತಿಕ ಬ್ರಹ್ಮೋತ್ಸವದಲ್ಲಿ ನಾಲ್ಕನೇ ದಿನ ರಾತ್ರಿ ಅಲಮೇಲುಮಂಗ ಹನುಮದ್ವಾಹನದ ಮೇಲೆ ದರ್ಶನವೀಯುತ್ತಾಳೆ. ಅತುಲ ಬುದ್ಧಿಶಾಲಿಯಾದ ಹನುಮಂತನು ಶ್ರೀ ರಾಮಚಂದ್ರನ ಅನನ್ಯ ಭಕ್ತನು. ತ್ರೇತಾಯುಗದಲ್ಲಿ ಸ್ವಾಮಿಯು ಶ್ರೀರಾಮನಾಗಿ ಅವತರಿಸಿದ್ದಾನೆ. ಶ್ರೀರಾಮನು ಸುಗ್ರೀವನ ಸಹಾಯದಿಂದ ಸೀತಾನ್ವೇಷಣಕಾರ್ಯದಲ್ಲಿ ವಾನರರನ್ನು ಕಳುಹಿಸಿಕೊಟ್ಟಿದ್ದಾನೆ. ಮಾರುತಿ ಸಾಗರವನ್ನು ದಾಟಿ ಲಂಕೆಯನ್ನು ಸೇರಿ ಸೀತೆಯನ್ನು ಅಶೋಕವನದಲ್ಲಿ ಕಂಡಿದ್ದಾನೆ. ಅಕಳಂಕವಾದ ರಾಮನ ಮುದ್ರಿಕೆಯನ್ನು ಸೀತೆಗೆ ತಲುಪಿಸಿದ್ದಾನೆ. ಶ್ರೀರಾಮನ ವಿರಹದಿಂದ ಕೃಷಳಾಗಿ ಅಶ್ರುಧಾರೆಯಿಂದ ಸಂಭಾಷಿಸುವ ಲೋಕಮಾತೆಯ ಅಳುವನ್ನು ಕಂಡು ಹನುಮಂತನು ಕರಗಿ ಹೋಗಿದ್ದಾನೆ. ಶೀಘ್ರದಲ್ಲಿಯೇ ನಿನ್ನನ್ನು ಒಂದು ಕರೆದುಕೊಂಡು ಹೋಗುತ್ತೇನೆಂದು ಹಿತೋಪದೇಶವನ್ನು ಮಾಡಿದ್ದಾನೆ. ವೀರನಾದ ಶ್ರೀರಾಮನು ರಾವಣನನ್ನು ಜಯಿಸಿ ತನ್ನನ್ನು ಕರೆದುಕೊಂಡು ಹೋಗುವುದೇ ಉಚಿತವೆಂದು ಹೇಳಿದ್ದಾಳೆ. ಆ ಸೀತಾಮಾತೆಯೇ ಕಲಿಯುಗದಲ್ಲಿ ಪದ್ಮಾವತಿಯಾಗಿ ಅವತರಿಸಿದ್ದಾಳೆ. ಅರ್ಚಾಮೂರ್ತಿಯಾಗಿ ತಿರುಚಾನೂರಿನಲ್ಲಿ ಪೂಜೆಗೈಸಿ ಕೊಳ್ಳುವವಳಾಗಿದ್ದಾಳೆ. ತನ್ನ ಜಾಡನ್ನು ಸ್ವಾಮಿಗೆ ಅರುಹಿದ ಮಹಾಭಕ್ತನಾದ ಆಂಜನೇಯನ ಕೋರಿಕೆಯನ್ನು ತೀರಿಸಲೋ ಎನ್ನುವಂತೆ ಅಲಮೇಲುಮಂಗ ಬ್ರಹ್ಮೋತ್ಸವದಲ್ಲಿ ಶ್ರೀರಾಮನ ರೂಪದಲ್ಲಿ ಹನುಮಂತನ ವಾಹನವನ್ನು ಆರೋಹಿಸುತ್ತಾಳೆ.

ಈ ಹನುಮಂತನ ಮೇಲೆ ಕುಳಿತಿರುವ ಮಂಗಮ್ಮನ ದರ್ಶನ ಸಮಸ್ತ ಭಕ್ತರಿಗೆ ಬಲವನ್ನು, ಕೀರ್ತಿಯನ್ನೂ, ಧೈರ್ಯವನ್ನು, ಆರೋಗ್ಯವನ್ನು, ಆಜಾಡ್ಯವನ್ನೂ ವಿಶೇಷವಾಗಿ ಅನುಗ್ರಹಿಸುತ್ತದೆ.

## ಪಲ್ಲಕ್ಕಿ ವಾಹನ

ಅಲಮೇಲುಮಂಗಮ್ಮ ಕಾರ್ತಿಕ ಬ್ರಹ್ಮೋತ್ಸವದಲ್ಲಿ ಪಲ್ಲಕ್ಕಿವಾಹನದಲ್ಲಿ ಐದನೇದಿನ ಮುಂಜಾನೆ ದರ್ಶನವೀಯುತ್ತಾಳೆ. ನಮ್ಮ ಮಾತೆಯು ಜಗನ್ಮೋಹಿನಿ, ವಿಶ್ವರೂಪಿಣಿ.ಆ ದೇವಾದೇವಿಯ ವಿಡ್ಯೂರಪಕ್ಕೆ ಸೂರ್ಯ ಚಂದ್ರರು ಜಡೆಬಿಲ್ಲೆಗಳಾಗಿ ಕಂಡಿದ್ದಾರೆ.ಆ ಮಂಗಳ ದೇವತೆಯ ಕೈಲಿರುವ ಗಿಳಿಯು ಗಾಯನ ಮಾಡುತ್ತದೆ.ಬೆಳದಿಂಗಳ ಬಾಲೆಯಾದ ಅಲಮೇಲುಮಂಗಮ್ಮ ಕೂತಿರುವ ಪಲ್ಲಕ್ಕಿಯನ್ನು ಮುದ್ದುಗೌಲಿಯಂತೆ ಕಂಡು ಅನ್ನಮಯ್ಯ ಹೀಗೆ ಬಣ್ಣಿಸಿದ್ದಾರೆ.

ಕುಲುಕದೇ ನಡೆ ಓ ಕೊಂಬೆಗಳೇ
ದುಪ್ಪು ದುಪ್ಪು ಬಿದ್ದ ಜಾಜಿಯ ರಾಶಿ ನಮ್ಮಮ್ಮಗೇ...

ಸೌಂದರ್ಯದ ಖನಿಯಾದ ಅಲಮೇಲುಮಂಗಮ್ಮ "ವಿಭೂತ್ಯೈ ನಮಃ" ಎಂದು ಭಕ್ತರಿಂದ ಸ್ತುತಿಸಲ್ಪಡುತ್ತಾಳೆ. ಅಷ್ಟಸಿದ್ಧಿಗಳೆಂಬ ವಿಭೂತಿಗಳಿಗೆಲ್ಲ ಐಶ್ವರ್ಯದೇವತೆ ನಮ್ಮ ಅಲಮೇಲುಮಂಗ.ಆದ್ದರಿಂದ ಭಕ್ತರಿಗೆ ಪಲ್ಲಕಿ ವಾಹನ ಸೇವೆಯ ಮಾಲಕವೇ ಅಷ್ಟಸಿದ್ಧಿಗಳು ಕೈಗೂಡುತ್ತವೆ.

## ಗಜವಾಹನ

ಕಾರ್ತಿಕ ಬ್ರಹ್ಮೋತ್ಸವದಲ್ಲಿ ಐದನೇ ದಿನ ರಾತ್ರಿ ಪದ್ಮಾವತಿದೇವಿ ಸ್ವರ್ಣಗಜದ ಬೆನ್ನೇರಿ ವಿಹರಿಸುತ್ತಾಳೆ. ಅಂಬಾರಿಯನ್ನು ಆರೋಹಿಸುವುದರಿಂದಲೇ ಅಮ್ಮನವರ ಬ್ರಹ್ಮೋತ್ಸವಗಳು ಆರಂಭಗೊಳ್ಳುತ್ತವೆ. ಅಲಮೇಲುಮಂಗ ವಾಹನ ಸೇವೆಗಳಲ್ಲಿಯೇ ಅತ್ಯುತ್ತಮವಾದುದು ಗಜವಾಹನ ಸೇವೆ ಗುರುತರವಾದುದು. ಅಸಂಖ್ಯಾತ ಭಕ್ತರು ಈ ಸೇವೆಯನ್ನು ಸಲ್ಲಿಸಿ ಧನ್ಯರಾಗುತ್ತಾರೆ. ಐರಾವತವು ಕ್ಷೀರಸಾಗರ ಮಥನದ ವೇಳೆ ಲಕ್ಷ್ಮಿದೇವಿಯೊಂದಿಗೆ ಜನಿಸಿದುದು. ಆನೆಯು ಐಶ್ವರ್ಯ ಸೂಚಕ.ಆದ್ದರಿಂದಲೇ "ಆಗಜಾಂತಂ ಐಶ್ವರ್ಯಂ" ಎಂಬ ಆಯೋಕ್ತಿ. ಪಾಲ್ಗಡದಲ್ಲಿ ಉದ್ಭವಿಸಿದ ಸಿರಿದೇವಿಯನ್ನು ಗಜಗಳು ಭಕ್ತಿಯಿಂದ ಅಭಿಷೇಕ ಗೈದಿರುವುದಾಗಿ ವೇದಾಂತಿಗಳು ಶ್ರೀ ಸ್ತುತಿಯನ್ನು ರಚಿಸಿದ್ದಾರೆ. ಅಷ್ಟದಿಕ್ಕುಗಳ ಜವಾಬ್ದಾರಿಯನ್ನು ಅಷ್ಟದಿಗ್ಗಜರು ವಹಿಸಿಕೊಂಡಿದ್ದಾರೆ. ಕಲಿಯುಗದಲ್ಲಿ ಗಜರಾಜ ಶ್ರೀನಿವಾಸ ಪದ್ಮಾವತಿಯರ ಮುಖ್ಯವಾದ ಕಾರಣವಾಗಿದೆ.

"ನಿನ್ನ ಬಿಟ್ಟು ಅನ್ಯರಿಲ್ಲ ಗತಿಯೆನಗೆ" ಎಂದು ಶರಣಾಗತಿಯನ್ನು ಹೊಂದಿ ಮೊಳಸೆ ಬಾಯಿಂದ ಸಾಕ್ಷಾತ್ ಶ್ರೀಹರಿಯ ಕೈಯಿಂದಲೇ ರಕ್ಷಿಸಲ್ಪಟ್ಟ ಗಜೇಂದ್ರನು ಭಾಗವತೋತ್ತಮನು.ಗಜೇಂದ್ರನು ಆಶ್ರಯಿಸಿದ ಶರಣಾಗತಿಮಾರ್ಗವನ್ನು ಪ್ರತಿಜೀವನೂ ಆಶ್ರಯಿಸಬೇಕೆಂಬ ಸಂದೇಶವನ್ನು ಕೊಡುವ ವಾಹನಸೇವೆಯೇ ಗಜವಾಹನ ಸೇವೆ.

## ಸರ್ವಭೂಪಾಲವಾಹನ

ಕಾರ್ತಿಕ ಬ್ರಹ್ಮೋತ್ಸವದಲ್ಲಿ ಆರನೇದಿನ ಬೆಳಗ್ಗೆ ಸರ್ವಭೂಪಾಲ ವಾಹನದ ಮೇಲೆ ರಾರಾಜಿಸುತ್ತಾಳೆ. ಸಕಲ ಲೋಕೇಶ್ವರನಾದ ವೇಂಕಟೇಶನು ಆ ಶ್ರೀಹರಿಯ ಹೃದಯ ಪೀಠದ ಮೇಲೆ ನಿಂತು ಲೋಕವನ್ನು ಅನುಗ್ರಹಿಸುತ್ತಿರುವ ಕರುಣಾಹೃದಯಿ ಅಲಮೇಲುಮಂಗ.

ಸರ್ವಭೂಪಾಲ ವಾಹನದ ಮೇಲೆ ಆ ದೇವ - ದೇವಿಯನ್ನು - ಸರ್ವಕ್ಕು ನಾಥನಾದ ಸಮುದ್ರನ ಪುತ್ರಿಯಾದ ಈ ಅಲಮೇಲುಮಂಗಮ್ಮನನ್ನು ಸೇವಿಸಿದವರಿಗೆ ರಾಜ್ಯ ಸುಖಪ್ರಾಪ್ತಿಯುಂಟಾಗುತ್ತದೆ.

## ಗರುಡವಾಹನ

ಬ್ರಹ್ಮೋತ್ಸವದಲ್ಲಿ ಪದ್ಮಾವತಿಯು ಆರನೇದಿನ ರಾತ್ರಿ ಗರುಡವಾಹನದ ಮೇಲೆ ಮೆರವಣಿಗೆ ಹೊರಡುತ್ತಾಳೆ ಗರುಡನು ನಿತ್ಯಸೇವಕರಲ್ಲಿ ಅಗ್ರಸ್ಥಾನಿಕರು. "ವೇದಾತ್ಮ ವಿಹಗೇಶ್ವರಃ" ಎಂಬ ಮಾತನ್ನು ಶ್ರುತಿಯು ಬೋಧಿಸುತ್ತದೆ. ಗರುಡನ ಎರಡು ರೆಕ್ಕೆಗಳು ಜ್ಞಾನ - ವೈರಾಗ್ಯಗಳ ಪ್ರತೀಕವಾಗಿವೆಯೆಂದು ಸಂಪ್ರದಾಯಸ್ಥರು ಪ್ರತಿಪಾದಿಸುತ್ತಾರೆ. ಶ್ರೀ ಹರಿಗೆ ಮತ್ತು ಶ್ರೀದೇವಿಗೆ ನಿತ್ಯ ವಾಹನವು ಗರುಡನೇ. ಗರುಡ ಸೇವೆಯನ್ನು 'ಪೆರಿಯತಿರುವಡಿ' ಯೆಂದು ಪರಿಗಣಿಸಲಾಗುತ್ತದೆ. ಭಕ್ತಿಯ ಸಾಕಾರವಾದ ಗರುಡನು ದೇವೇಂದ್ರನ ವಜ್ರಾಯುಧಕ್ಕೆ ಸವಾಲೆಸೆದ ಬಲಶಾಲಿ. 108 ದಿವ್ಯದೇಶಗಳಲ್ಲಿ ಗರುಡಸೇವೆಗೆ ವಿಶೇಷವಾದ ಆದರವಿದೆ.

ಶ್ರೀಹರಿ ಮತ್ತು ಶ್ರೀದೇವಿಯ ನಿತ್ಯವೂ ಗರುಡನು ದಾಸನಾಗಿ, ಚಾಮರವಾಗಿ ಆಸನವಾಗಿ, ವಾಹನವಾಗಿ ಅನೇಕ ಪ್ರಕಾರಗಳಲ್ಲಿ ಸೇವಿಸುತ್ತಾನೆ. ಆದ್ದರಿಂದ ಅಮ್ಮನವರಿಗೆ ಜರಗುವ ಗರುಡಸೇವೆ ಭಕ್ತರಿಗೆ ದಾಸ್ಯ ಭಕ್ತಿಯನ್ನು ಪ್ರಸಾದಿಸುತ್ತದೆ.

### ಸೂರ್ಯಪ್ರಭ ವಾಹನ

ಶ್ರೀ ಪದ್ಮಾವತಿ ಅಮ್ಮನವರು ಕಾರ್ತಿಕ ಬ್ರಹ್ಮೋತ್ಸವದಲ್ಲಿ ಏಳನೇದಿನ ಸೂರ್ಯ ಪ್ರಭವಾಹನದಲ್ಲಿ ವಿಹರಿಸುತ್ತಾರೆ. ಪ್ರಕೃತಿಗೆ ಚೇತೋಹಾರಿಯಾದ, ಸಕಲ ಲೋಕಕ್ಕೇ ಆರೋಗ್ಯವನ್ನು ಅನುಗ್ರಹಿಸುವ ಸಹಸ್ರ ಕಿರಣನು ಈ ಸೂರ್ಯ ನಾರಾಯಣನು.

ಪರಮಾತ್ಮನು ಸೂರ್ಯ ಮಂಡಲ ಮಧ್ಯದಲ್ಲಿರುವ ಅಭ್ಯಾಸ ಹೊಂದಿದವನು. ಇನ್ನು ಶ್ರೀಹರಿಯ ಎದೆಯಲ್ಲಿರುವ ಅಮ್ಮನವರಿಗೆ ಬ್ರಹ್ಮೋತ್ಸವದಲ್ಲಿ 'ಸೂರ್ಯಪ್ರಭ' ವಾಹನವೊದಗಿಸುವುದು ಉಚಿತವೇ.

ಈ ಸೂರ್ಯ ನಾರಾಯಣನ ಸಾಕ್ಷಿಯಾಗಿಯೇ ಸ್ವಾಮಿಯು ತಿರುಚಾನೂರಿನಲ್ಲಿ ತಪವಗೈದು ಕೃತಾರ್ಥನಾಗಿದ್ದಾನೆ ಇಂದಿಗೂ ತಿರುಚಾನೂರಿನಲ್ಲಿ ನಿತ್ಯಪೂಜೆಗೈಯುವ ಸೂರ್ಯದೇವಾಲಯವು ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಸೂರ್ಯಪ್ರಭವಾಹನದಲ್ಲಿ ಅಮ್ಮನವರ ದರ್ಶನ ಆರೋಗ್ಯ, ಐಶ್ವರ್ಯ ಸತ್ಸಂತಾನ, ಸುಜ್ಞಾನ ಮೊದಲಾದ ಫಲಗಳನ್ನು ಸಂಪೂರ್ಣವಾಗಿ ಪ್ರಸಾದಿಸುತ್ತದೆ.

### ಚಂದ್ರಪ್ರಭವಾಹನ

ಶ್ರೀಪದ್ಮಾವತಿ ದೇವಿಗೆ ಬ್ರಹ್ಮೋತ್ಸವದಲ್ಲಿ ಏಳನೇದಿನ ರಾತ್ರಿ ಚಂದ್ರಪ್ರಭವಾಹನ ಬಹು ಘನವಾಗಿ ಶೋಭಿಸುತ್ತದೆ. ಉಪನಿಷತ್ತುಗಳು ಅದರ ಸೇವಕರಾಗಿ ಲೋಕಮಾತೆಯಾದ ಅಮ್ಮನರಿಗೆ ಚಂದ್ರಪ್ರಭಾವಾಹನ ಸಮುಚಿತಗೊಂಡಿದುದೇ. ತನ್ನ ನಗುವಿನ ಬೆಳದಿಂಗಳಲ್ಲಿ ಶ್ರೀ ವೇಂಕಟೇಶ್ವರನಿಗೆ ಆಹ್ಲಾದವನ್ನು ಒದಗಿಸುವ ಅಲಮೇಲುಮಂಗಳಿಗೆ ಚಂದ್ರನು ಶ್ವೇತವಾದ, ಶೀತಲವಾದ ಕಾಂತಿಯುಳ್ಳ ತನ್ನ ಪ್ರಭಾವಳಿಯನ್ನೇ ಆಕೆಗೆ ವಾಹನವಾಗಿ ನೀಡಿದ್ದಾನೆ. ಅಗಸ್ತ್ಯರು ಈ ಚಂದ್ರಮುಖಿಯನ್ನು ಮನೋಹರವಾಗಿ ಬಣ್ಣಿಸುತ್ತಾ

ಚಂದ್ರನ ಕಾಂತಿಯು ನಿನ್ನದು ಚಂದ್ರವದನೆ।
ಸೂರ್ಯನ ಪ್ರಭೆಯು ಆ ನಿನ್ನ ಪದ್ಮನಯನ ।
ದಹಿಸುವಲ್ಲಿ ಅಗ್ನಿಗೇ ಸಾಟಿ।
ನಿನಗ್ಯಾರು ಸಾಟಿಯೇ ಕಲ್ಯಾಣಿಯೇ। ಲಕ್ಷ್ಮೀ।

"ನಿನ್ನ ಮೊಗವು ಚಂದಿರನ ಬೆಳದಿಂಗಳು, ಕಣ್ಣುಗಳು ಸೂರ್ಯಮಂಡಲವು, ದಹಿಸುವ ಶಕ್ತಿ ಅಗ್ನಿಗೂ ಮೀರಿದ್ದು. ನಿನಗೆ ಸಾಟಿ ಯಾರು ಕಲ್ಯಾಣಿಯೇ? ಲಕ್ಷ್ಮಿಯಲ್ಲವೇ ನೀನು" ಎಂದು ತಮ್ಮ ಶರಣಾರ್ಥಿಯನ್ನು ವಿವರಿಸಿದ್ದಾರೆ. ಚಂದ್ರಪ್ರಭವಾಹನದಿಂದ ಭಕ್ತರಿಗೆ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ಮೂರು ತಾಪತ್ರಯಗಳು ತೊಲಗಿ ಜೀವನ ಸುಖಕರವಾಗುತ್ತದೆ.

### ರಥೋತ್ಸವ

ಶ್ರೀ ಪದ್ಮಾವತಿ ದೇವಿಗೆ ಬ್ರಹ್ಮೋತ್ಸವದಲ್ಲಿ ಎಂಟನೇ ದಿನ ಬೆಳಗ್ಗೆ ರಥೋತ್ಸವವು. ವಾಹನಸೇವೆಗಳಲ್ಲಿ ಅತ್ಯುನ್ನತ ವಾದುದು ರಥೋತ್ಸವವು.ರಥೋತ್ಸವವು ಎಷ್ಟೋ ಭಕ್ತ ಜನರು ಬಂದು ಸೇವಿಸಿ ರಥವನ್ನೇಳೆಯಲು ಅವಕಾಶಕೊಡುತ್ತದೆ.

ಆತ್ಮ ರಥಿಕನೆಂದೂ, ಶರೀರವು ರಥವೆಂದೂ, ಬುದ್ಧಿ ಸಾರಥಿಯೆಂದೂ ಮನಸ್ಸು ಹಗ್ಗವೆಂದೂ, ಇಂದ್ರೀಯಗಳು ತುರಗಗಳೆಂದೂ ಅನುಸಂಧಿಸಿ ವಿಷಯಗಳೆಂಬ ಬೀದಿಗಳಲ್ಲಿ ಸಾಗುತ್ತವೆಂದು ಕಂಠೋಪನಿಷತ್ತು ತಿಳಿಸುತ್ತದೆ. ಅಲಮೇಲು ಮಂಗ ರಥದ ಮೇಲೆ ಆರೂಢಳಾಗಿ ಮೆರವಣಿಗೆ ಹೊರಟ ಸಮಯದಲ್ಲಿ ಉಂಟಾಗುವ ಆಧ್ಯಾತ್ಮಿಕ ವಿವೇಕವನ್ನು ಅನ್ನಮಯ್ಯ ತನ್ನ ಪಲುಸಂಕೀರ್ತನೆಯಲ್ಲಿ ವಿವರಿಸಿದ್ದಾರೆ.

### ಅಶ್ವವಾಹನ

ಕಾರ್ತಿಕ ಬ್ರಹ್ಮೋತ್ಸವದಲ್ಲಿ ಪದ್ಮಾವತಿದೇವಿ ಎಂಟನೇ ದಿನ ರಾತ್ರಿ ಅಶ್ವವಾಹನದ ಮೇಲೆ ಮೆರವಣಿಗೆ ಹೊರಡುತ್ತಾಳೆ. ತುರಗವು ಅತಿವೇಗದಿಂದ ಚಲಿಸುವ ಸುಂದರ ಜೀವಿ. ಆದ್ದರಿಂದ ಉಪನಿಷತ್ತುಗಳು ಇಂದ್ರೀಯಗಳನ್ನು ತುರಗಳೆಂದು ವರ್ಣಿಸಿದ್ದಾರೆ. ಅಲಮೇಲುಮಂಗ ಎಲ್ಲಾ ಕೋರಿಕೆಗಳನ್ನು ತೀರಿಸುವ ಏಕೈಕ ಮಾರ್ಗವಾಗಿ, ಸೌಭಾಗ್ಯವಾಗಿ, ರಾಜಸವಾಗಿ ಅಶ್ವವಾಹನ ಸೇವೆಯನ್ನು ಸೂಚಿಸುತ್ತಾಳೆ.


ಪದ್ಮಾವತಿ - ಶ್ರೀನಿವಾಸರ ಕಣ್ಣನ್ನೆ, ಪ್ರಣಯ ಪರಿಣಯ ವೇಳೆ ಅಶ್ವವು ಸಾಕ್ಷಿಯಾಗಿ ನಿಂತಿದೆ. ಅಲಮೇಲುಮಂಗಮ್ಮ ಅಶ್ವವಾಹನ ಸೇವಾ ಸೌಭಾಗ್ಯ ಹೊಂದಿದವರಿಗೆ ಕಲಿದೋಷ - ಬಾಧೆಗಳು ಇರಲಾರವು.

## ಪಂಚಮಿತೀರ್ಥ ಮಹೋತ್ಸವ

ಪಾಂಚರಾತ್ರಾಗಮಗಳಲ್ಲಿ ಸಂಪ್ರದಾಯನುಸಾರ ಈ ಕ್ಷೇತ್ರದಲ್ಲಿ ಎಲ್ಲಾ ಬಗೆಯ ಅರ್ಚನೆಗಳನ್ನು ನಿರ್ವಹಿಸಲಾಗುತ್ತದೆ.

ಪಂಚಭೂತರೂಪಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ವಿಷಯ ಸುಖಭೋಗಗಳಿಂದ ಮನುಷ್ಯನನ್ನು ವಿಮುಖಗೊಳಿಸಿ ಪರಮಾತ್ಮನ ಸೇವೆಯಲ್ಲಿ ನಿರತಗೊಳಿಸುವುದೇ ಪಾಂಚರಾತ್ರಶಾಸ್ತ್ರ, 'ಪಾಂಚರಾತ್ರಮೇವ ಪಾಂಚರಾತ್ರಮ್' ಐದುರಾತ್ರಿಗಳಲ್ಲಿ ಸಾಕ್ಷಾತ್ ಶ್ರೀಮನ್ನಾರಾಯಣನು ಲಕ್ಷ್ಮಿ, ಬ್ರಹ್ಮ, ಅನಂತ, ಗರುಡ, ವಿಶ್ವಕ್ಸೇಸನೆಂಬ ಐವರಿಗೆ ಬೋಧಿಸಿದ ಅರ್ಚನಾವಿಧಿಯಿದು. ಈ ಪಾಂಚರಾತ್ರ ಸಂಹಿತೆಯನ್ನು 108 ವಿದ್ವಾಂಸರು ವಿವರಿಸಿದ್ದಾರೆ.

ಈ ವಿಶೇಷವಾದ ದಿನದಂದು ಶ್ರೇಷ್ಠವಾದ ಪೂಜೆಗಳನ್ನು ನಿರ್ವಹಿಸಲಾಗುತ್ತದೆ. ತನ್ನ ಮಡದಿಗೆ ತಿರುಮಲೆಯಿಂದ ಸ್ವಾಮಿಯು ತುಳಸಿ ಕುಂಕುಮ, ಅರಿಶಿನ, ಪೀತಾಂಬರ, ಮೊದಲಾದುವುಗಳನ್ನು ಆನೆಯ ಮೇಲೆ ಮೆರವಣಿಗೆ ಮಾಡುತ್ತಾ



ತಂದು ತಿರುಚಾನೂರು ಆಲಯಕ್ಕೆ ರಾಜಮರ್ಯಾದೆಯೊಂದಿಗೆ ತಲುಪಿಸಲಾಗುತ್ತದೆ. ಸುದರ್ಶನ ಸ್ವಾಮಿಯೊಡಗೂಡಿ ಅವಬೃಥಸ್ನಾನಕ್ಕೆ ಬ್ರಹ್ಮೋತ್ಸವ ಆಯಾಸ ಪರಿಹಾರಾರ್ಥವಾಗಿ ಉತ್ಸವಮೂರ್ತಿಯಾಗಿ ಅಮ್ಮನವರು ಪದ್ಮಸರೋವರ ತೀರಕ್ಕೆ ಬರುತ್ತಾರೆ. ಕಾರ್ತಿಕ ಪಂಚಮಿಯದಿನ ತಿರುಮಲೆಯಲ್ಲಿ ಶ್ರೀನಿವಾಸನಿಗೆ ಅಮ್ಮನವರ ಚಕ್ರಸ್ನಾನವಾಗುವವರೆಗೂ ಸೇವೆಗಳನ್ನು ನಿರ್ವಹಿಸಲಾಗುವುದಿಲ್ಲ. ಹಾಲು ಮೊಸರು, ಜೇನು, ಅರಿಶಿನ ಎಳೆನೀರಿನೊಂದಿಗೆ ಜರಗುವ ಅಭಿಷೇಕವು ಮನೋಹರವಾದುದು. ಅರಿಶಿನ - ಕುಂಕುಮಗಳನ್ನು ಕಡೆವರೆಗೂ ಹೊಂದಲು ಪಂಚಮಿ ತೀರ್ಥಕ್ಕೆ ಬರುವ ನಾರಿಯರು, ಕರಗದಸಿರಿಯನ್ನೂ ಆಮುಷ್ಮಿಕ ಪ್ರಾಪ್ತಿಯನ್ನು ಹೊಂದಲು ಬರುವ ಭಾಗವತರೂ ಇದನ್ನೆಲ್ಲಾ ಕಣ್ಣಾರೆ ನೋಡಿ ಧನ್ಯರಾಗುತ್ತಾರೆ. ಚಕ್ರಸ್ನಾನಾಂತರ ಸಾವಿರಾರು ಭಕ್ತರು ಪದ್ಮಸರೋವರ ಸ್ನಾನದಿಂದ ಕೃತಾರ್ಥರಾಗುತ್ತಾರೆ. ಪದ್ಮಸರೋವರದಲ್ಲಿ ಪಂಚಮಿತೀರ್ಥದ ವೇಳೆ ಸ್ನಾನ ಮಾಡುವ ಸೌಭಾಗ್ಯ ಕೋಟಿಜನ್ಮಗಳ ಪುಣ್ಯ ಫಲವೇ ಸರಿ.

**ಜಗನ್ಮಾತೆ! ಅಲಮೇಲುಮಂಗಾ!! ಪಾಹಿಮಾಂ!!!**



# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಬ್ರಹ್ಮೋತ್ಸವಗಳು

**23-11-2019**
ಶನಿವಾರ
ಹಗಲು: ಧ್ವಜಾರೋಹಣ
ರಾತ್ರಿ: ಚಿಕ್ಕಶೇಷವಾಹನ

**24-11-2019**
ಭಾನುವಾರ
ಹಗಲು: ದೊಡ್ಡಶೇಷವಾಹನ
ರಾತ್ರಿ: ಹಂಸವಾಹನ

**25-11-2019**
ಸೋಮವಾರ
ಹಗಲು: ಮುತ್ತಿನಚಪ್ಪರ ವಾಹನ
ರಾತ್ರಿ: ಸಿಂಹವಾಹನ

**26-11-2019**
ಮಂಗಳವಾರ
ಹಗಲು:ಕಲ್ಪವೃಕ್ಷವಾಹನ
ರಾತ್ರಿ: ಹನುಮದ್ವಾಹನ

**27-11-2019**
ಬುಧವಾರ
ಹಗಲು: ಪಲಕ್ಕಿ ಉತ್ಸವ
ಸಾ॥ ವಸಂತೋತ್ಸವ
ರಾತ್ರಿ: ಗಜವಾಹನ

**28-11-2019**
ಗುರುವಾರ
ಹಗಲು: ಸರ್ವಭೂಪಾಲವಾಹನ,
ರಾತ್ರಿ: ಗರುಡುವಾಹನ

**29-11-2019**
ಶುಕ್ರವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**30-11-2019**
ಶನಿವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**01-12-2019**
ಭಾನುವಾರ
ಹಗಲು: ಚಕ್ರಸ್ನಾನ,
ಪಂಚಮೀತೀರ್ಥ
ರಾತ್ರಿ: ಧ್ವಜಾವರೋಹಣ


## ॥ ಹರೇ ಶ್ರೀನಿವಾಸ ॥



# ಸಿದ್ಧ ಸಾಧನ - ಬಿಂಬಕಾಂಬುದಕೆ

ಶ್ರೀ ವಿಜಯದಾಸರ್ಯಕೃತ
ಕಂಕಣಾಕಾರ ಸುಳಾದಿ
ಆಧಾರಿತ ಚಕ್ರಾಬ್ಧ
ಮಂಡಲದ ಚಿಂತನೆ
- ವಿವರಣೆ.

ಎಲ್ಲ ಜಾತಿ ಜನಾಂಗದ ಪ್ರತಿಯೊಬ್ಬ ಸಾತ್ವಿಕ ಚೇತನದ ಹೃದಯ ಪೀಠವನ್ನು ಹರಿ ಪೀಠವನ್ನಾಗಿ ಮಾರ್ಪಡಿಸ ಬಲ್ಲ ಮಂತ್ರ ಶಕ್ತಿ ದಾಸವಾಣಿಗೆ ಮೀಸಲು. ವ್ಯಾಸ ವಾಣಿಯ ಉತ್ತುಂಗ ಶೃಂಗದ ಗಂಗೋತ್ರಿಯಲ್ಲಿ ಮಡುಗಟ್ಟಿದ ಜ್ಞಾನವಾಹಿನಿಯನ್ನು ಶ್ರೀಸಾಮಾನ್ಯನ ಮೈದಾನಕ್ಕೆ ಇಳಿಸಿ, ತುಟಿ ತಟದವರೆಗೂ ತುಳುಕಿಸಿರುವ ಭಗೀರಥ ಕಾರ್ಯವನ್ನು ದಾಸವಾಣಿಯು ಎಂದಿನಿಂದಲೂ ದಕ್ಷತೆಯಿಂದ ಗೈಯುತ್ತಲೆ ಇದೆ.



ಸೃಷ್ಟಿರಹಸ್ಯವನ್ನು ತಿಳಿಸುವ ಮೂಲಕ ಆಗಮ್ಯ ಮಹಿಮನಾದ ಭಗವಂತನಲ್ಲಿ ಭಕ್ತಿ ಮೂಡಿಸುವುದೇ ದಾಸರ ಗುರಿ. ಆಧ್ಯಾತ್ಮತತ್ವ ಚಿಂತನೆಗಳ ಅನುಷ್ಠಾನಕ್ಕೆ ಅನುಭಾವಿಗಳು ಅಪರೋಕ್ಷ ಜ್ಞಾನಿಗಳು ತಮ್ಮ ಉಪಾಸನಾ ಕ್ರಮಗಳಲ್ಲಿ ಮಾನಸ ಪೂಜಾ ಪ್ರಕರಣಗಳಲ್ಲಿ ಧ್ಯಾನದ ಮಜಲನ್ನು ಗದ್ಯಪದ್ಯ ಸುಳಾದಿಗಳ ಮೂಲ ಕನ್ನಡ ಸಾಹಿತ್ಯ ಔನ್ನತ್ಯವನ್ನು ಅತಿ ಎತ್ತರಕ್ಕೆ ಕೊಂಡೊಯ್ದು ಅಂತರಂಗ ಸಾಧಕ ವೃಂದಕ್ಕೆ ರಸದೌತಣವನ್ನು ನೀಡಿ ಮಾಡಿದ ಉಪಕಾರ ಅಪಾರ ಚಿರಸ್ಮರಣೀಯ.

ಮೋಕ್ಷವನ್ನು ಹೊಂದುವುದಕ್ಕೆ ಭಕ್ತಿಯು ಪ್ರಧಾನ ಸಾಧನ. ಅದರಂತೆ ಯೋಗ ಮಾರ್ಗವು ಮುಕ್ತಿಗೆ ಸಾಧನ. ಆದರೆ ಯೋಗ ಮಾರ್ಗದಲ್ಲಿಯೂ ಭಕ್ತಿಯು ಅನಿವಾರ್ಯವಾಗಿದೆ. ಬಿಂಬೋಪಾಸನೆಯೇ ಪ್ರಮುಖ ಸಾಧನ. ಇದೇ ಋತ-ಸತ್ಯಗಳ ಸಮನ್ವಯ.

ಋತ ಇದು ಮನಸ್ಸಿನ ಧರ್ಮ ಎಲ್ಲದರ ಸರಿಯಾದ ಜ್ಞಾನವೇ ಋತ. ಇದು ಮೊದಲ ಹಂತ. ಜ್ಞಾನವನ್ನು ಸದಾ ಪ್ರಯೋಗದಲ್ಲಿ ತರುವುದು ಸತ್ಯ. ಹೀಗೆ ಅರಿವು ಆಚಾರ ಗಳನ್ನು ಒಂದು ಗೂಡಿಸಿಕೊಳ್ಳುವುದೇ ಸಾಧನ, ಮನಸ್ಸಿನಲ್ಲಿ ಸದಾ ಮಾಡುವ ಬಿಂಬಾನುಸಂಧಾನ, ಉಪಾಸನೆಯೇ ಧ್ಯಾನ. ಇದು ಮಾನಸ ಪೂಜೆ, ಮೇಲ್ಮಟ್ಟದ ಪೂಜೆ. ಇದಕ್ಕೆ ಶಾಸ್ತ್ರಜ್ಞಾನ ಅವಶ್ಯ.

'ಒಳಗಣ್ಣಿನಿಂದಲೆ ನೋಡಮೋ ಮೂಜಗದೊರೆಯ' ಇದು ಶ್ರೀ ಪುರಂದರದಾಸರ ಅಂತರಂಗದ ಅತ್ಯಂತ ಮಹತ್ವದ ಪದ್ಮ ಭಗವಂತನ ಸ್ವರೂಪವನ್ನು ತಿಳಿಗಣ್ಣಿನಿಂದಲಿ ಕಂಡರು, ಸಾಧಕರಿಗೆ ದಾರಿ ತೋರಿದರು. ಅಂತೆಯೇ ಈ ಚಕ್ರಗಳನ್ನು ಶೋಧಿಸುವ ಪ್ರಕ್ರಿಯೆಯಾದ 'ಚಕ್ರಾಬ್ಜಮಂಡಲದ' ಹೊರ ತೋರಣ, ಒಳಹೊರಣ ಎರಡನ್ನೂ ಸಮಗ್ರವಾಗಿ ಸಮರ್ಥವಾಗಿ ಪರಿಚಯಿಸಿದವರು ವಿಜಯದಾಸರು.

### ತಂತ್ರದ ಹೊಸ್ತಿಲಲ್ಲಿ

ಆಧುನಿಕ ಸಮಾಜದಲ್ಲಿ ಆಧ್ಯಾತ್ಮದ ಬಗ್ಗೆ ಆಸಕ್ತಿ ಇದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ತೊಡಗಿಸಿ ಕೊಂಡವರು ಸಾಕಷ್ಟಿದ್ದಾರೆ. ಯೋಗ ಪ್ರಾಣಾಯಾಮ, ವಿವಿಧ ಧ್ಯಾನ ಚಿಕಿತ್ಸೆಗಳು ಪ್ರಚಲಿತವುಂಟು, ಇದಲ್ಲದೆ ತಂತ್ರದ ಬಗ್ಗೆ ವಿಶೇಷ ಆಸಕ್ತರಿದ್ದಾರೆ, ಅದರ ಹೆಸರು ಮಾತ್ರ ಕೇಳಿದವರಿದ್ದಾರೆ.

ತಂತ್ರದ ಹೆಸರಿನಲ್ಲಿ ತಮಗೆ ತಿಳಿದದ್ದನ್ನೆಲ್ಲ ಹೇಳಿ ಇದೆಲ್ಲ ತಂತ್ರ ಎಂದು ಹೇಳುವ ಅಭಿನವ 'ತಾಂತ್ರಿಕರೂ ಹೇರಳವಾಗಿದ್ದಾರೆ. ಈ ಸೃಷ್ಟಿಗೊಂದು ಅರ್ಥವಿದೆ. ಉದ್ದೇಶವಿದೆ ಅದೆಂದರೆ ಎಲ್ಲೆಡೆ ದೈವೀಕತೆಯ ಸಾಕ್ಷಾತ್ಕಾರವನ್ನು ಸಾಧ್ಯಗೊಳಿಸುವುದು ತಂತ್ರ ಬದುಕನ್ನು ಲೌಕಿಕ, ಆಧ್ಯಾತ್ಮಿಕ ಎಂದು ಗೆರೆಮಾಡಿ ತೋರಿಸಿಲ್ಲ ಏಕೆಂದರೆ ಇಡೀ ಬದುಕೆ ಪವಿತ್ರ, ಸುಂದರ, ದೈವಿಕ, ಬಳಸಲು ಯೋಗ್ಯ ಎಂಬುದು ತಂತ್ರದ ಮುಖ್ಯ ನಿಲುವು ಇಂದಿನ ಆಧುನಿಕ ಬದುಕಿನಲ್ಲಿ ತಂತ್ರದ ಬಗ್ಗೆ ಮೂಲ ಗ್ರಂಥಗಳನ್ನು ಓದುವುದು ಕಷ್ಟ ಆ ಗ್ರಂಥಗಳು ದೊರಕುವುದು ಕಷ್ಟ, ಅದರಲ್ಲಿ ಇಂದಿನ ಬದುಕಿಗೆ ಬೇಕಾದ ಅನುಭವ, ವಿವೇಕಗಳ ಭಂಡಾರವಿದೆ.

ತತ್ತ್ವಜ್ಞಾನ ಶಾಸ್ತ್ರಗಳ ತಾತ್ವಿಕ ಭಾಗವಾದರೆ, ತಂತ್ರ ಶಾಸ್ತ್ರ ತತ್ತ್ವಜ್ಞಾನದ ಪ್ರಾಯೋಗಿಕ ಭಾಗ ಅವೆರೆಡೂ ಜೊತೆಯಾದಾಗ ಮಾತ್ರವೇ ಸಿದ್ಧಿಯ ಪೂರ್ಣತೆ, ಅನುಸಂಧಾನವಿಲ್ಲದ ಪ್ರಯೋಗ, ಪ್ರಯೋಗವಿಲ್ಲದ ಅನುಸಂಧಾನ ಇವೆರಡೂ ಒಂಟಿ ರೆಕ್ಕೆಯ ಹಕ್ಕಿಗಳು, ಅದು ಎಂದೂ ಗಗನದಲ್ಲಿ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಹಾರಲಾರದು. ಯೋಗಿಗಳಿಗೆ ಇವೆರಡೂ ಬೇಕು (ತತ್ತ್ವಜ್ಞಾನ ಮತ್ತು ತಂತ್ರಶಾಸ್ತ್ರ) ಎಂಬುದನ್ನು ಶ್ರೀ ಮಧ್ವರು ತೋರಿಸಿ ಕೊಟ್ಟಿದ್ದಾರೆ.

**ಬಿಂಬೋಪಾಸನೆ**

ದಾಸಸಾಹಿತ್ಯವು ತಾತ್ವಿಕ ಜಗತ್ತಿಗೆ ಕೊಟ್ಟ ಪರಮ ಕೊಡುಗೆಯೆಂದರೆ ಬಿಂಬೋಪಾಸನೆ, ಇದು ಅನುಭವದಿಂದ ಸಿದ್ಧವಾದುದು.ಸಾಧನ ಮಾರ್ಗಕ್ಕೆ ಸೇರಿದ್ದು, ಅನುಭವ ಕ್ಕಿರುವ ಅದ್ಯತೆ ವಿವರಣೆಗೆ ಇರುವುದಿಲ್ಲವಷ್ಟೇ .

ಉಪಾಸನೆ ಎಂಬ ಮಾತಿಗೆ ಮಾನಸದಿಂದ ಕಂಡು ಕೊಂಡು ನಿಶ್ಚಿತ ತತ್ತ್ವ ಅದರ ಸಮೀಪ ಸೇರುವುದು ಇಲ್ಲಿ ನಿಶ್ಚಿತ ತತ್ತ್ವ ಎಂದರೆ ವಿಷ್ಣು. ಇಲ್ಲಿಯ ವಿಷ್ಣು, ಪುರಾಣಕ್ಕೆ ಸೇರಿದ ಬಳಕೆಯ ರೂಪದ ದೇವರಲ್ಲ. ಬ್ರಹ್ಮಮೀಮಾಂಸೆ ಯಲ್ಲಿ ಜಿಜ್ಞಾಸೆಯಾಗಿ ಬರುವ ಬ್ರಹ್ಮ.

ಬಿಂಬೋಪಾಸನೆಗೆ ಬೇಕಾಗಿರುವುದು ಧ್ಯಾನ. ಪೂಜೆ ಯಲ್ಲಿ ಎರಡು ಬಗೆಗಳುಂಟು - ಸ್ಥೂಲ ಮತ್ತು ಸೂಕ್ಷ್ಮ. ಸ್ಥೂಲ ಪೂಜೆ ಬಾಹ್ಯಂಗವಾದುದು.ಸೂಕ್ಷ್ಮ ಪೂಜೆ ಮಾನಸ ವಾದುದು. ಭಕ್ತಿಯ ಕಾವಿನಲ್ಲಿ ಧ್ಯಾನದ ಪರಿಪಾಕವನ್ನು ಮೈ ಗೂಡಿಸಿಕೊಂಡ ಒಂದು ಪರಮವಿಧಾನವೇ ಬಿಂಬೋ ಪಾಸನೆ.

ಎಲ್ಲ ವಸ್ತುಗಳಲ್ಲಿ ಅದೂ ಆಕಾರಗಳಿಂದ ಇದ್ದು ಕೊಂಡು ಎಲ್ಲ ಕಾರ್ಯಗಳನ್ನು ನಿರ್ವಹಣೆ ಮಾಡುತ್ತದೆ. ಇದು ಬಿಂಬದ ಪರಮಶಕ್ತಿ, ಈ ಬಿಂಬವು ಸ್ವತಂತ್ರ, ಆದರೆ ಪ್ರತಿ ಬಿಂಬವು ಪರತಂತ್ರ ಬಿಂಬ ಆಡಿದಂತೆ ಪ್ರತಿಬಿಂಬವೂ ಆಡುತ್ತದೆ.ದೇಹ ಆಡಿದಂತೆ ಅದರ ನೆರಳು ಆಡುವುದನ್ನು ನಾವು ಅನುಭವದಿಂದ ಬಲ್ಲೆವಷ್ಟೇ? "ನಾಹಂ ಕರ್ತಾಃ ಹರಿಃ ಕರ್ತಾಃ" ಎನ್ನುವ ಈ ಮಾತಿಗೆ ಇದೇ ಅರ್ಥ, ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕಷ್ಟೇ.!

ದಾಸಕೂಟದವರು 'ಹರಿದಾಸ' ರೆಂದೇ ಅದುದು ಏಕೆ ವಿಷ್ಣುವಿಗೆ ಹಲವಾರು ಹೆಸರುಗಳಿದ್ದರೂ ಇದೊಂದನ್ನು ದಾಸರು ಆರಿಸಿಕೊಂಡಿದ್ದೇಕೆ? ಮಧ್ವಾಚಾರ್ಯರು ತಮ್ಮ ಗೀತಾ ಭಾಷ್ಯದಲ್ಲಿ ಸರ್ವೇಷಾಂ ಬಿಂಬರೂಪೋ ಹರಿರೇವ ಎಂದು ಹೇಳಿರುವುದೇ ಕಾರಣ.

ಸದಾಚಾರ ಸದ್ವಿಚಾರಗಳಿಂದ ಪ್ರತಿಕ್ಷಣ ಮಾನಸ ಪೂಜೆ ಮಾಡುತ್ತ ಮನಸ್ಸಿನಲ್ಲಿ ಭಗವಂತನ ಬಿಂಬವನ್ನು ನೆಲೆಗೊಳಿಸಿ ಪೂಜಿಸುವ ಪರಿಯನ್ನು ಪರಿಚಯಿಸುವುದೇ ಚಕ್ರಾಬ್ಜಮಂಡಲ.

ದಾಸ ಸಾಹಿತ್ಯದ ಒಂದು ಘಟ್ಟದಲ್ಲಿ ಮಧ್ವಾಚಾರ್ಯರ 'ತಂತ್ರಸಾರ ಸಂಗ್ರಹ' ವೆಂಬ ಗ್ರಂಥ ಮುಖ್ಯವಾಯಿತು. ಅಲ್ಲಿಯವರೆಗೂ ಅದು ಸರ್ವಮೂಲ ಗ್ರಂಥದಲ್ಲಿ ಸೇರಿದ್ದರೂ ಪಂಡಿತರ ಗಮನವನ್ನು ಅಷ್ಟಾಗಿ ಸೆಳೆದಿರಲಿಲ್ಲ. ತಂತ್ರಸಾರ ಸಂಗ್ರಹವು ದಾಸಕೂಟದಲ್ಲಿ ಹೆಚ್ಚಾಗಿ ಮಾನ್ಯವಾದುದು ವಿಜಯದಾಸರ ಕಂಕಣಾಕಾರ ಸುಳಾದಿಯಿಂದ.


ಹರಿದಾಸರ ಆಧ್ಯಾತ್ಮಿಕ ನಿಲುವು. ಸಾಧನಾಭಾಗ ಸ್ಪಷ್ಟ ವಾಗುವುದು ಇಲ್ಲಿಯೇ, ತಂತ್ರಸಾರ ಸಂಗ್ರಹದಲ್ಲಿ ಮೂಲ ಭೂತವಾದ ಮತ್ತು ವಿಶಿಷ್ಟವಾದ ಪ್ರಮೇಯಗಳ ಕಟ್ಟು ಪಾಡು ಕಡಿಮೆ. ಇದು ಯಾವ ಸಂಪ್ರದಾಯ ಸಾಧಕನಿಗೂ ಉಪ ಯುಕ್ತವಾದ ಗ್ರಂಥ ಹರಿದಾಸರ ಧೋರಣೆ ಉದಾರ ವಾಗುವುದು ಹೀಗೆ.

**ಮಂಡಲ**

ಮಂಡಲವು ಅಲಂಕಾರಿಕ ಮುದ್ರೆಯನ್ನು ಬಿಂಬಿಸು ತ್ತದೆ. ಅದು ಸಾಮಾನ್ಯವಾಗಿ ವೃತ್ತಾಕಾರದಲ್ಲಿರುತ್ತದೆ. (ಆದ್ದ ರಿಂದಲೇ ಸೂರ್ಯಮಂಡಲ,ಚಂದ್ರಮಂಡಲ,ತೇಜೋ ಮಂಡಲ) ಮತ್ತು ಅದು ಸರ್ವವ್ಯಾಪಕವಾದ ಬೆಳಕನ್ನು ಹರಡುತ್ತದೆ. ಮಂಡಲವು ಬಿಂದುವಿನ ಸಹಜ ವಿಸ್ತರಣೆ ಯಾಗಿದೆ.

ಮಂಡಲದ ಸಿದ್ಧಾಂತವು ಭಕ್ತನು ಮಂಡಲದೊಳಗೆ ಸಾಂಕೇತಿಕವಾಗಿ ಪ್ರವೇಶಿಸಿ ಅದರೊಳಗೆ ಇರುವ ಶಕ್ತಿಯನ್ನು ಪಡೆಯುವುದಕ್ಕೆ ಅವಕಾಶ ನೀಡುತ್ತದೆ.ಈ ಅರ್ಥದಲ್ಲೆ ಮಂಡಲವು ತನ್ನೊಳಗೆ ಒಂದು ವಿಶ್ವವಾಗಿದೆ ಅಥವಾ ಅಣು ವಿನಲ್ಲೇ ಇರುವ ಬ್ರಹ್ಮಾಂಡವಾಗಿದೆ. ಆದ್ದರಿಂದಲೇ ಎಲ್ಲಾ ಜಗತ್ತು ಗಳನ್ನು ಬ್ರಹ್ಮಾಂಡದ ವಿವಿಧ ವಿಭಾಗಗಳನ್ನು ಈ ಮಂಡಲದಲ್ಲಿ ಮೂಡಿಸಲಾಗುತ್ತದೆ.ಇದರ ಕೇಂದ್ರ ಬಿಂದುವಿನಲ್ಲಿ ದೇವರನ್ನು ಅದರಂದು ಅವತಾರದಲ್ಲಿ ಗುರುತಿಸಲಾಗುತ್ತದೆ.





ಮಂಡಲದ ಮೂಲಕ ಸ್ವಯಂಸಾಕ್ಷಾತ್ಕಾರ ಬಯಸುವ ಸಾಧಕನು ವಸ್ತು ಚಿಂತನೆ ಯಾಚೆ ಇರುವ ಒಳಜಗತ್ತಿನತ್ತ ನಡೆಯಬೇಕಾಗುತ್ತದೆ. ಈ ಚಲನೆಯಲ್ಲಿ ಮಂಡಲದ ವಿನ್ಯಾಸವು ಅವನಿಗೆ ತಾರತಮ್ಯಗಳನ್ನು ಸರಿಪಡಿಸಿಕೊಳ್ಳಲು ಒಳ ಆಯಾಮಗಳನ್ನು ಕಲ್ಪಿಸಿಕೊಳ್ಳಲು ಮಾನಸಿಕ ಶಕ್ತಿಯನ್ನು ಎಚ್ಚರಿಸಿಕೊಳ್ಳಲು ಒಂದು ಅವಕಾಶವನ್ನು ನೀಡುತ್ತದೆ.

**ಚಕ್ರಾಬ್ಜಮಂಡಲ**

ಚಕ್ರಾಬ್ಜ ಮಂಡಲದ ಕುರಿತು ಮಧ್ವಾಚಾರ್ಯರು ಕೊಟ್ಟಿರುವ ವಿವರಣೆ ಅತ್ಯಂತ ಸೂಕ್ಷ್ಮವಾಗಿದೆ. ವ್ಯಾಖ್ಯಾನಕಾರರು ಕೂಡ ಇದರ ಕಡೆಗೆ ಹೆಚ್ಚಿನ ಗಮನವನ್ನೇನೂ ಕೊಟ್ಟಂತಿಲ್ಲ. ಆದರೆ ಇತರ ಕೆಲವು ಗ್ರಂಥಗಳ ಆಧಾರದಿಂದ ನಾವು ಚಕ್ರಾಬ್ಜಮಂಡಲದ ಪರಿಚಯ ಮಾಡಿಕೊಳ್ಳಬಹುದು.

ಪ್ರಕೃತ ಚಕ್ರಾಬ್ಜ ಮಂಡಲದ ವಿವರವನ್ನು ನಿರೂಪಿಸುವ ಗ್ರಂಥಗಳೂ ಹೆಚ್ಚಿಲ್ಲ. ಪಂಚರಾತ್ರಾಂತರ್ಗತವಾದ ವಿಷ್ಣು ಸಂಹಿತೆಯಲ್ಲಿ ಮಾತ್ರ ಇದರ ಲಕ್ಷಣವನ್ನು ಅಸ್ಫುಟವಾಗಿ ನಿರೂಪಿಸಿದ್ದಾರೆ.

ನಾರಾಯಣ ಪಂಡಿತಾಚಾರ್ಯರರು ತಮ್ಮ 'ಯೋಗ ದೀಪಿಕಾ'ದಲ್ಲಿ ತಕ್ಕಮಟ್ಟಿಗೆ ವಿಸ್ತಾರವಾಗಿಯೇ ಬರೆದಿದ್ದಾರೆ.

ಇನ್ನುಳಿದಂತೆ ಶ್ರೀ ವಿಜಯದಾಸರು ಬರೆದ ಸುಳಾದಿಯೊಂದರಲ್ಲಿ ವಿವರಣೆಯಿದೆ. ಆದರೆ ವಿಜಯದಾಸರ ಸುಳಾದಿಯ ಚಕ್ರಾಬ್ಜ ಮಂಡಲದ ವಿವರಣೆಗೂ ಉಳಿದ ಗ್ರಂಥಗಳ ವಿವರಣೆಗೂ ವ್ಯತ್ಯಾಸವಿದೆ. ವಾಸ್ತವವಾಗಿ ಆ ಚಕ್ರಾಬ್ಜ ಬೇರೆ ಇದು ಬೇರೆ. ಒಂದು ಉಪಾಸನೆಗೆ, ಮತ್ತೊಂದು ಕಲಶ ಸ್ಥಾಪನೆಗೆ.

ಈ ಮಂಡಲವನ್ನು ಬಿಡಿಸುವುದೆಂದರೆ ಅದೊಂದು ದೊಡ್ಡ ಕಲೆಗಾರಿಕೆ. ಜ್ಯಾಮಿತಿಯ ಗಣಿತ ಚಿತ್ರಕಲೆ ವರ್ಣ ಸಂಯೋಜನಾ ವಿಧಾನಗಳನ್ನು ಬಲ್ಲ ಕಲಾವಿದ ಮಾತ್ರವೇ ಇಂತಹ ಒಪ್ಪವಾದ ರೇಖಾಚಿತ್ರವನ್ನು ಬಿಡಿಸಬಲ್ಲ. ಆಧ್ಯಾತ್ಮಿಕದಲ್ಲೂ ಕಲೆಗಾರಿಕೆಯನ್ನು ತೋರಿಸಿದ ಪ್ರಾಚೀನರು ಯಾವ ದೃಷ್ಟಿಯಿಂದಲೂ ನ್ಯೂನತೆಯನ್ನು ಉಳಿಸಿಕೊಂಡಿಲ್ಲ!

ಭಗವಂತನ ಆರಾಧನೆಯನ್ನು ನಿತ್ಯದಲ್ಲಿ ಆಚರಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇದರ ವಿಧಿ ವಿಧಾನಗಳನ್ನು ತಿಳಿಸಲು ತಂತ್ರಶಾಸ್ತ್ರವೇ ಮುಖ್ಯ ಸಾಧನ.

ಪರಮಕರುಣಾಳುವಾದ ಶ್ರೀಹರಿಯನ್ನು 'ಪೂಜ್ಯಶ್ಚ ಭಗವಾನ್ ನಿತ್ಯಂ ಚಕ್ರಾಬ್ಜಾದಿಕ ಮಂಡಲೇ ' ಎಂದು ಶ್ರೀ ಮಧ್ವಾಚಾರ್ಯರ ತಂತ್ರಸಾರ ಸಂಗ್ರಹದಲ್ಲಿ ಹೇಳಿರುವಂತೆ ಚಕ್ರಾಬ್ಜ ಮಂಡಲದ ಸಮಗ್ರಜ್ಞಾನ, ಅನುಸಂಧಾನ ಪೂರ್ವಕ ಚಿಂತನೆ ಇತ್ಯಾದಿ ಧ್ಯಾನೋಪಾಸನಾ ಕ್ರಮದಿಂದ ಸಾಧನಾ ಮಾರ್ಗದಲ್ಲಿರುವ ಮುಮುಕ್ಷುವು ಸಿದ್ಧಿಯನ್ನು ಪಡೆಯುವನು. ಈ ಸಿದ್ಧಿಯೇ ಬಿಂಬದರ್ಶನ ಪ್ರಾಪ್ತಿಯು.

ಭಗವಂತನ ಪ್ರತೀಕವಾದ ಚಕ್ರಾಬ್ಜಮಂಡಲದಲ್ಲಿ ಬ್ರಹ್ಮಾಂಡವೇ ಅಡಕವಾಗಿ ಶ್ರೀ ಹರಿಯ ವಿಶ್ವರೂಪ ದರ್ಶನವಾಗುವುದರಲ್ಲಿ ಸಂದೇಹವೇ ಇಲ್ಲ.

ಬಾಹ್ಯ ಪೂಜಾರೂಪವಾದ ಈ ಪ್ರಕ್ರಿಯೆಯಲ್ಲಿ ಹಿತ್ತಾಳೆ, ತಾಮ್ರ ಅಥವಾ ಬೆಳ್ಳಿಯ ತಗಡಿನ ಮೇಲೆ ಚಕ್ರಾಬ್ಜವನ್ನು ಕೆತ್ತಿಸಿ, ಕೇಂದ್ರ ಸ್ಥಾನದಲ್ಲಿ ತ್ರಿಕೋಣಗತ ಪೀಠದಲ್ಲಿ ಸಾಲಿಗ್ರಾಮ ಹಾಗೂ ಪ್ರತಿಮೆಗಳನ್ನಿಟ್ಟು ಪೂಜಿಸುವುದು ಪರಮ ತಾರಕವು.

ಚಕ್ರಾಬ್ಜ ಮಂಡಲದ ರಹಸ್ಯ ಪ್ರಮೇಯಗಳನ್ನು ವ್ಯಾಖ್ಯಾನಗಳಿಲ್ಲದೆ ತಿಳಿಯಲು ಸಾಧ್ಯವಿಲ್ಲ. ಸುಜೀವಿಗಳಿಗೆ ಅರ್ಥೈಸುವುದು ಕಷ್ಟವಾದ ಸಂದರ್ಭದಲ್ಲಿ ಭೃಗ್ವಾಂಶ ಸಂಭೂತ ದಾಸವರೇಣ್ಯ ಶ್ರೀ ವಿಜಯದಾಸರು ಕಂಕಣಾಕಾರ ಸುಳಾದಿ ರಚಿಸಿ 'ಸಿದ್ಧ ಸಾಧನವಿದು ಬಿಂಬಕಾಂಬುವು ಶ್ರೀ ಪದ್ಮಿನಿ ವಲ್ಲಭ ನಮ್ಮ ವಿಜಯವಿಠ್ಠಲ ಪ್ರಾಪ್ತಿ'. ಎಂದು ಉದ್ಗಾರ ಹಾಡಿದರು.

ಇಲ್ಲಿ ಕಾಣಬಹುದಾದ ವಿಜಯದಾಸರ ವಿಚಾರ ಕೌಶಲ, ನಿರೂಪಣೆಯ ನಿಪುಣತೆ, ಮಂಡಲಗಳ ವಿನ್ಯಾಸ, ಸಂದರ್ಭೋಚಿತ ವಿವರಣೆ, ಪ್ರಮೇಯಗಳ ಸಂಗ್ರಹ ಮುಂತಾದವು ಊಹಾತೀತವಾದದ್ದು.

ಕಂಕಣ ಎಂದರೆ ಹಸ್ತಾಭರಣವಾದ ಬಳೆ ಎಂದರ್ಥ. ಬಳೆಯು ವೃತ್ತಾಕಾರವಾಗಿರುವುದು, ಚಕ್ರಾಬ್ಜ ಮಂಡಲದಲ್ಲಿ

ವಿಧವಿಧ ಸಂಖ್ಯಾಕವಾದ ದಳಗಳುಳ್ಳ ಕಮಲಗಳು ವೃತ್ತಾಕಾರದಲ್ಲಿ ಹೊಂದಿಕೊಂಡಿದೆ. ಈ ವೃತ್ತಗಳೆಲ್ಲವೂ ಏಕ ಕೇಂದ್ರೀಕೃತ ವೃತ್ತಗಳು. ಒಂದೇ ಕೇಂದ್ರದಿಂದ ಪ್ರಾರಂಭವಾಗಿ ಕ್ರಮವಾಗಿ ತ್ರಿಜ್ಯದಧಿಕದಿಂದ ವಿಸ್ತರಿಸುತ್ತಾ ಹೋಗುವವು. ಈ ಕಾರಣದಿಂದ ಚಕ್ರಾಬ್ಜ ಮಂಡಲದ ವಿವರಗಳನ್ನು ದಾಸರು ಕಂಕಣಾಕಾರ ಸುಳಾದಿ ಎಂಬ ಹೆಸರಿನಲ್ಲೆ ನಿರೂಪಿಸುತ್ತಾರೆ.

ಬಾಹ್ಯೋಪಾಸನೆಯಿಂದ ಅಂತರಂಗ ಬಿಂಬರೂಪಿಯನ್ನು ಆರಾಧಿಸಿದಾಗ ಭಕ್ತವತ್ಸಲನಾದ ಶ್ರೀಹರಿಯು ಅವನ ಭಕ್ತರನ್ನುದ್ಧರಿಸಲು ಕಂಕಣಕಟ್ಟಿ ನಿಲ್ಲುವನೆಂಬಲ್ಲಿ ಸಂಶಯವಿಲ್ಲ.

ಕಂಕಣಾಕಾರ ಸುಳಾದಿಯಲ್ಲಿ ಒಟ್ಟು ಏಳು ಭಾಗಗಳುಂಟು. ಹದಿನೆಂಟು ಸಾಲುಗಳ ಸುಳಾದಿಯ ಮೊದಲನೆ ಭಾಗ ಮಂಡಲದ ಹೃದಯ ಭಾಗದ ವಿವರಗಳನ್ನು ನೀಡುತ್ತದೆ.

ಮೊದಲು ಒಂದು ವೃತ್ತ, ವೃತ್ತದ ಹೊರಭಾಗ ವೃತ್ತಕ್ಕೆತಾಗಿ ತ್ರಿಕೋಣ ಊರ್ಧ್ವ ಮುಖವಾಗಿ, ತ್ರಿಕೋಣಕ್ಕೆತಾಗಿ ಹೊರಗೆ ಇನ್ನೊಂದು ವೃತ್ತ. ಇವಿಷ್ಟು ಮಂಡಲದ ಕೇಂದ್ರ ವಿನ್ಯಾಸ.



ಒಳಗಿನ ವೃತ್ತದ ನಡುವೆ 'ಘೃಣಿ' ಎಂಬ ಸೂರ್ಯನಾರಾಯಣನ ಮಂತ್ರನಾಮ; ಎಡಬಲಗಳಲ್ಲಿ ಓಂಕಾರ, ಮೇಲೆ ಕೆಳಗೆ 'ಅಂ' ಮತ್ತು 'ಅಃ' ಎಂಬ ಎರಡು ಸ್ವರಾಕ್ಷರಗಳು.

'ಘೃಣಿ' ಎಂದರೆ ಅಸುರರಿಗೆ ಸಂತಾಪಪ್ರದನು. ಭಕ್ತರಿಗೆ ಜ್ಞಾನದ ಬೆಳಕನ್ನು ನೀಡುವವನು. ಬಯಸಿದ ಇಷ್ಟಾರ್ಥಗಳ ಮಳೆಗೆರೆಯುವನು. ಓಂಕಾರವಂತೂ ಮಂತ್ರದ ಆದ್ಯಂತಗಳಲ್ಲಿ ಉಚ್ಚರಿಸಬೇಕಾದ ಭಗವಂತನ ಮೂಲ ನಾಮ; ಸರ್ವಶೃತಿಗಳ ಸಾರಾಕ್ಷರ.

ಅನುಸ್ವಾರ ಪುರುಷಸ್ವರ, ವಿಸರ್ಗ ಸ್ತ್ರೀಸ್ವರ. ಹೀಗೆ ಇವು ಸಮಸ್ತ ಸ್ತ್ರೀ ಪುರುಷ ಶಕ್ತಿಯ ಪ್ರತೀಕ. ಸಾಧಕನಿಗೆ ಮಂತ್ರಜಪದಲ್ಲಿ ಈ ರೂಪಗಳ ಕೃಪಾದೃಷ್ಟಿ ಅವಶ್ಯಕ.

ಆ ಬಳಿಕ ವೃತ್ತದ ಹೊರಗೆ ಊರ್ಧ್ವಮುಖವಾದ ತ್ರಿಕೋಣ, ಇದರ ಊರ್ಧ್ವ ದಕ್ಷಿಣ - ವಾಮಕೋಣಗಳಲ್ಲಿ ಅನುಕ್ರಮವಾಗಿ ಲಕ್ಷ್ಮೀ ದೇವಿಯ ಮೂರು ಬೀಜಾಕ್ಷರಗಳು ಶ್ರೀಂ, ಕ್ಲೀಂ ಮತ್ತು ಹ್ರೀಂ; ಮೂರು ಶಕ್ತಿಗಳು ಇಚ್ಛಾ, ಕ್ರಿಯಾ, ಜ್ಞಾನ, ಮೂರು ರೂಪಗಳು ಭೂಃ (ಅಭಯ ಅಥವಾ ಪದ್ಮನಾಭ) ಭುವಃ (ಅಮೃತ ಅಥವಾ ಅನಂತಾಸನ ) ಮತ್ತು ಸ್ವಃ (ಕ್ಷೇಮ ಅಥವಾ ವೈಕುಂಠ) ಈ ರೂಪಗಳೆ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಎಂದೂ ಕರೆಸುತ್ತದೆ. ಅಥವಾ ವಿಶ್ವ, ತೈಜಸ, ಪ್ರಾಜ್ಞನಾಗಿಯೂ ಚಿಂತಿಸಬಹುದು.

ತ್ರಿಕೋಣದ ಹೊರಗಣ ವೃತ್ತದ ಒಳಗೆ ತ್ರಿಕೋಣದ ಎಡಭುಜದ ಪಕ್ಕದಲ್ಲಿ ಈಶಾನ್ಯದಲ್ಲಿ ಸೂರ್ಯ ಮಂಡಲದಲ್ಲಿ ತ್ರಿಕೋಣದ ಬಲಭುಜದ ಪಕ್ಕದಲ್ಲಿ ಸೋಮ (ಚಂದ್ರ) ಮಂಡಲ ಮತ್ತು ಕೆಳಬದಿಯಲ್ಲಿ ಪಶ್ಚಿಮದಲ್ಲಿ ಅಗ್ನಿಮಂಡಲ.

ಅಲ್ಲಿ 'ಲಂ' ವಾಚ್ಯನಾದ ನಾರಾಯಣನನ್ನು, 'ರಂ' ವಾಚ್ಯನಾದ ಕೃಷ್ಣನನ್ನು ಯಂ' ವಾಚ್ಯನಾದ ನರಸಿಂಹನನ್ನು ಪೂಜಿಸಬೇಕು. ಇವು ಹೃದಯಕಮಲದಲ್ಲಿರುವ ಭಗವಂತನ ಮೂರು ಪೀಠಗಳು. ಮುಂದಿನ ಹೊರಮೈಯ ವಿವರಣೆಯನ್ನು 32 ಸಾಲುಗಳ ಸುಳಾದಿಯ ಎರಡನೆಯ ಭಾಗ ಮುಂದುವರಿಸುತ್ತದೆ. ಇದೊಂದು ಸೂರ್ಯನ ಗತಿಯನ್ನು ಭೇದದಿಂದ ತಿಳಿದು ಗುರುತಿಸುವ ಆತ್ಮಪೂರ್ವ ವೈಜ್ಞಾನಿಕ ಚಿಂತನೆ.

### ಗಣಕ

ಹಿಂದೆ ವಿವರಿಸಿದ ಸೂರ್ಯ - ಚಂದ್ರ-ಅಗ್ನಿ ಮಂಡಲದ ವಲಯದ ಹೊರಗೆ ಇನ್ನೊಂದು ವೃತ್ತ ರಚಿಸಬೇಕು. ಇದು ಮೂರನೇಯ ವಲಯ. ಈ ವಲಯದಲ್ಲಿ ಕಾಲಚಕ್ರವಿದೆ. ಒಂದು ವರ್ಷದ ಅವಧಿಯಲ್ಲಿ 12 ಮಾಸಗಳಿವೆ. ಈ ಅವಧಿಯಲ್ಲಿ ಮೂರು ಪ್ರಕಾರದ ಕಾಲ ಪ್ರಬೇಧಗಳು.

### 1. ಗಜವೀಥಿ (ಬೇಸಿಗೆಕಾಲ)

ಹಗಲಿನ ಅವಧಿ ಹೆಚ್ಚು, ರಾತ್ರಿಯ ಅವಧಿ ಕಡಿಮೆ. ಚೈತ್ರ-ವೈಶಾಖ-ಜ್ಯೇಷ್ಠ-ಆಷಾಢ ಎಂಬ ಚಾಂದ್ರಮಾನದ ನಾಲ್ಕು ಮಾಸಗಳಿವೆ ಸೂರ್ಯನು ಈ ಅವಧಿಯಲ್ಲಿ ಮೇಷ - ಮಿಥುನ-ಕರ್ಕಾಟಕ. ಎಂಬ ನಾಲ್ಕು ರಾಶಿಗಳಲ್ಲಿ ಸಂಚರಿಸುವನು ಈ ಮಾರ್ಗವು ಏರಾಗುವುದರಿಂದ ಸೂರ್ಯನ ರಥದ ವೇಗ ಮಂದಗತಿ. ಈ ಸಂಚಾರ ಮಾರ್ಗಕ್ಕೆ 'ಗಜವಿಥಿ' ಎನ್ನುವರು.

### 2. ರಥವೀಥಿ (ಮಳೆಗಾಲ)

ಹಗಲು ಮತ್ತು ರಾತ್ರಿಯ ಅವಧಿಗಳು ಸಮಪ್ರಮಾಣದಲ್ಲಿರುವುವು. ಶ್ರಾವಣ - ಭಾದ್ರಪದ - ಆಶ್ವಯಜ - ಕಾರ್ತಿಕ ಎಂಬ ನಾಲ್ಕು ಮಾಸಗಳು. ಸೂರ್ಯನು ಈ ಅವಧಿಯಲ್ಲಿ ಸಿಂಹ - ಕನ್ಯಾ - ತುಲಾ ಮತ್ತು ವೃಶ್ಚಿಕ ಎಂಬ ನಾಲ್ಕು ರಾಶಿಗಳಲ್ಲಿ ಸಂಚರಿಸುವನು. ಸೂರ್ಯನ ಸಂಚಾರದ ಈ ಮಾರ್ಗವು ಏರು ಪೇರುಗಳಿಲ್ಲದೆ ಸಮತಟ್ಟಾಗಿರುವುದು ಇದರಿಂದ ಈ ಭಾಗಕ್ಕೆ 'ರಥವೀಥಿ ಎಂದು ಹೆಸರು.

**3. ಅಜವೀಥಿ (ಚಳಿಗಾಲ)**

ಈ ಅವಧಿಯಲ್ಲಿ ಹಗಲು ಕಡಿಮೆ, ರಾತ್ರಿ ದೀರ್ಘ, ಮಾರ್ಗಶಿರ - ಪುಷ್ಯ - ಮಾಘ - ಫಾಲ್ಗುಣ ಈ ನಾಲ್ಕು ತಿಂಗಳು ಸೇರಿವೆ.ಸೂರ್ಯನು ಈ ಕಾಲಾವಧಿಯಲ್ಲಿ ಕ್ರಮವಾಗಿ ಧನಸ್ಸು ಮಕರ-ಕುಂಭ-ಮೀನ ರಾಶಿಗಳಲ್ಲಿ ಸಂಚರಿಸುವನು. ಸೂರ್ಯನ ಸಂಚಾರದ ಈ ಮಾರ್ಗ ತೀವ್ರಗತಿಯನ್ನು ಹೊಂದಿರುವುದು. ಅಜ ಎಂದರೆ ಆಡು. ಆಡು ಗಾತ್ರದಲ್ಲಿ ಸಣ್ಣ ಪ್ರಾಣಿ ಆದ್ದರಿಂದ ಅದರ ವೇಗ ಹೆಚ್ಚು.

ಇನ್ನು ಎರಡನೆಯ ವಲಯದ ಮೇಲೆ ಷಟ್ಕೋಣ ಮಂಡಲವನ್ನು ಬರೆಯಬೇಕು. ಮೇಲಿನ ಕೋಣದಿಂದಾರಂಭಿಸಿ ಪ್ರದಕ್ಷಿಣಾಕಾರವಾಗಿ ಒಂದೊಂದರಲ್ಲಿ ಒಂದೊಂದರಂತೆ ಆರು ಋತುಗಳನ್ನು ಬರೆಯಬೇಕು. ಅಲ್ಲಿ ನಿಯಾಮಕರಾದ ವೇದವ್ಯಾಸಾದಿ ರೂಪಗಳನ್ನು ಚಿಂತಿಸಬೇಕು. ಋತುಗಳಿಗೆ ಸಂಬಂಧಪಟ್ಟಂತೆ ಚೈತ್ರ-ವೈಶಾಖಾದಿ ಎರಡೆರಡು ಮಾಸಗಳು,

ಹಾಗೆಯೇ ಆರು ಕೋಣೆಗಳಲ್ಲಿ ಒಂದೊಂದು ಕೋಣೆಗಳಲ್ಲಿ 10 ಸಂವತ್ಸರಗಳು, ಜೊತೆಗೆ ವಿಷ್ಣು ಷಡಕ್ಷರ ಮಂತ್ರದ ಆರು ಅಕ್ಷರಗಳು, ಷಡಂಗನ್ಯಾಸದ ಆರುಸ್ಥಾನಗಳು ಹೃದಯ, ಶಿರಸ್ಸು, ಶಿಖಾ, ಕವಚ, ನೇತ್ರ ಮತ್ತು ಕರತಲ, ಆರು ಮೂರ್ತಿಗಳು ಪೂರ್ಣಜ್ಞಾನಾತ್ಮ, ಐಶ್ವೈಯಾತ್ಮ, ಪ್ರಭಾತ್ಮ, ಆನಂದಾತ್ಮ, ತೇಜಾತ್ಮ,ಶಕ್ತ್ಯಾತ್ಮ ಇವಿಷ್ಟು ಈ ವಲಯದ ಊರ್ಧ್ವ ಕೋಣದಲ್ಲಿ ಚಿಂತಿಸಬೇಕಾದ ಅಂಶಗಳು.

ಇನ್ನು ಈ ಆರು ಕೋಣಗಳಲ್ಲಿ ಕ್ರಮವಾಗಿ 51 ವರ್ಣಗಳನ್ನು ಬರೆದು ವರ್ಣವಾಚ್ಯನಾದ ಅಜಾದಿ ರೂಪಿ ಭಗವಂತನನ್ನು ಧ್ಯಾನಿಸಬೇಕು.

ಇನ್ನು ಮುಂದಿನ ವಲಯದ ವಿವರಣೆ 50 ಸಾಲುಗಳಲ್ಲಿ ಸುಳಾದಿಯ ಮೂರನೆಯ ಭಾಗದಲ್ಲಿ ಬಂದಿದೆ. ಈ ವೃತ್ತದ ಸುತ್ತ ಎಂಟು ದಳದ ಪದ್ಮಗಳನ್ನು ಬಿಡಸಬೇಕು ಅದರಲ್ಲಿ ನಾರಾಯಣಾಷ್ಟಾಕರದ ಎಂಟು ಅಕ್ಷರಗಳನ್ನು ಬರೆಯಬೇಕು.ಜತೆಯಲ್ಲಿ ಸೂರ್ಯನನ್ನು ಬಿಟ್ಟು ಉಳಿದ ಎಂಟು ಗ್ರಹಗಳನ್ನು ಬರೆಯಬೇಕು.

ಹೀಗೇ ಗುಣತ್ರಯ, ಅವಸ್ಥಾತ್ರಯ, ಸಪ್ತಧಾತುಗಳು, ಪಂಚವಿಧ ಅಂತಃಕರಣ,ಪಂಚಜ್ಞಾನ ಕರ್ಮೇಂದ್ರಿಯಗಳು ಪಂಚತನ್ಮಾತ್ರೆಗಳು ಪಂಚಭೂತಗಳು ವೇದವಾಙ್ಮಯ ಮತ್ತು ಕಾಲರೂಪದಿಂದ ತುಂಬಿರುವ ಸಮಸ್ತ ಜಡ ಪ್ರಪಂಚ, ಅದರ ಅಭಿಮಾನಿಗಳಾದ ರಮಾಪ್ರಾಣಾದಿ ಸಮಸ್ತ ದೇವತೆಗಳು. ಆ ಚೇತಾನಾಚೇತನ ವಿಶ್ವದ ನಿಯಾಮಕರಾಗಿ ಸಮಸ್ತ ವರ್ಣ ಪದವಾಚ್ಯವಾದ ಭಗವಂತ. ಎಲ್ಲ ವರ್ಣಗಳಿಗೂ ತಾಯಿ ಬೇರಾದ ಓಂಕಾರದ ಎಂಟುವರ್ಣಗಳು ಮತ್ತು ಅವುಗಳಿಂದ ಪ್ರತಿಪಾದ್ಯನಾದ ಭಗವಂತನ ಎರಡು ರೂಪಗಳನ್ನು ನಮ್ಮ ಧ್ಯಾನದಲ್ಲಿ ತರುವ ಈ ಮಂಡಲ ನಾಮರೂಪಾತ್ಮಕವಾದ ಇಡಿಯ ಬ್ರಹ್ಮಾಂಡವನ್ನೇ ಒಳಗೊಂಡಿದೆ.

ಮಂಡಲದ ಮುಂದಿನ ವಲಯದ ವಿವರಣೆಯನ್ನು ಸುಳಾದಿಯ ನಾಲ್ಕನೆಯ ಭಾಗ 46 ಸಾಲುಗಳಲ್ಲಿ ಮುಂದುವರೆಯುತ್ತದೆ. ಹಿಂದಿನ ಅಷ್ಟದಲವಲಯದ ಮೇಲೆ ಮತ್ತೊಂದು ವೃತ್ತಗಳನ್ನು ಬರೆದು ಅದರಲ್ಲಿ ದ್ವಾದಶ ದಳ ಪದ್ಮವನ್ನು ಬಿಡಿಸಬೇಕು. ಇದು ಮಂಡಲದ ಆರನೇಯ ವಲಯ.

ಈ ದಳಗಳಲ್ಲಿ ಬರೆದು ಧ್ಯಾನಿಸಬೇಕಾದ ದೇವತಾ ಮೂರ್ತಿ ವಿವರ ಹೀಗಿದೆ.ಮೇಲಿನ ಬಲಬದಿಯಿಂದ ಅನುಕ್ರಮವಾಗಿ 12 ದಳಗಳಲ್ಲಿ 12 ರಾಶಿಗಳು, ವಾಸುದೇವ ದ್ವಾದಶಾಕ್ಷರ ಮಂತ್ರದ 12 ಅಕ್ಷರಗಳು, ಕೇಶವಾದಿ ದ್ವಾದಶ ಮೂರ್ತಿಗಳು ಮತ್ತು 12 ವಿಭಾಗಗಳಾಗಿ ವಿಂಗಡಿಸಿದ 51 ಅಕ್ಷರಗಳು ದ್ವಾದಶದಳ ಕಮಲದ ದಳಸಂಧಿಗಳಲ್ಲಿ ಜ್ಯೋತಿಃ ಶಾಸ್ತ್ರ ಪ್ರಸಿದ್ಧವಾದ ವಿಷ್ಕಂಭಾದಿ 27 ಯೋಗಗಳನ್ನು ಬರೆಯಬೇಕು. ಒಂದು ಯೋಗಕ್ಕೆ ನಾಲ್ಕು ಪಾದಗಳು, 27 ಯೋಗಗಳಿಗೆ 108 ಪಾದಗಳು. ಅನಂತರದ ವಲಯದ ವಿವರಣೆ ಸುಳಾದಿಯ ಐದನೆಯ ಭಾಗದಲ್ಲಿ 16 ಸಾಲುಗಳಲ್ಲಿ ಬಂದಿದೆ.

ಹಿಂದಿನ 12 ದಳಗಳ ವೃತ್ತದ ಹೊರಗಣ ವಲಯದಲ್ಲಿ 24 ದಳಗಳನ್ನು ಬಿಡಿಸಬೇಕು. ಇದು ಮಂಡಲದ 7 ನೇ ವಲಯ.ಈ ದಳಗಳಲ್ಲಿ ಗಾಯತ್ರಿಯ 24 ಅಕ್ಷರಗಳನ್ನು ಅಕ್ಷರದೇವತೆಗಳಾದ ಕೇಶವಾದಿ 24 ಮೂರ್ತಿಗಳನ್ನು ಬರೆದು ಧ್ಯಾನಿಸಬೇಕು.

ಇದರ ಮೇಲೆ ಹೊರಗೆ ಇನ್ನೊಂದು ವೃತ್ತ (ಕಂಕಣ) ವನ್ನು ಬಿಡಿಸಬೇಕು. ಇದು ಚಕ್ರಾಬ್ಜದ ಎಂಟನೆಯ ವಲಯ. ಈ ವೃತ್ತವನ್ನು ಒಂಭತ್ತು ಪಾಲು ಮಾಡಿ ನವವೀಥಿಗಳನ್ನು ಬರೆಯಬೇಕು.ಒಂದೊಂದು ವೀಥಿಯಲ್ಲಿ ಮೂರು ನಕ್ಷತ್ರಗಳಂತೆ ಒಟ್ಟು ವೃತ್ತದಲ್ಲಿ 27 ನಕ್ಷತ್ರಗಳನ್ನು ಬರೆದು ಧ್ಯಾನಿಸಬೇಕು.

ಹಿಂದೆ ಮೂರು ವೀಥಿಗಳ ವಿವರ ಬಂದಿದೆ. ಅದೇ ನೇರಕ್ಕೆ ಈ ವೃತ್ತವನ್ನು ಮೊದಲು ಮೂರು ಪಾಲು ಮಾಡಬೇಕು. ಮತ್ತೆ ಒಂದೊಂದನ್ನು ಪುನಃಮೂರು ಪಾಲು ಮಾಡಿದಾಗ ನವವೀಥಿಗಳು ನಿರ್ಮಾಣವಾಗುತ್ತದೆ.

ಕರವೀಥಿ ಮೂರು ತೆರ; ನಾಗವೀಥಿ, ಗಜವೀಥಿ ಮತ್ತು ಐರಾವತ ವೀಥಿ, ರಥವೀಥಿಯು ಮೂರು ಬಗೆ ಋಷಭ ವೀಥಿ, ಗೋವಿಥಿ ಮತ್ತು ಚಾರದ್ಗವ ವೀಥಿ. ಅಜವೀಥಿಯೂ ಮೂರತೆರ: ಅಜವೀಥಿ, ಮೃಗವೀಥಿ ಮತ್ತು ವೈಶ್ವಾನರ ವೀಥಿ.

ಇನ್ನು ಮಂಡಲದ ಕೊನೆಯ ವಲಯವನ್ನು ಸುಳಾದಿಯನ್ನು 6 ನೇ ಭಾಗ 15 ಸಾಲುಗಳಲ್ಲಿ ವಿವರಿಸುತ್ತದೆ. ಕೊನೆಯದಾಗಿ ಬಿಡಿಸಿದ ವೃತ್ತದಲ್ಲಿ 51 ವರ್ಣಗಳನ್ನು ಅಜಾದಿ ನೃಸಿಂಹಾಂತ ವರ್ಣನಿಯಾಮಯಕ ಭಗವನ್ಮೂರ್ತಿಗಳನ್ನು ಬರೆದು ಧ್ಯಾನಿಸಬೇಕು.

ದೇಹದ ನಾಡಿಗಳಲ್ಲಿ ವ್ಯಾಪ್ತಿ ದೇಹಗತ ಬಲಪಾರ್ಶ್ವ 36000 ಪುರುಷನಾಡಿ ನಾಡಿಗಳಲ್ಲಿ 16 ಸ್ವರಾಕ್ಷರ ವರ್ಣ ಪ್ರತಿಪಾದ್ಯ ರೂಪಗಳು. ಪ್ರತಿನಾಡಿಯಲ್ಲಿ 36000, 16=2125 ಭಗವದ್ರೂಪಗಳು ದೇಹಗತ ಎಡಪಾರ್ಶ್ವ 36000 ಸ್ತ್ರೀನಾಡಿಗಳಲ್ಲಿ 35 ವ್ಯಂಜನಾಕ್ಷರತ್ಮಕ ಭಗವದ್ರೂಪಗಳು.

ಇಲ್ಲಿಗೆ ಚಕ್ರಾಬ್ಜದ ಸಂಪೂರ್ಣ ರಚನೆಯಾದಂತಾಯಿತು ಉಪಾಸನೆಯಲ್ಲಿ ಅತ್ಯಂತ ಮಹತ್ವದ ಪ್ರತೀಕವಾದ ಈ ಮಂಡಲದ ಮಹಿಮೆಯನ್ನು ಸುಳಾದಿಯ 6 ನೇ ಸಾಲಿನಿಂದ ಮುಂದೆ 9 ಸಾಲುಗಳಲ್ಲಿ ದಾಸರು ಮೈಯುಬ್ಬಿ ಬಣ್ಣಿಸಿದ್ದಾರೆ. ಭಾಗವತ ಹೇಳುವಂತೆ ಭಗವಂತನ ಪೂಜಸ್ಥಾನವಾದ ಹೃದಯಾಕಾಶ, ಜಲ, ಸ್ಥಂಡಿಲ, ಅಗ್ನಿ, ಸೂರ್ಯ ಚಂದ್ರ ಗೋ ಬ್ರಾಹ್ಮಣಾದಿ ಸಮಸ್ತ ಉತ್ತಮ ಸ್ಥಾನಗಳು ಈ ಎಲ್ಲವೂ ಚಕ್ರಾಬ್ಜದ ಅನುಸಂಧಾನದಲ್ಲೆ ಏಕೀಭವಿಸುತ್ತದೆ.

ಅರಿತು ಉಪಾಸನೆ ಮಾಡುವವನಿಗೆ ಸಮಸ್ತ ಮಂತ್ರಾರ್ಥಗಳು ಇಲ್ಲೇ ಸೇರಿಕೊಂಡಿವೆ. ಅದ್ದರಿಂದ ಚಕ್ರಾಬ್ಜ ಬಲ್ಲವನ್ನು ಭಗವಂತನನ್ನೇ ಬಲ್ಲವನಾಗುತ್ತಾನೆ. ಭಗವಂತನನ್ನು ಬಲ್ಲವ ಬಳಿ ಭಗವಂತ ಯಾವಾಗಲೂ ನೆಲೆಸುತ್ತಾನೆ ಎನ್ನುತ್ತಾರೆ ಶ್ರೀ ವಿಜಯದಾಸರು ಹೀಗೇ ಈ ಉಪಾಸನೆಯ ಮೂಲಕವೇ ಬಿಂಬಾಪರೋಕ್ಷದತ್ತ ಸಾಗಬಹುದು. ಈ ಮಂಡಲದಲ್ಲೇ ಸಾಧಕನಿಗೆ ಆಯಾ ದೇವತೆಗಳು ಕಾಣಿಸಿಕೊಂಡು ಅನುಗ್ರಹಿಸುತ್ತಾರೆ ಎಂದು ತಮ್ಮ ಅನುಭವವನ್ನು ಹೇಳುವುದರಲ್ಲಿ ಏನಚ್ಚರಿ?

## ಸುಳಾದಿ

ಸುಳಾದಿ ಎಂಬುದೊಂದು ಸಂಗೀತದ ಪಾರಿಭಾಷಿಕ ಶಬ್ಧ ಸಾಮಾನ್ಯವಾಗಿ 5 ಅಥವಾ 7 ಬೇರೆ ಬೇರೆ ತಾಳಗಳಲಿ ಒಂದು ರಾಗ ರಚನೆಯಾಗುವ ಸಾಹಿತ್ಯವೇ ಸುಳಾದಿ; ಅದ್ದರಿಂದ ಸುಳಾದಿಯನ್ನು 'ತಾಳಮಾಲಿಕೆ' ಯೆಂದು ಕರೆಯುವುದುಂಟು ಸುಳಾದಿಯ ಆದಿಯಲ್ಲಿ ಎರಡು ಸಾಲುಗಳಿದ್ದ ಕೀರ್ತನೆಯಲ್ಲಿರುವಂತೆ ಪಲ್ಲವಿ ಅನುಪಲ್ಲವಿಗಳಿರುವುದಿಲ್ಲ. ಸುಳಾದಿಯ ಕೊನೆಯಲ್ಲಿ ಎರಡು ಸಾಲುಗಳಿದ್ದು ಇದನ್ನು 'ಜತೆ' ಯೆಂದು ಎನ್ನುತ್ತಾರೆ. ಇದು ಸುಳಾದಿಯ ಸಾರ ಆಶಯವನ್ನು ಸೂತ್ರಪ್ರಾಯದಂತೆ ತಿಳಿಸುತ್ತದೆ.

ದಾಸಸಾಹಿತ್ಯದಲ್ಲಿ ವಿಜಯದಾಸರು ರಚಿಸಿರುವಷ್ಟು ಅಂದರೆ ಸುಮಾರು 500 ಕ್ಕೂ ಅಧಿಕ ಸುಳಾದಿಗಳನ್ನು ಮತ್ತಾವ ದಾಸರು ರಚಿಸಿಲ್ಲ; ಅದ್ದರಿಂದಲೇ ಇವರನ್ನು 'ಸುಳಾದಿ ದಾಸರೆಂದು' ಸುಳಾದಿ ಸಾರ್ವಭೌಮ' ರೆಂದು ಕರೆಯುತ್ತಾರೆ. 100 ದೇವರ ನಾಮಗಳನ್ನು ಹಾಡಿದ ಪುಣ್ಯ ಸುಳಾದಿ ಹಾಡಿದರೆ ಬರುತ್ತದೆ ಎಂಬ ಮಾತಿದೆ. ವಿಜಯದಾಸರ ಸುಳಾದಿಗಳು ಸುಳಾದಿ ಸ್ವರೂಪಕ್ಕೆ ಒಂದು ಮಾದರಿಯಂತಿದೆ.

ಸುಳಾದಿ ಹರಿದಾಸ ಸಾಹಿತ್ಯದಲ್ಲಿ ಶ್ರೀ ಪಾದರಾಜರು ಸುಳಾದಿಯ ಶ್ರೀಕಾರ ಬರೆದು ಅದ್ಯಪ್ರವರ್ತಕರಾದರೂ, ಶ್ರೀ ವ್ಯಾಸರಾಯರೂ ಹಲವಾರು ಉತ್ತಮ ಸುಳಾದಿಗಳನ್ನು ರಚಿಸಿ ತಮ್ಮ ಶಿಷ್ಯರಾದ ಕನಕ, ಪುರಂದರದಾಸರಿಗೆ ಸ್ಫೂರ್ತಿಯಿತ್ತು, ಈ ಸಾಹಿತ್ಯಗೇಯ ಪ್ರಕಾರವನ್ನು ಉನ್ನತಿಗೆ ತಂದರು. ವಿಜಯದಾಸರ ಕಾಲದಲ್ಲಿ ಸುಳಾದಿ ತನ್ನ ಸುವರ್ಣಯುಗವನ್ನು ಕಂಡಿತು.

ಸುಳಾದಿಯಲ್ಲಿ ಸಂಗೀತಕ್ಕೂ, ಸಾಹಿತ್ಯಕ್ಕೂ ಸಮನಾದ ಸ್ಥಾನವಿದೆ. ಹರಿದಾಸ ಸಾಹಿತ್ಯ ಸಂಸ್ಕೃತಿಯ ತಾತ್ವಿಕ, ಧಾರ್ಮಿಕ, ಸಾಮಾಜಿಕ, ವ್ಯಕ್ತಿತ್ವದ ಅನೇಕ ಮುಖಗಳು ಸಾಹಿತ್ಯ ಸಂಗೀತದ ಸುಂದರ ಸಮ್ಮಿಲನದಲ್ಲಿ ಅಭಿವ್ಯಕ್ತಗೊಂಡಿರುವುದೇ ಸುಳಾದಿ. ಮುಮುಕ್ಷುಗಳು ನಿತ್ಯಾನಂದವನ್ನು ಪಡೆಯಲು ಅನುಸರಿಸಬೇಕಾದ 'ಸುಳು-ಹಾದಿ' ಎಂದರೆ ಸುಲಭ ಮಾರ್ಗ ಬೋಧಕವೆಂದು ಅನೇಕ ಹರಿದಾಸರ ಮತೀಯವಾದ ನಂಬುಗೆ.

ಸುಳಾದಿಯಲ್ಲಿ ಏನೆಲ್ಲಾ ಉಂಟೋ ಅವೆಲ್ಲವನ್ನೂ ವಿಜಯದಾಸರ ಸುಳಾದಿಗಳಲ್ಲಿ ಕಾಣಬಹುದು. ಇವು ಜ್ಞಾನಗಣಿಯೆಂದೆನಿಸಿ,ತತ್ವವಾದ ವಿಶ್ವಕೋಶದಂತಿದೆ. ತರ್ಕದ ಜಟಿಲತೆಯಿಲ್ಲದೆ,ಸಿದ್ಧಾಂತದ ಸಾರವನ್ನು ಸಾಮಾನ್ಯ ಜಲ ಸುಲಭವಾಗಿ ತಿಳಿಯಲು ಇದು ಸಹಕಾರಿ.


ಸಂಸ್ಕೃತ ಭಾಷೆಯ ನೂರಾರು ಗ್ರಂಥಗಳಲ್ಲಿ ಚದುರಿ ಹೋಗಿದ್ದ ವಿಷಯಗಳನ್ನು ಸಿರಿಗನ್ನಡದ ಸವಿನುಡಿಗಳಲ್ಲಿ ಸೆರೆಹಿಡಿದಿರುವುದು ಒಂದು ಮಹತ್ಸಾಧನೆಯೇ ಸರಿ.

ವಿಚಾರಗಳ ಸ್ಫೂರ್ತಿಯುತ ಮಂಡನೆ, ವೈಚಾರಿಕತೆಯ ಮೇಳೈಕೆ, ಕ್ಲಿಷ್ಟ ಪ್ರಮೇಯದ ಸರಳ ನಿರೂಪಣೆಯಿಂದ ಸಾರ್ವಕಾಲಿಕ ಸತ್ಯವನ್ನು ಒಳಗೊಂಡಿದೆ. ವಿಜಯದಾಸರ ಸುಳಾದಿಗಳ ರತ್ನ ಸಮೂಹದಲ್ಲಿ ಅತ್ಯುಜ್ವಲ ಕೌಸ್ತಭಮಣಿ ಕಂಕಣಾಕಾರ ಸುಳಾದಿ

ಇಷ್ಟೆಲ್ಲ ವಿಚಾರಗಳನ್ನು ತನ್ನಲ್ಲಿ ಅಡಗಿಸಿಕೊಂಡಿರೋ ಸುಳಾದಿ ಪ್ರಾಕಾರ ಜನಪ್ರಿಯತೆಯನ್ನು ಏಕೆ ಗಳಿಸಲಿಲ್ಲ? ಎಂಬ ಪ್ರಶ್ನೆ ಎದುರಾಗುತ್ತದೆ. ಹಾಡುವ ಕ್ರಮ, ತಾತ್ವಿಕ ವಿಚಾರಗಳು ಸಾಮಾನ್ಯರ ಅರಿವಿಗೆ ನಿಲುಕದೇ ಹೋಗಿವೆ ಅಷ್ಟೇ; ಇವುಗಳನ್ನು ಬಿಡಿಸಿ ಅರ್ಥೈಸಿದರೆ ಹರಿದಾಸರ ಉದ್ದೇಶ ಸಾರ್ಥಕವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಯಾರಿಗೂ ಭಾಷಾಭಿಮಾನವೇ ಇಲ್ಲ ಎಂದು ಮಾತನಾಡಿಕೊಳ್ಳುತ್ತೇವೆ. ಭಾಷೆಯ ಶ್ರೀಮಂತಿಕೆ ಅರಿವಿಲ್ಲದ ದರಿದ್ರರಿಗೆ ಭಾಷಾಭಿಮಾನ ಎಲ್ಲಿಂದ ಬರಬೇಕು? ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಓದುಗರಲ್ಲಿ ಶಬ್ದ ಸಂಪತ್ತನ್ನು ಹೆಚ್ಚಿಸಿ ಅರಿವಿನ ಕ್ಷಿತಿಜವನ್ನು ವಿಸ್ತರಿಸುತ್ತದೆ.





# ವಿವಾಹ ಮತ್ತು ಮಹತ್ವ

-ಬಿ.ಆರ್. ಶ್ರೀಕಂಠಯ್ಯ

ಯಾವುದೇ ಪಂಗಡವಾಗಲಿ ಅಥವಾ ಪ್ರದೇಶವಾಗಲಿ,ಕೆಲವು ಸಂಪ್ರದಾಯಗಳಲ್ಲಿ ಮತ್ತು ಶಾಸ್ತ್ರಗಳಲ್ಲಿ ವ್ಯತಾಸವಿದ್ದರೂ,ವಿವಾಹದ ಉದ್ದೇಶ ಒಂದೇ, ವಿವಾಹ ಸಂಸ್ಕಾರವು ಷೋಡಶ ಸಂಸ್ಕಾರಗಳಲ್ಲಿ ಒಂದು. ಈ ರೀತಿ ಎಂಟು ರೀತಿಯ ವಿವಾಹ ಪದ್ಧತಿಗಳಿವೆ.

೧ ಬ್ರಾಹ್ಮ ೨ ಆರ್ಷ ೩ ದೈವ ೪ ಗಾಂಧರ್ವ ೫ ಅಸುರ ೬ ರಾಕ್ಷಸ ೭. ಪ್ರಜಾಪತ್ಯ ಮತ್ತು ೮. ಪೈಶಾಚ ವಿವಾಹ.

ಮೇಲಿನ ಮೊದಲನೆಯ ನಾಲ್ಕು ವಿವಾಹಗಳು ಉತ್ತಮ ಮತ್ತು ಶಾಸ್ತ್ರಸಮ್ಮತವಾದುದು ಎಂದು ಬಲ್ಲವರು ಹಾಗೂ ಹಿರಿಯರು ಹೇಳುತ್ತಾರೆ. ಇನ್ನುಳಿದ ವಿವಾಹಗಳು ಸರಿಯಲ್ಲ ಎಂದು ಹೆಸರಿನಲ್ಲಿಯೇ ಅರ್ಥವಾಗುತ್ತದೆ. ಈಗಿನ ಸಂದರ್ಭಕ್ಕೆ ಅನುಗುಣವಾಗಿ"ಇಂಟರ್ನೆಟ್" ವಿಧಾನವನ್ನು ಸೇರಿಸಿಕೊಳ್ಳಬಹುದು. ನಾವು ಚರಿತ್ರೆಯಲ್ಲಿ ಓದಿದ್ದೇವೆ ಕೇಳಿದ್ದೇವೆ, ವಿವಾಹದ ವಿಷಯದಲ್ಲಿ ರಕ್ತಪಾತಗಳು, ವೈಮನಸ್ಯಗಳು, ವ್ಯಕ್ತಿ ವ್ಯಕ್ತಿಗೆ, ಒಂದು ರಾಜ್ಯಕ್ಕೆ ಇನ್ನೊಂದು ರಾಜ್ಯಕ್ಕೆ ಜಗಳ, ದ್ವೇಷ ಇತ್ಯಾದಿ. ಈ ಒಂದು ಕ್ರಿಯೆಯಲ್ಲಿ, ಶತ್ರುತ್ವ ಬೆಳೆಯುತ್ತದೆ ಮತ್ತು ಇದು"ಸೌಹಾರ್ದತೆ"ಯ ಲಕ್ಷಣವಲ್ಲ, ಈ ರೀತಿಯ ವಿವಾಹದಿಂದ ಸಂಸಾರದಲ್ಲಿ ಒಳ್ಳೆಯ ವಾತಾವರಣವಿರುವುದಿಲ್ಲ. ಆದರೆ, ಸಂಸ್ಕಾರ ರೀತಿಯಲ್ಲಿ ಮತ್ತು ಹಿರಿಯರ ಸಮ್ಮುಖದಲ್ಲಿ ನಡೆಯುವ ವಿವಾಹವು ಬಹಳ ಪರಿಣಾಮಕಾರಿಯಾಗಿರುತ್ತದೆ.

ವಿವಾಹದ ಕ್ರಿಯೆಯಲ್ಲಿ ಹುಡುಗಿ ಅಥವಾ ಹುಡುಗನ ಆಯ್ಕೆ ಬಹಳ ಮುಖ್ಯವಾದುದು. ಈ ಒಂದು ಸರಿಯಾದ ಆಯ್ಕೆ, ವಿವಾಹದ ನಂತರ ಒಳ್ಳೆಯ ಸಾಮರಸ್ಯ ಮತ್ತು ಅನ್ಯೋನ್ಯತೆಯನ್ನು ಪತಿ -ಪತ್ನಿಯರಲ್ಲಿ ಕಾಣಬಹುದು. ಹಿಂದಿನ ದಿನಗಳಲ್ಲಿ, ಕಾರಣಾಂತರಗಳಿಂದ, ಬೇರೆ ಕಡೆಯಿಂದ ಸಂಬಂಧವನ್ನು ಬೆಳೆಸುತ್ತಿರಲ್ಲಿಲ್ಲ ತಮ್ಮ ತಮ್ಮಲ್ಲಿಯೆ ಹೆಣ್ಣನ್ನು ತರುತ್ತಿದ್ದರು. ಆದರೆ ಹುಡುಗ ಅಥವಾ ಹುಡುಗಿ ಬೇರೆ ಗೋತ್ರದವರಾಗಿರಬೇಕು. ಈಗಿನ ಪರಿಸ್ಥಿತಿ ಬದಲಾಗಿದೆ.ತಂದೆ-ತಾಯಿಯರಿಗೆ ಸರಿಯಾಗಿ ಮಾರ್ಗ ಸಿಗುತ್ತಿದೆ.ಮೊದಲನೆಯದಾಗಿ ತಮ್ಮ ಸಂಬಂಧೀಕರಲ್ಲಿ ಮತ್ತು ಸ್ನೇಹಿತರ ಪರಿಸರದಲ್ಲಿ ಯೋಗ್ಯರಾದ ಹುಡುಗಿ - ಹುಡಗ ಇದ್ದಾರೆಯೆ ಎಂದು ತಿಳಿದುಕೊಳ್ಳಬಹುದು. ಒಂದು ಸಾರಿ ಈ ಸರಿಯಾದ ರೀತಿಯಲ್ಲಿ ಜೋಡಿ ಆಯ್ಕೆಯ ನಂತರ ಮುಂದಿನ ಕಾರ್ಯವು ಪ್ರಾರಂಭವಾಗುತ್ತದೆ. ಸಂಸಾರದ ಹಿನ್ನಲೆ, ಹುಡುಗ ಅಥವಾ ಹುಡುಗಿಯ ನಡೆವಳಿಕೆ ಹಾಗೂ ಹವ್ಯಾಸಗಳು ಇತ್ಯಾದಿ.ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಒಳ್ಳೆಯ ಸಂಪ್ರದಾಯ ಅಥವಾ ಸಂಸ್ಕಾರವಂತರ




ಮನೆತನವೇ ಮತ್ತು ಹುಡುಗ ತನ್ನ ಪತ್ನಿಯನ್ನು ಎಲ್ಲಾ ರೀತಿಯಲ್ಲಿ ನೋಡಿಕೊಳ್ಳುವ ಸ್ಥಿತಿಯಲ್ಲಿ ದ್ದಾನೆಯೆ ಮತ್ತು ಹುಡುಗಿ ಹೋಗುವ ಮನೆಗೆ ಯೋಗ್ಯವುಳ್ಳವಳಾಗಿದ್ದಾಳೆಯೆ ಇತ್ಯಾದಿ.

ಈಗಿನ ಆಧುನಿಕ ಕಾಲದ ವಿಸ್ತಾರವಾದ ಪರಿಸರದಲ್ಲಿ, ತಂದೆ ತಾಯಿ ವಿವಿಧವಾದ ಕ್ರಮ ಗಳನ್ನು ಅನುಸರಿಸುತ್ತಾರೆ. ಜಾಹಿರಾತು ಮುಖಾಂ ತರ, ಮ್ಯಾರೇಜ್‌ಬ್ಯೂರೋ, ಇತ್ಯಾದಿ. ಈಗಿನ ಕಾಲದ ತಂತ್ರ ಜ್ಞಾನದಂತೆ ಅಂತರ್ಜಾಲ ಮತ್ತು ಮೊಬೈಲ್ ಮುಖಾಂತರ ಕೂಡ ಈ ಕಾರ್ಯಕ್ರಮ ನಡೆಯುತ್ತಿದೆ. ಯಾವ ಮಾರ್ಗದಲ್ಲಿ ಹೋದರೂ, ಉದ್ದೇಶ ಒಂದೆ, ಸಂಸಾರ ಜೀವನ ಸುಖಮಯ ವಾಗಿರಬೇಕು ಮತ್ತು ಎಲ್ಲಾ ರೀತಿಯಲ್ಲೂ ಆದರ್ಶ ಸಂಸಾರವಾಗಿರಬೇಕು. ಹೆಣ್ಣು ಮತ್ತು ಗಂಡಿನ ಜಾತಕ ಹೊಂದಾಣಿಕೆಯಾಗ ಬೇಕು. ಕೆಲವು ಕಣ್ಣಿಗೆ ಕಾಣದ ವಿಷಯಗಳು ಜಾತಕ ಪರಿಶೀಲನೆ ಯಿಂದ ಗೋಚರವಾಗುತ್ತದೆ ಮತ್ತು ಬೆಳಕಿಗೆ ಬರುತ್ತದೆ. ನನ್ನ ಅಭಿಪ್ರಾಯದಂತೆ, ಇದು ಬಹಳ ಮುಖ್ಯವಾದದ್ದು. ನಮ್ಮ ಭಾರತೀಯ ಪತಿ ಮತ್ತು ಪತ್ನಿಯರ ಸಂಬಂಧ ಬಹಳ ಪ್ರಾಮುಖ್ಯ ವಾದದ್ದು. ನಾವು ನೋಡುತ್ತಿರುತ್ತೇವೆ ತೊಂಬತ್ತು ವರ್ಷದ ದಂಪತಿಗಳು, ಅನ್ಯೋನ್ಯವಾಗಿ, ಸುಖವಾಗಿ, ತೃಪ್ತಿ ಯಾಗಿ ಬೆಳ್ಳಿ, ರಜತ ಮತ್ತು ವಜ್ರ ಮಹೋತ್ಸವ ಸಂಭ್ರಮವನ್ನು ಕಂಡಿರುತ್ತಾರೆ. ಇಲ್ಲಿ ಯಾವ ಹಣ ಕಾಸು ಆಸ್ತಿ ಮತ್ತು ಇತರ ಅಂತಸ್ತುಗಳನ್ನು ಮೆಟ್ಟಿ ವಿವಾಹ ಜೀವನದಲ್ಲಿ ತೃಪ್ತಿಯನ್ನು ಕಂಡಿದ್ದಾರೆ. ಇದಕ್ಕೆ ಕಾರಣ, ಒಳ್ಳೆಯ ಅಭಿಪ್ರಾಯಗಳು ಕಮ್ಮಿ ದುರಭಿಪ್ರಾಯಗಳು, ವಿರಸವಿಲ್ಲದ ಸರಳ ಮತ್ತು ಸರಸ ಜೀವನ. ನಮ್ಮ ಭಾರತೀಯ ವಿವಾಹಗಳು ಮಾನವೀಯತೆ ಮತ್ತು ಧರ್ಮ ಸಂಪದವಾದ ವಿವಾಹಗಳು, ಹಿಂದಿನ ವಿವಾಹ ಸಂಪ್ರದಾಯವನ್ನು ಅನುಸರಿಸಿದರೆ, ಎಲ್ಲವು ಸುಗುಮವಾಗಿರುತ್ತದೆ ಮತ್ತು ಒಳ್ಳೆಯ ವಾತಾವರಣ ವಿರುತ್ತದೆ ಎಂದು ನನ್ನ ಅನಿಸಿಕೆ. ಈಗಿನ ಪರಿಸ್ಥಿತಿಯಲ್ಲಿ ನಾವು ಪತ್ರಿಕೆ ಗಳಲ್ಲಿ ಓದುತ್ತಿದ್ದೇವೆ, ಕೇಳುತ್ತಿದ್ದೇವೆ ಮತ್ತು ನೋಡುತ್ತಿದ್ದೇವೆ. ಪ್ರೇಮ ವಿವಾಹ, ವರದಕ್ಷಿಣೆ ಮತ್ತು ಇನ್ನೂ ಅನೇಕ ಕ್ರೌರ್ಯಗಳು ನಡೆಯುತ್ತಿರು ತ್ತದೆ. ಧರ್ಮಸಂಪದವಾದ ವಿವಾಹಗಳಿಂದ ಸಾಧ್ಯ ವಾದಷ್ಟು ಮಟ್ಟಿಗೆ ಈ ಕ್ರೌರ್ಯಗಳನ್ನು ತಡೆಯಬಹುದು ಎಂದು ಅನಿಸುತ್ತದೆ.



ಒಂದು ಸುಭಾಷಿತವಿದೆ - "ಕನ್ಯಾವರಯತೆ ರೂಪಂ, ಮಾತಾ ವಿತ್ತಂ, ಪಿತಾಶ್ರುತಂ ಮತ್ತು ಬಾಂಧವಾಹ ಕುಲಮಿಚ್ಛಂತಿ, ಮೃಷ್ಟಾನ್ನಮಿತರೆ ಜನಾಃ" ಇದರ ಅರ್ಥ, ಕನ್ಯೆಯಾದವಳಿಗೆ, ತನ್ನ ಸಂಗಾತಿಯ ರೂಪದ ಆಸಕ್ತಿ, ತಾಯಿಗೆ ಅಳಿಯನಾಗಿ ಬರುವ ಹುಡುಗನ ಆರ್ಥಿಕ ಪರಿಸ್ಥಿತಿ, ತಂದೆಗೆ ಅವನ ವಿದ್ಯೆ ಮತ್ತು ಮಿಕ್ಕ ಪ್ರಗತಿಯ ಬಗ್ಗೆ, ಬಂಧುಗಳು ಅವರ ಕುಲ ಮತ್ತು ಅತಿಥಿಗಳಾಗಿ ಬರುವವರು ವಿವಾಹದ "ಮೃಷ್ಟಾನ್ನ' ದ ಬಗ್ಗೆ ಚಿಂತಿಸುತ್ತಾರೆ. ಇಲ್ಲಿ ಮುಖ್ಯವಾಗಿ ಹುಡುಗ ಅಥವಾ ಹುಡುಗಿಯ ತಂದೆ ತಾಯಿಯಗಳ ಪಾತ್ರವೇ ಬಹಳ ಮುಖ್ಯವಾದುದು. ಇಲ್ಲಿ ಮಾತಾ/ಪಿತೃಗಳು ಮಕ್ಕಳನ್ನು ಮದುವೆಗೆ ಒತ್ತಾಯಿಸಬಾರದು. ಮಕ್ಕಳ ಒಪ್ಪಿಗೆಯ ನಂತರವೇ ವಿವಾಹದ ಕಾರ್ಯವನ್ನು ಮುಂದುವರಿಸಬೇಕು. ಹುಡುಗಿ/ಹುಡುಗ ಒಬ್ಬರೊನೊಬ್ಬರು ಸಂಧಿಸಿ ಮಾತನಾಡಿದ ನಂತರ ತಮ್ಮ ಒಪ್ಪಿಗೆಯನ್ನು ಕೊಡಬೇಕು. ಅವರಿಗೆ ಪೂರ್ತಿ ಸ್ವತಂತ್ರವನ್ನು ಕೊಡ ಬೇಕು. ಬಲವಂತ ಒಪ್ಪಿಗೆಯಿಂದ ಮುಂದೆ ಅನೇಕ ತೊಂದರೆಗಳನ್ನು ಎದುರಿಸಬೇಕಾ ಗುತ್ತದೆ.

ಮಕ್ಕಳ ಮತ್ತು ಇಬ್ಬರ ತಂದೆ, ತಾಯಿಯ ಒಪ್ಪಿಗೆಯ ನಂತರ, ನಿಶ್ಚಿತಾರ್ಥ ಅಥವಾ ಲಗ್ನಪತ್ರಿಕೆಯ ಕಾರ್ಯಕ್ರಮ ನಡೆಯುತ್ತದೆ. ಇಲ್ಲಿ ವಿವಾಹಕ್ಕೆ ಯೋಗ್ಯವಾದ "ಮುಹೂರ್ತ"ವನ್ನು ಪರಿಣಿತರಿಂದ ತಿಳಿದು ಕೊಳ್ಳಬೇಕು. ಈಗಿನ ಪರಿಸ್ಥಿತಿಯಲ್ಲಿ ಬೇರೆಯವರ ಅನುಕೂಲ



(ರಜಾದಿನ) ಇತ್ಯಾದಿಗಳನ್ನು ಗಮನದಲ್ಲಿರಿಸಿ ಕೊಂಡು ಮುಹೂರ್ತವನ್ನು ನಿಗದಿಪಡಿಸಲಾಗುತ್ತಿದೆ. ಇದರಿಂದ ಕೆಲವು ತೊಂದರೆಗಳನ್ನು ಅನುಭವಿಸ ಬೇಕಾಗುತ್ತದೆ. ವಿವಾಹವು ನಿರ್ವಿಘ್ನವಾಗಿ ನೆರವೇರಲು ಸರಿಯಾದ ಲಗ್ನ ಮತ್ತು ಇತರ ಪಂಚಕಗಳನ್ನು ಗಮನಿಸಬೇಕು.

**ವಿವಾಹ ಕಾರ್ಯಕ್ರಮದ ಕೆಲವು ಮುಖ್ಯವಾದ ಕಲಾಪಗಳು -**

೧. ಮಂಟಪ ಪೂಜೆ - ಮನೆಯ ಮುಂದೆ ಚಪ್ಪರವನ್ನು ಸರಿಯಾದ ರೀತಿಯಲ್ಲಿ ಹಾಕಬೇಕು. ಈ ಚಪ್ಪರ ಶುಭ ಕಾರ್ಯದ ಸಂಕೇತ. ಈ ಚಪ್ಪರದ ಮೇಲೆ, ಸೂಕ್ಷ್ಮ ಶರೀರದ ಪಿತೃದೇವತೆಗಳು ಆಸೀನರಾಗುತ್ತಾರೆ. ಅವರಿಗೆ ಭೂಸ್ಪರ್ಷ ವಿರುವುದಿಲ್ಲ. ಅವರಿಗೆ ವಿವಾಹಕ್ಕೆ ಆಹ್ವಾನವನ್ನು "ನಾಂದಿ ದೇವತಾಪೂಜೆ"ಯ ಮುಖಾಂತರ ಕೊಡುತ್ತಾರೆ. ಅವರು ಎಲ್ಲ ರನ್ನು ಆಶೀರ್ವದಿಸುತ್ತಾರೆ. ಎಣ್ಣೆಯ ಶಾಸ್ತ್ರ ಮತ್ತು ಮಂಗಳ ಸ್ನಾನವಾದ ಮೇಲೆ ಮಂಟಪ ಅಥವಾ ಚಪ್ಪರದ ಕೆಳಗೆ ಹಳದಿಯ (ಅರಿಸಿನ ಮತ್ತು ಸ್ವಲ್ಪ ಸುಣ್ಣ ಮಿಶ್ರಿತ) ನೀರನ್ನು ಹುಡುಗ/ಹುಡುಗಿಯ ತಾಯಿಯ ಜೊತೆ ನಡೆಯುತ್ತದೆ. ಇದನ್ನು 'ಮಲೆನೀರು ಶಾಸ್ತ್ರ" ಎಂದು ಕರೆಯುತ್ತಾರೆ. ಅರಿಶಿನ ಉಪಯೋಗದ ಹಿನ್ನಲೆಯಲ್ಲಿ, ವೈಜ್ಞಾನಿಕವಾದ ಕಾರಣವನ್ನು ನೋಡಬಹುದು. ಈ ಒಂದು ಸಂದರ್ಭದಲ್ಲಿ ಹುಡುಗ /ಹುಡು ಗಿಯ ತಾಯಿಗೆ ತಮ್ಮ ತವರು ಮನೆಯ ಕಡೆಯಿಂದ ಮಗಳಿಗೆ ಸೀರೆ ಮತ್ತು ಇತರ ಮಂಗಳ ದ್ರವ್ಯಗಳನ್ನು ಆಶೀರ್ವಾದ ಮಾಡಿ ಕೊಡುವ ಪದ್ಧತಿಯಿದೆ. ಇದು ಅವರವರ ಸಂಪ್ರದಾಯದಂತೆ ಪಾಲಿಸುತ್ತಾರೆ.

೨. ದೇವತಾ ಅಥವಾ ಕುಲ ದೇವತಾ ಪೂಜೆ - ಇಲ್ಲಿ ಕುಲದೇವತೆಯ ಮತ್ತು ಇಷ್ಟ ದೇವತೆಯ ಪೂಜೆ ನಡೆಯುತ್ತದೆ. ಹಿರಿಯರ ಆಶೀರ್ವಾದವನ್ನು ಪಡೆಯುತ್ತಾರೆ ಮತ್ತು ಸುಮಂಗಲಿಯರನ್ನು ಆಹ್ವಾನಿಸಿ ಅವರಿಗೆ ಮಂಗಳದ್ರವ್ಯ ಗಳನ್ನು ಕೊಟ್ಟು ಅವರಿಗೆ ಪೂಜೆ /ಆರತಿ ಸಲ್ಲಿಸಿ ಅವರ ಆಶೀ ರ್ವಾದವನ್ನು ಪಡೆಯುತ್ತಾರೆ.

೩. ಪುಣ್ಯಾಹ, ಗಣಪತಿ ಪ್ರಾರ್ಥನೆ ಮತ್ತು ನಾಂದಿ ದೇವತಾ ಪೂಜೆ - ಈ ಒಂದು ಸಂದರ್ಭದಲ್ಲಿ ಪುಣ್ಯಾಹ (ಶುದ್ಧಿ ಗಾಗಿ), ಕಲಶ ಸ್ಥಾಪನೆ, ನವಗ್ರಹಪೂಜೆ, ಗಣಪತಿ ಹೋಮ, ನವಗ್ರಹ ಹೋಮ ನಡೆಯುತ್ತದೆ. ನಂತರ ನಾಂದಿ ದೇವತಾ ಪೂಜೆ, ಇಲ್ಲಿ ಮಾತೃ ಮತ್ತು ಪಿತೃವರ್ಗದ ಪಿತೃದೇವತೆಗಳನ್ನು ಆಹ್ವಾನಿಸುತ್ತಾರೆ. ಇಲ್ಲಿ ತಟ್ಟೆಯಲ್ಲಿ ಅಕ್ಕಿ, ಬೆಲ್ಲದ ಅಚ್ಚು, ಬಟ್ಟಲು ಅಡಿಕೆ ಇತ್ಯಾದಿ ವಸ್ತುಗಳನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಕುಲ ದೇವತೆ ಪೂಜೆಯ ಕಾಲದಲ್ಲಿ, ಹಿಂದಿನಿಂದ ಬಂದ ಸಂಪ್ರ ದಾಯದ ಪ್ರಕಾರ ಪೂಜಿಸಲ್ಪಟ್ಟಿರುವ (ಅಶ್ವತ್ಥ, ಬೇವು, ಅರ್ಕ, ಮತ್ತು ಮಾವು ಇತ್ಯಾದಿ) ಮರದ ಕೊಂಬೆಯನ್ನು ತಂದು, ಆ




ಕೊಂಬೆಯನ್ನು ಕೋಲಿಗೆ ಕಟ್ಟಿ, ಅದಕ್ಕೆ ವಸ್ತ್ರಗಳನ್ನಿಟ್ಟು, ಪೂಜೆ ಯನ್ನು ಸಲ್ಲಿಸುತ್ತಾರೆ. ಇಲ್ಲಿ ಅವರವರ ಸಂಪ್ರದಾಯ ಮತ್ತು ಆಚರಣೆಯಂತೆ ನಡೆಯುತ್ತದೆ. ಇವೆಲ್ಲವು ಎಲ್ಲರ ಆಶೀರ್ವಾದ ಮತ್ತು ವಿವಾಹ ಕಾರ್ಯಕ್ರಮ ಸುಲಲಿತವಾಗಿ ನಡೆಯುವುದಕ್ಕೆ ಪ್ರಾರ್ಥನೆ. ಈ ಕುಲದೇವತೆಯನ್ನು ಮತ್ತು ನಾಂದಿ ದೇವತೆಯ ತಟ್ಟೆಯನ್ನು ಸುರಕ್ಷಿತವಾದ ಸ್ಥಳದಲ್ಲಿರಿಸಿ, ದೀಪ ಬೆಳಗಿಸಿ ಮದುವೆಯ ಕಾರ್ಯ ಮುಗಿಯುವವರೆಗೂ ಕಾಪಾಡಿಕೊಳ್ಳ ಬೇಕು ಮತ್ತು ನಂತರ ವಿಸರ್ಜನೆ ಮಾಡಬೇಕು. ನಮ್ಮ ಭಾರ ತೀಯ ಸಂಸ್ಕೃತಿಯಲ್ಲಿ ಎಲ್ಲದರಲ್ಲೂ ದೈವವನ್ನು ಕಾಣುತ್ತೇವೆ. ನಂತರ ಚಪ್ಪರ ಪೂಜೆಯನ್ನು ಮಾಡಿ, ಅಂದು ಮಾಡಿದ ಸಿಹಿ ಯನ್ನು ಚಪ್ಪರಕ್ಕೆ ನೈವೇದ್ಯವನ್ನು ಮಾಡಿ ಅರ್ಪಿಸುತ್ತಾರೆ. ಇದು ಚಪ್ಪರದ ಮೇಲೆ ಆಹ್ವಾನಿತರಾದ ಪಿತೃದೇವತೆಗಳಿಗೆ ನಾವು ಅರ್ಪಿಸುವ ಭೋಜನ. ನಂತರ ದೇವತಾ ಸಮಾರಾಧನೆ ನಡೆ ಯುತ್ತದೆ. ಬಂದ ನೆಂಟರಿಗೆ ಮತ್ತು ಪೂಜಿಸಲ್ಪಟ್ಟ ಸುಮಂಗಲಿ ಯರಿಗೆ ಭೋಜನವನ್ನು ಬಡಿಸುತ್ತಾರೆ.

(ಸಶೇಷ)

# ಆಹಾರ ಆರೋಗ್ಯದಾಯಕ

ಮೂಲ. ಡಾ|| ಸಿ. ಮಧುಸೂದನ ಶರ್ಮ

- ಅನುವಾದ : ಶ್ರೀಮತಿ.



"ಆರಾರ ಸಂಭವಂ ವಸ್ತುಃ ರೋಗಶ್ಚಾಹಾರ ಸಂಭವಃ"

(- ಚರಕ ಸಂಹಿತೆ)

- ಆಹಾರದಿಂದಲೇ ಈ ಶರೀರವು ಉದ್ಭವಿಸುತ್ತದೆ. ಹಾಗೆ ಉದ್ಭವಿಸಿದ ಶರೀರಕ್ಕೆ ಆಹಾರದಿಂದಲೇ ವ್ಯಾಧಿಗಳು ಸಹಾ ಸಂಭವಿಸುತ್ತವೆ ಎಂದು ಅತ್ಯಂತ ಪ್ರಾಚೀನವಾದ ಸನಾತನ ವಾದ ಆಯುರ್ವೇದ ವೈದ್ಯ ವಾಙ್ಮೇಯವು ಹೇಳುತ್ತದೆ.

ಅಂತಹ ಪವಿತ್ರವಾದ ದೇವಾಧಾರವಾದ ಆಹಾರವನ್ನು ಸದ್ವಿನಿಯೋಗ ಮಾಡಿಕೊಳ್ಳುವುದರ ಬಗ್ಗೆ ಬಹಳ ಗಮನೀಯ ವಾಗಿರುವುದು ಅತ್ಯಾವಶ್ಯಕ. ಆ ವೀಕ್ಷಣೆ ಮತ್ತು ಸಂದೇಹ ನಿವೃತ್ತಿ ಗಾಗಿಯೇ ಈ ಪ್ರಶ್ನೋತ್ತರ ರೂಪದ ಕಿರು ಪ್ರಯತ್ನ.

1) ಆಹಾರದಲ್ಲಿ ಉಪ್ಪನ್ನು ಸಂಪೂರ್ಣವಾಗಿ ಬಳಸದಿರು ವುದು ಒಳ್ಳೆಯದೇ?

ಉಪ್ಪು - ಲವಣವೆಂದರೆ ಋಣ ಎಂಬ ಗಾದೆ ಮಾತನ್ನು ಇಲ್ಲಿ ಸ್ಮರಿಸಬಹುದು. ಉಪ್ಪನ್ನು ಅವಶ್ಯಕ್ಕಿಂತ ಹೆಚ್ಚು ಬಳಸುವು ದರಿಂದ ನಮ್ಮ ಶರೀರದ ಪ್ರತಿ ಕೋಶದ ಮೇಲೆ ಅದರ ಪರಿ ಣಾಮವುಂಟಾಗುತ್ತದೆ. ಇದರಿಂದ ಅನಾರೋಗ್ಯದ ಪಾಲಾಗಿ ಮನುಷ್ಯ ಸಾಲಮಾಡಬೇಕಾಗಿ ಬರುತ್ತದೆಂದು ಈಗಿನವರ ಅಭಿ ಪ್ರಾಯ.

ಹೈ.ಬಿ.ಪಿ.ಕೊಲೆಸ್ಟ್ರಾಲ್,ಕಿಡ್ನಿ ಸಮಸ್ಯೆಗಳಿರುವವರು ಉಪ್ಪನ್ನು ಬಹಳ ಕಡಿಮೆ ತಿನ್ನಬೇಕು. ಆದರೆ ಆರೋಗ್ಯವಂತರು ಉಪ್ಪನ್ನು ಶತ್ರುವಾಗಿ ಪರಿಗಣಿಸಿ ಸಂಪೂರ್ಣವಾಗಿ ತೊರೆ ಯುವುದು ಸಹಾ ಪ್ರಮಾದಕರವೇ. ಬಹುತೇಕರು ನಮ್ಮ ಶರೀ ರಕ್ಕೆ ಅವಶ್ಯವಾದ ಸೋಡಿಯಂ ಹಸಿರಲೆ - ತರಕಾರಿಗಳಿಂದ ಲಭಿಸುತ್ತವೆಂದು ಸಹಜವಾಗಿಯೇ ಭಾವಿಸಿರುತ್ತಾರೆ. ಆದರೆ ವಾಸ್ತವದಲ್ಲಿ ವಾತಾವರಣ - ಶಾರೀರಿಕ ಪ್ರಕೃತಿಕ್ಕನುಗುಣವಾಗಿ ದಿನವೂ 3-4 ಗ್ರಾಂ ಉಪ್ಪನ್ನು ಬಳಸಬೇಕೆಂದು ವೈದ್ಯಕೀಯ ಶಾಸ್ತ್ರರಂಗವು ಶಿಫಾರಸ್ಸು ಮಾಡುತ್ತದೆ.

2) ತರಕಾರಿಗಳನ್ನು ಬೇಯಿಸಿ ತಿಂದರೆ ಒಳ್ಳೆಯದೇ?

ಬೇಯಿಸುವುದು, ಅಧಿಕ ಉಷ್ಣತೆಯಲ್ಲಿ ಕುಚ್ಚುವುದು, ಕುದಿಸುವುದೇ ಅಲ್ಲದೇ ಆಯಾ ತರಕಾರಿಗಳನ್ನು ಎಷ್ಟು ಬೇಕು ಅಷ್ಟೆ ಮೆತ್ತಗಾಗುವವರೆಗೆ ಕುಟ್ಟಿ ತಿನ್ನುವುದು ಹಿತಕರ ಹಾಗಲ, ಹೀರೆ, ಸೌತೆಕಾಯಿಗಳನ್ನು ಸಿಪ್ಪೆ ಸಮೇತ ಬೇಯಿಸಿ ತಿನ್ನುವು ದರಿಂದ ನಮ್ಮ ಶರೀರಕ್ಕೆ ಉಪಯುಕ್ತವಾದ ಪೋಷಕಾಂಶಗಳ ಜೊತೆಗೆ ನಾರಿನಾಂಶವೂ ಲಭಿಸುತ್ತದೆ. ಇಲ್ಲಿ ನಾವು ಅತಿ ಮುಖ್ಯ ವಾಗಿ ಇನ್ನೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಈ ದಿನಗಳಲ್ಲಿ ಆಲೂಗಡ್ಡೆ (ಉರುಳುಗಡ್ಡೆ, ಬಂಗಳ ಗೆಣಸು)ಗಳನ್ನು ನಿರಂತರ ಬಳಸುತ್ತೇವೆಂದರೆ ಅತಿಶಯೋಕ್ತಿ ಯಾಗಲಾರದು. ಹೇರಳವಾಗಿ ದೊರಕುವುದರಿಂದ, ಬಹಳ ದಿನ ಗಳವರೆಗೆ ಸಂಗ್ರಹಿಸಿಡಬಹುದಾದ್ದರಿಂದ, ಇವುಗಳಿಂದ ಶೀಘ್ರ ವಾಗಿ ಅಡುಗೆಗಳನ್ನು ತಯಾರಿಸಬಹುದಾದ್ದರಿಂದ, ರುಚಿಕರ ವಾಗಿರುವುದರಿಂದ ಹೀಗೆ ಅನೇಕ ಕಾರಣಗಳಿಂದಾಗಿ ಆಲೂ ಗಡ್ಡೆ ನಮ್ಮ ಆಹಾರಾಭ್ಯಾಸಗಳ ಪ್ರಮುಖ ಭಾಗವಾಗಿ ಬಿಟ್ಟಿದೆ. ಆದರೆ ಇದರ ಮೇಲೆ ಗಹನವಾಗಿ ಅಧ್ಯಯನ ಮಾಡಿದರೆ ಸಿಪ್ಪೆ ಸಮೇತ ಇದನ್ನು ಬೇಯಿಸಿ ತಿನ್ನುವುದರಿಂದ ಆ ಸಿಪ್ಪೆಯಲ್ಲಿರುವ ನಾರಿನಾಂಶಗಳು ನಮ್ಮ ಪಚನ ಕ್ರಿಯೆಗಳನ್ನು ನಿಧಾನವಾಗಿ ಸಾಗಲು ಸಹಕರಿಸುತ್ತವೆ. ಆದ್ದರಿಂದ ಈ ಪದಾರ್ಥವನ್ನು ತಿಂದ ಕೂಡಲೇ ಪಚನವಾಗಿ ನಮ್ಮ ರಕ್ತವನ್ನು ಸೇರದಿರು ವುದರಿಂದ ಸ್ಥೂಲಕಾಯ,ಮಧುಮೇಹ ಕೊಲೆಸ್ಟ್ರಾಲ್ ನಂತಹ ಸಮಸ್ಯೆಗಳು ತಲೆ ದೋರುವ ಸಂಭವವಿರುತ್ತದೆ.

ಬಹುತೇಕ ಎಲೆ ಪಲ್ಲೆಗಳನ್ನು,ತರಕಾರಿಗಳನ್ನು ಬೇಯಿಸದೇ ತಿನ್ನಲಾರೆವು. ಎಲೆಪಲ್ಲೆಗಳನ್ನು ತರಕಾರಿ ಗಳನ್ನು ಅಧಿಕ ಬೇಯಿಸುವುದರಿಂದ ಒಮ್ಮೊಮ್ಮೆ ಅದರಲ್ಲಿ ರುವ ವಿಟಮಿನ್‌ಗಳು ನೀರಿನಲ್ಲಿ ಕರಗಿ ನಷ್ಟವಾಗುವ ಪರಿಸ್ಥಿತಿಗಳು ಬರಬಹುದು. ಆದ್ದರಿಂದ ನಾವು ದಿನವೂ ಪ್ರತ್ಯೇಕವಾಗಿ ಕ್ಯಾರೆಟ್,ಬೀಟ್‌ರೂಟ್,ಸೌತೆ,ನೀರು ಸೌತೆ, ಈರುಳ್ಳಿ, ಬೆಂಡೆ - ತೊಂಡೆ ಕಾಯಿಗಳನ್ನು, ಹಣ್ಣು ಹಣ್ಣಿನ ರಸಗಳನ್ನು ಮೊಳಕೆಯೊಡೆದ ಬೀಜಗಳನ್ನು ತಪ್ಪದೇ ತಿನ್ನುತ್ತಿರಬೇಕು.

ಶುಂಠಿ, ಪುದಿನ, ಕೊತ್ತಂಬರಿಯಂತಹ ಹಸಿ ತರ ಕಾರಿಗಳಿಂದ ಅವುಗಳನ್ನು ಹಾಕಿ ಮಾಡಿದ,ರೊಟ್ಟಿ, ಕೋಸಂಬರಿಗಳಿಂದಲೂ ಅಧಿಕ ಪ್ರಯೋಜನಗಳುಂಟಾ ಗುತ್ತದೆ.

3)ದಕ್ಷಿಣ ಭಾರತದಲ್ಲಿ ಪ್ರಧಾನವಾಗಿ ಬಳಸುವ ಆಹಾರ ಪದಾರ್ಥವಾದ ಅಕ್ಕಿಯ ಬಗ್ಗೆ ತಿಳಿಸುವಿರಾ?

ಅಕ್ಕಿಯನ್ನು ಸಾಮಾನ್ಯವಾಗಿ ಮೂರು ಬಗೆಗಳಲ್ಲಿ ಬಳಸುತ್ತಾರೆ. (1) ಕಂದಲ ಅಕ್ಕಿ 2) ಕುಚ್ಚಲಕ್ಕಿ 3) ಕಚ್ಚಾ ಅಕ್ಕಿ ಭತ್ತವನ್ನು ಕುಟ್ಟುವುದರಿಂದ ಬರುವ ಅಕ್ಕಿಯನ್ನು ಕುಟ್ಟಲಕ್ಕಿ ಎನ್ನುತ್ತಾರೆ. ಪೋಷಕಾಂಶಗಳು ಮತ್ತು ನಾರಿ ನಾಂಶಗಳು ಇದರಲ್ಲಿ ಹೆಚ್ಚಾಗಿರುವುದರಿಂದ ಇದು ಆರೋಗ್ಯಕ್ಕೆ ಬಹಳಾ ಪೂರಕವಾದುದು. ಈ ಅಕ್ಕಿಯಿಂದ ತಯಾರಿಸಿದ ಅಡುಗೆಗಳು ಕಣ್ಣಿಗೆ ಇಂಪಾಗಿರದಿದ್ದರೂ ದೇಹಕ್ಕೆ ತುಂಬಾ ಒಳ್ಳೆಯದು .







ಆರೋಗ್ಯಕರವಾದ ಬೆಳವಣಿಗೆಗೆ ಇದು ಬಹಳ ಸಹಾಯಕವಾದುದರಿಂದ ಪ್ರಸ್ತುತ ಕುಚ್ಚಲಕ್ಕಿ ಮಾರ್ಕೆಟ್ಟಿನಲ್ಲಿ ಹೇರಳವಾಗಿ ದೊರಕುತ್ತಿದೆ.

ಭತ್ತವನ್ನು ನೀರಿನಲ್ಲಿ ನೆನೆಸಿ, ಕುದಿಸಿ, ಒಣಗಿಸಿ, ತಿಕ್ಕಿದ ಅಕ್ಕಿಯನ್ನು ಕುಚ್ಚಲಕ್ಕಿ ಎನ್ನುತ್ತಾರೆ. ಇದು ವಾಸನಾಯುಕ್ತವಾಗಿರುವುದರಿಂದ ಬಹಳಾ ಜನ ಇದನ್ನು ಉಪಯೋಗಿಸುವುದಿಲ್ಲ. ಇದರಲ್ಲೂ ಸಹಾ ಪೋಷಕಾಂಶ ಹಾಗೂ ನಾರಿನಾಂಶಗಳು ವಿಫಲವಾಗಿರುತ್ತದೆ.

ಅತ್ಯಧಿಕವಾದ ಶೇಕವಾರು ಜನರ ಬಳಸುವ ಅಕ್ಕಿ ನೂಲಿನಕ್ಕಿ. ಇದನ್ನು ಕಚ್ಚಾ ಅಕ್ಕಿಯೆಂದು ಸಹ ಕರೆಯುತ್ತಾರೆ. ಪಾಲಿಷ್ ಮಾಡಿದ ಈ ಅಕ್ಕಿ ಬಿಳಿಯಾಗಿ ಆಕರ್ಷಣೀಯವಾಗಿ ಕಾಣಿಸುತ್ತವೆ.

4) ಹೆಚ್ಚಾಗಿ ಪಾಲಿಷ್ ಮಾಡಿದ ನೂಲಿನಕ್ಕಿ ಆರೋಗ್ಯಕ್ಕೆ ಒಳ್ಳೆಯದೇ?

ಹೆಚ್ಚಾಗಿ ಅಕ್ಕಿಯನ್ನು ಪಾಲಿಷ್ ಮಾಡಿದಲ್ಲಿ ಕೇವಲ ಪಿಷ್ಟ ಪದಾರ್ಥ ಮಾತ್ರ ಉಳಿದು ಮೇಲಿನ ಪದರಗಳಲ್ಲಿರುವ ಸೂಕ್ಷ್ಮಾತಿ ಸೂಕ್ಷ್ಮ ಪೋಷಕಾಂಶಗಳು ನಷ್ಟವಾಗುವುದರಿಂದ ನಮಗೆ ಮಧುಮೇಹದಂತಹ ವ್ಯಾಧಿಗಳು ಬರುತ್ತವೆ. ಇಂತಹ ಆಹಾರ ಶ್ರೀಘವಾಗಿ ಜೀರ್ಣವಾಗುವುದರಿಂದ ಮತ್ತೆ ಮತ್ತೆ ಆಹಾರ ಸೇವಿಸುವ ಪರಿಸ್ಥಿತಿಯೊದಗಿ ಸ್ಥೂಲಕಾಯದಂಥ ಸಮಸ್ಯೆಗಳು ಮೈದೋರುತ್ತದೆ.

ಇಲ್ಲಿ ಮತ್ತೊಂದು ವಿಷಯವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಅಕ್ಕಿಯನ್ನು ಹೆಚ್ಚಾಗಿ ನೀರಿನಲ್ಲಿ ತೊಳೆಯುವುದು, ಬೇಯಿಸಿದ ನಂತರ ಅಕ್ಕಿಯನ್ನು ಬಸೆಯುವುದರಿಂದ ಸಹಾ ನೀರಿನಲ್ಲಿ ಕರಗುವಂತಹ ವಿಟಮಿನ್‌ಗಳು ನಷ್ಟವಾಗುತ್ತವೆ.

5) ಎಲೆಪಲ್ಲೆಗಳು - ತರಕಾರಿಗಳನ್ನು ಬೇಯಿಸುವಾಗ ತೆಗೆದುಕೊಳ್ಳಬೇಕಾದ ಮುಂಜಾಗ್ರತೆ ಕ್ರಮಗಳೇನು?

ಎಲೆಪಲ್ಲೆ - ತರಕಾರಿಗಳನ್ನು ಮೊದಲು ನೀರಿನಲ್ಲಿ ಶುಭ್ರವಾಗಿ ತೊಳೆದು ಒರೆಸಿ ನಂತರ ತುಂಡುಗಳಾಗಿ ಕತ್ತರಿಸಬೇಕು. ತುಂಡರಿಸಿದ ನಂತರ ನೀರಿನಲ್ಲಿ ಹಾಕ ಬಾರದು. ಹಾಗೆಯೇ ಇವುಗಳನ್ನು ಬೇಯಿಸುವಾಗಲೂ ಮೊದಲೇ ನೀರಿನಲ್ಲಿ ಹಾಕಿ ಬೇಯಿಸುವುದಕ್ಕಿಂತ ನೀರು ಮರುಳಲು ಶುರುವಾದಾಗ ತರಕಾರಿ ತುಂಡುಗಳನ್ನು ಹಾಕುವುದು ಉತ್ತಮ. ಹೀಗೆ ಚಿಕ್ಕ - ಚಿಕ್ಕ ವಿಷಯಗಳನ್ನು ಗಮನದಲ್ಲಿರಿಸುವುದರಿಂದ ಪೋಷಕಾಂಶಗಳು ಬಹಳ ಹೊತ್ತಿನವರೆಗೆ ನಷ್ಟವಾಗದೇ ಉಳಿಯುತ್ತವೆ.

ಇಂತಹ ಪದಾರ್ಥಗಳನ್ನು ಬೇಯಿಸುವಾಗ ಪಾತ್ರೆಯ ಮೇಲೆ ಮುಚ್ಚಳವನ್ನು ತಪ್ಪದೇ ಮುಚ್ಚಬೇಕು. ಇಲ್ಲದಿದ್ದರೆ ತರಕಾರಿಯಲ್ಲಿನ ಕೆರಾಟನ್ ಅಂಶ ನಷ್ಟವಾಗುವುದೊಂದೇ ಅಲ್ಲದೇ ವಿಟಮಿನ್ - ಎ ಲೋಪಗಳುಂಟಾಗುತ್ತವೆ.

ಬೇಳೆ-ತರಕಾರಿಗಳನ್ನು ಶೀಘ್ರವಾಗಿ ಬೇಯಿಸಲು ಹಲವರು ಸೋಡವನ್ನು ಬಳಸುತ್ತಾರೆ. ಇದರಿಂದಲು ಸಹಾ ಹಲವು ಪೋಷಕಾಂಶಗಳು ನಶಿಸುತ್ತವೆ.

6) ಆಹಾರದಲ್ಲಿ ತುಪ್ಪವನ್ನೇ ಬಳಸಲೇಬಾರದೆಂಬ ನಿಲುವಿನ ಪ್ರಚಾರದ ನಿಜಾಂಶವೇನು?

"ಋಣಂ ಕೃತ್ವಾ ಘೃತಂ ಪಿಬೇತ್" ಎನ್ನುವುದು ಪ್ರಾಚೀನ ಗಾದೆ. ಅಂದರೆ 'ಸಾಲ ಮಾಡಿಯಾದರೂ ತುಪ್ಪವನ್ನು ತಿನ್ನಬೇಕು' ಎಂಬುದು ಅರ್ಥ. ಈ ತುಪ್ಪಕ್ಕಿರುವ ಶ್ರೇಷ್ಠವಾದ ಔಷಧೀಯ ಗುಣವನ್ನು ನಮ್ಮ ಹಿರಿಯರು ಈ ರೀತಿಯಲ್ಲಿ ಹಕ್ಕಿ ತೆಗೆದು ಹೊರಹೊಮ್ಮಿದ್ದಾರೆ.

ಹಳೇಕಾಲದವರ ಜೀವನ ಶೈಲಿ, ವಿಧಾನಗಳಲ್ಲಿ ದೈಹಿಕ ಶ್ರಮ ಹೆಚ್ಚಾಗಿರುವ ಕಾರಣಕ್ಕೆ ಅವರು ತುಪ್ಪವನ್ನು ಕುಡಿದರೂ, ಹಾಕಿ ಕೊಂಡರೂ, ಲೇಪಿಸಿಕೊಂಡರೂ ಯಾವುದೇ ತೊಂದರೆಯಿಲ್ಲದೆ ಬದುಕುತ್ತಿದ್ದರು.

ಪ್ರಸ್ತುತ ಆಧುನಿಕ ಕಾಲದಲ್ಲಿ ಮುಂಬರುವ ತೊಂದರೆಗಳನ್ನು ಊಹಿಸಿಯೇ ಬಹಳಷ್ಟು ಜನ ತುಪ್ಪವನ್ನು ಸಂಪೂರ್ಣವಾಗಿ ನಿಷೇಧಿಸಿದ್ದಾರೆ. ಇಂದಿನ ನಮ್ಮ ಜೀವನ ಶೈಲಿಯಲ್ಲಿಯ ಊಟೋಪಚಾರಗಳಲ್ಲಿ ಅದೆಷ್ಟೋ ಮಾರ್ಪಾಟುಗಳು ಕಂಡು ಬರುತ್ತವೆ. ದೈಹಿಕಶ್ರಮವಿಲ್ಲದ ನಿರಾಯಾಸ ಜೀವನ ನಮ್ಮದಾಗಿದೆ.

ಆದ್ದರಿಂದ ನಮ್ಮ ಶರೀರಕ್ಕೆ, ಅವಯವಗಳಿಗೆ ಅಗತ್ಯವಿರುವಷ್ಟು ಪೋಷಕಾಂಶಗಳನ್ನೂ-ಶಕ್ತಿ ಪುಷ್ಟಿಯನ್ನು ಕೊಡುವಂತಹ ತಾಜಾ ತುಪ್ಪವನ್ನು ಮಿತವಾಗಿ ಬಳಸಬೇಕೇ ಹೊರತು ಸುವಿ ಕೊಳ್ಳಬಾರದು. ಇಂತಹ ಕೊಬ್ಬಿನ ಪದಾರ್ಥ ಗಳನ್ನು ಹಿತ ಮಿತವಾಗಿ ಬಳಸದಿದ್ದಲ್ಲಿ ದೇಹವು ಒಣಗಿದಂತೆ ಆಗುವುದು. ಕೀಲು ನೋವು ಮುಂತಾದ ಸಮಸ್ಯೆಗಳು ಬರಲಾರಂಭಿಸುತ್ತವೆ. ಆದ್ದರಿಂದ ಮಿತವಾಗಿ ಬಳಸಿದಲ್ಲಿ ಹಿತ.

# ಮನೋನಿಗ್ರಹಕ್ಕೊಂದು ಮಾರ್ಗ

ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್
ಅನುವಾದ - ಡಿ.ಎಸ್. ಭೂಮಿಕ

ಚಿಕ್ಕ ಮಕ್ಕಳಿಂದ ಹಿಡಿದು ಹಣ್ಣು ಮುದುಕನವರೆಗೂ ಪ್ರತಿಯೊಬ್ಬರನ್ನು ಹಿಂಡಿ ಹಿಪ್ಪೆ ಮಾಡುವ ಕಷ್ಟವೆಂದರೆ ಅದು ಮಾನಸಿಕ ಚಿಂತೆ.ಸಾಧಾರಣವಾಗಿ ಪ್ರತಿಯೊಬ್ಬರಿಂದಲೂ ಕೇಳಿಬರುವ ದೂರು ಮನಸ್ಸನ್ನು ಕುರಿತೇ ಆಗಿರುತ್ತದೆ. ಪ್ರಮುಖವಾಗಿ ಇಂದಿನ ದಿನಗಳಲ್ಲಿ ಮಾನಸಿಕ ಚಿಂತಗಳು ತುಂಬಾನೇ ಬೆಳೆದುಬಿಟ್ಟಿವೆ. ಅದನ್ನು ಎಲ್ಲರೂ 'ಮಾನಸಿಕ ಒತ್ತಡ' ಎಂಬ ಹೊಸ ಹೆಸರನ್ನು ಕೂಡಾ ಇಟ್ಟಿದ್ದಾರೆ. ಮೊದಲು ಅದನ್ನು 'ಮಾನಸಿಕ ಸಂಕ್ಷೋಭೆ' ಎನ್ನುತ್ತಿದ್ದರು. ಮುಖ್ಯವಾಗಿ ಇದು ವಿದ್ಯಾರ್ಥಿಗಳ ಪರೀಕ್ಷೆಯ ವೇಳೆಯಲ್ಲಿ ಇಂಟರ್‌ವ್ಯೂ ಸಮಯದಲ್ಲಿ, ಎಂಟ್ರನ್ಸ್ ಪರೀಕ್ಷೆಯ ಸಮಯಗಳಲ್ಲಿ , ಆಟಪಂದ್ಯಾವಳಿಗಳ ವೇಳೆಗಳಲ್ಲಿ ಉಂಟಾಗುತ್ತಿರುತ್ತದೆ. ಅಷ್ಟಕ್ಕೂ ಈ ಮಾನಸಿಕ ಒತ್ತಡ ಹೊಸದೇನೂ ಅಲ್ಲ. ಭಗವದ್ಗೀತೆಯಲ್ಲಿ ಈ ವಿಷಯವು ಚರ್ಚಿಸಲ್ಪಟ್ಟಿದೆ. ಭಗವದ್ಗೀತೆಯಲ್ಲಿ ಚರ್ಚೆಯು ಶ್ರೀಕೃಷ್ಣಾರ್ಜುನರ ನಡುವೆ ಉಂಟಾಗಿದೆ. ಅದರಲ್ಲಿ ಒಂದೆಡೆ ಅರ್ಜುನನು ಮಾತಾಡುತ್ತಾ ಕೃಷ್ಣನೊಡನೆ ಮನೋ ನಿಗ್ರಹವೆಂಬುದು ಬಹಳ ಕಷ್ಟವೆಂದೂ, ಅದನ್ನು ಸಾಧಿಸುವುದೆಂದರೆ ಗಾಳಿಯನ್ನು ಹಿಡಿದಿಟ್ಟಂತೆಯೇ ಕಷ್ಟಕರವಾದುದೆಂದೂ ತಿಳಿಸಿದ್ದಾನೆ. ಗಾಳಿಯನ್ನು ತಡೆಗಟ್ಟುವುದು ಯಾರಿಂದಲೂ ಸಾಧ್ಯವಿಲ್ಲ. ಹಾಗೆಯೇ ಮನಸ್ಸನ್ನು ಸಹಾ ನಿಗ್ರಹಿಸುವುದು ಅತ್ಯಂತ ಕಷ್ಟವೆಂದು ಅರ್ಜುನನು ಹೇಳಿದ್ದಾನೆ. ಅದಕ್ಕೆ ಪ್ರತ್ಯುತ್ತರವಾಗಿ ಗೀತಾಚಾರ್ಯನು ಒಂದು ಅತ್ಯದ್ಭುತವಾದ ಮನೋನಿಗ್ರಹ ಮಾರ್ಗವನ್ನು ಬಹಿರಂಗ ಪಡಿಸಿದ್ದಾನೆ.




"ಶ್ರೀ ಕೃಷ್ಣ ಭಗವಂತನು ಹೀಗೆ ಹೇಳಿದ್ದಾನೆ! ಓ ಬಾಹುಬಲಿಯೇ ಚಂಚಲವಾದ ಮನಸ್ಸನ್ನು ನಿಗ್ರಹಿಸುವುದು ನಿಸ್ಸಂದೇಹವಾಗಿ ಕಷ್ಟಕರವೇ ಆದರೂ ಅದಕ್ಕೆ ತಕ್ಕುದಾದ ಅಭ್ಯಾಸದಿಂದ, ವೈರಾಗ್ಯದಿಂದ ಅದನ್ನು ಸಾಧಿಸಬಹುದು." (ಭಗವದ್ಗೀತೆ 6.35)

ಮನಸ್ಸು ಚಂಚಲಮಯವಾದುದೆಂದು ಸಾಕ್ಷಾತ್ ಭಗವಂತನೇ ಒಪ್ಪಿಕೊಂಡಿದ್ದಾನೆ.ಇದು ಎಲ್ಲರ ಅನುಭವದಲ್ಲಿರುವುದೇ. ಮನಸ್ಸು ಒಂದು ಕ್ಷಣವಾದರೂ ಖಾಲಿಯಿರಲಾರದು. ಅಷ್ಟಕ್ಕೂ ಮನಸ್ಸೆಂದರೇನು? ಅದು ಕೇವಲ ಆಲೋಚನೆಗಳ ಪರಂಪರೆ ಘಟಿಸಿದ, ಘಟಿಸುತ್ತಿರುವ ಮತ್ತು ಘಟಿಸಬಹುದಾದ ಮೂರು ಬಗೆಯ ಆಲೋಚನೆಗಳೇ ಮನಸ್ಸು.ಈ ಮೂರು ಕಾರ್ಯಗಳಲ್ಲಿ ಮನಸ್ಸು ವಿಲೀನವಾಗಿರುತ್ತದೆ. ನಡೆದ ಘಟನೆಗಳನ್ನು ಮೆಲುಕು ಹಾಕುತ್ತಾ ಮನಸ್ಸು ಕೆಲವೊಮ್ಮೆ ಕುಗ್ಗಿ ಹೋಗುವುದುಂಟು. ಘಟಿಸಬಹುದಾದ ಸಂಗತಿಗಳನ್ನು ನೆನೆದು ಭಯಪಡುವುದೂ ಉಂಟು. ವಾಸ್ತವದಲ್ಲಿ ಅದು ವರ್ತಮಾನ ವಿಷಯಗಳನ್ನೇ ಬದಿಗಿರಿಸಿಬಿಟ್ಟಿರುತ್ತದೆ. ಅಂದರೆ ಅದು ಪ್ರತಿಕ್ಷಣವೂ ಅತ್ತಿಂದಿತ್ತ ಓಲಾಡುತ್ತಿರುತ್ತಲೇ ಇರುತ್ತದೆ. ಕಳೆದ ವಿಷಯಗಳನ್ನು ನೆನೆಯುವುದರಿಂದ ಆಗಬಹುದಾದ ನಷ್ಟವಾದರೂ ಏನು? ಅಲ್ಲದೇ ಭವಿಷ್ಯದ ಕುರಿತು ಊಹಿಸಬಹುದಾದ ವಿಷಯಗಳಿಂದ ಆಗಬಹುದಾದ ನಷ್ಟವಾದರೂ ಏನು? ಎಂದು ಪ್ರಶ್ನಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಭೂತದಲ್ಲಿ ಗತಿಸಿದ ಕಷ್ಟಗಳನ್ನು ನೆನೆದು ಬಾಧೆಗೊಳಗಾದರೆ ಮನಸ್ಸಿನಲ್ಲಿ ನಿರಾಶಾಭಾವ ಬೆಳೆದು ಬಿಡುತ್ತದೆ. ಹಾಗೆಯೇ ಭವಿಷ್ಯದಲ್ಲಿ ಯಾವುದೋ ಪ್ರಮಾದ ಘಟಿಸಬಹುದೆಂದು ಭಯಪಡುವುದರಿಂದ ಉದ್ವಿಗ್ನತೆ ಹೆಚ್ಚಾಗುತ್ತದೆ. ಇವುಗಳಿಂದ ಮನುಷ್ಯನಲ್ಲಿ ಉತ್ಸಾಹ, ಶಕ್ತಿ, ಸ್ಫೂರ್ತಿ ಕಡಿಮೆಯಾಗುತ್ತವೇ ಹೊರತು ವೃದ್ಧಿಯಾಗಲಾರವು ಅದಕ್ಕೇ ಈ ತೆರನಾದ ಹಳೆಯ ಜ್ಞಾಪಕಗಳಿಂದ, ಭವಿಷ್ಯದ ಊಹೆಗಳಿಂದ ಕಾಲ ಕಳೆಯುವುದರಿಂದ ಯಾವುದೇ ಲಾಭವಿಲ್ಲ. ಆದರೆ ಇದು ಅಷ್ಟು ಸುಲಭವಾಗಿ ಸಾಧ್ಯವಾಗುವುದಿಲ್ಲ. ಆದ್ದ ರಿಂದಲೇ ಅಭ್ಯಾಸ - ವೈರಾಗ್ಯಗಳೆಂಬುವು ತಪ್ಪದೇ ಬೇಕೆಂದು ಗೀತಾಚಾರ್ಯರು ಹೇಳುತ್ತಾರೆ.

ಹಾಗಾದರೆ ವಿದ್ಯಾರ್ಥಿಗಳು ಮಾಡಬಹುದಾದ ಅಭ್ಯಾಸಗಳೇನು? ಹಾಗೆಯೇ ಅವರು ಸಾಧಿಸಬೇಕಾದ ವೈರಾಗ್ಯವಾವುದು? ವಿದ್ಯಾರ್ಥಿಗಳು ಮಾಡಬಹುದಾದ ಅಭ್ಯಾಸಗಳೆಂದರೆ ಗುರಿಯನ್ನಿಟ್ಟುಕೊಳ್ಳುವುದು ಮತ್ತು ಆ ಗುರಿಯನ್ನು ಪದೇ ಪದೇ ನೆನೆಯುವುದು. ಯಾವಾಗ ಮನುಷ್ಯನಿಗೆ ಗುರಿಯಿರದೇ ಹೋಗುವುದೋ ಆಗ ಮನುಷ್ಯ ಕೈಚಲ್ಲಿ ಕುಳಿತು ಬಿಡುತ್ತಾನೆ. ಗುರಿ ಸಾಧನೆಗೆ ಕೆಲಸಕ್ಕೆ ಬಾರದ ವಿಷಯಗಳನ್ನು ತೊರೆದು ಬಿಡುವುದೇ ವೈರಾಗ್ಯವೆನಿಸಿಕೊಳ್ಳುತ್ತದೆ. ಇಂತಹ ಅಭ್ಯಾಸ - ವೈರಾಗ್ಯಗಳ ಮೂಲಕ ವಿದ್ಯಾರ್ಥಿಗಳು ಅತಿಶೀಘ್ರವಾಗಿ ಮಾನಸಿಕ ಚಿಂತೆಗಳಿಂದ ಹೊರಬೀಳುತ್ತಾರೆ. ವಿಜಯವನ್ನು ಸಾಧಿಸುತ್ತಾರೆ.ಆಗ ಜೀವನವು ಎಷ್ಟೋ ಆರೋಗ್ಯಕರವಾಗಿ ಉತ್ಸಾಹಕರವಾಗಿ, ಐಶ್ವರ್ಯಕರವಾಗಿ ಹೋಗುತ್ತದೆ.

ಧಾರಾವಾಹಿಕ

## 5. ತಿರುಮಲೆ - ಸಂಕ್ಷಿಪ್ತ ನೋಟ

ತಿರುಮಲೆಯ ಕ್ಷೇತ್ರದಲ್ಲಿ ವೇಂಕಟೇಶ್ವರಸ್ವಾಮಿಗಿಂತಲೂ ಮೊದಲು "ಆದಿವರಾಹಸ್ವಾಮಿ ನೆಲೆಸಿದರಂತೆ! ಆದ್ದರಿಂದಲೇ ಈ ಸ್ಥಳ ಆದಿವರಾಹಕ್ಷೇತ್ರವೆಂದು ಕರೆಯಲ್ಪಡುತ್ತಿದೆ. ಆದಿವರಾಹಸ್ವಾಮಿ ಯಾರು? ಇಲ್ಲಿಗೆ ಏಕೆ ಬಂದರು? ಯಾವಾಗ ಬಂದರು? ಎಂದು ತಿಳಿಯಬೇಕೆಂದರೆ ಸಾವಿರಾರು ವರ್ಷಗಳ ಹಿಂದೆ ನಡೆದ ಕಥೆಯನ್ನು ತಿಳಿಯಬೇಕಾದ್ದೇ!

### ವರಾಹಾವತಾರ

ಒಮ್ಮೆ ಬ್ರಹ್ಮ ದೇವನು ಸೃಷ್ಟಿಕಾರ್ಯವನ್ನು ಮಾಡುತ್ತಾ ಬಹಳ ಆಯಾಸಗೊಂಡನಂತೆ. ಪಾಪ ! ಆ ರೀತಿ ಆಯಾಸಗೊಂಡಿದ್ದ ಬ್ರಹ್ಮನಿಗೆ ನಿದ್ದೆ ಆವರಿಸಿತು.ಅಷ್ಟರಲ್ಲಿ ಆತನ ಸೃಷ್ಟಿಯೆಲ್ಲಾ ಅಲ್ಲಕಲ್ಲೋಲವಾಗಿ, ಜಲಪ್ರಳಯ ಉಂಟಾಯಿತಂತೆ.ಇದೇ ಸಮಯವನ್ನು ಕಾಯುತ್ತಿದ್ದ ಹಿರಣ್ಯಾಕ್ಷನೆಂಬ ರಾಕ್ಷಸನು ಭೂಮಿಯನ್ನು ಸಮುದ್ರದ ಅಡಿಯಲ್ಲಿ ಬಚ್ಚಿರಿಸಿದ. ಅಷ್ಟರಲ್ಲಿ ನಿದ್ದೆಯಿಂದ ಎಚ್ಚರಗೊಂಡ ಬ್ರಹ್ಮದೇವನು ಭೂಮಿಯನ್ನು ರಕ್ಷಿಸಬೇಕೆಂದು ಶರಣು ಬೇಡಿದ.

ಕೂಡಲೇ ಮಹಾವಿಷ್ಣುವು ದೊಡ್ಡದಾದ ವರಾಹರೂಪವನ್ನು ಧರಿಸಿ, ಹಿರಣ್ಯಾಕ್ಷನನ್ನು ಸಂಹರಿಸಿ ತನ್ನ ಕೋರೆಗಳಿಂದ ಭೂದೇವಿಯನ್ನು ಉದ್ಧರಿಸಿ ರಕ್ಷಿಸಿದ. ಆ ಸ್ವಾಮಿ ವರಾಹ ರೂಪದಿಂದ ಮಾಡಿದ ಘನಕಾರ್ಯವನ್ನು ದೇವತೆಗಳೆಲ್ಲಾ ಹೊಗಳುತ್ತಾ."ಓ ವರಾಹಸ್ವಾಮಿ ಭೂದೇವಿಯೊಂದಿಗೆ ಇಲ್ಲೇ ಇದ್ದು ಎಲ್ಲರನ್ನು ರಕ್ಷಿಸಬೇಕೆಂದು " ಪ್ರಾರ್ಥಿಸಿದರು.

ಅವರುಗಳ ಮೊರೆಗೆ ಓಗೊಟ್ಟು ವರಾಹಸ್ವಾಮಿ, ಗರುಡನ ಕೈಯಲ್ಲಿ ವೈಕುಂಠದೊಂದಿಗೆ, ಅಲ್ಲಿದ್ದ ಸರಸ್ಸನ್ನು ತರಿಸಿಕೊಂಡು ಇಲ್ಲಿ ಸ್ಥಾಪಿಸಿದ. ಅಂದಿನಿಂದ ಈ ಕ್ಷೇತ್ರ "ಆದಿವರಾಹಕ್ಷೇತ್ರ''ವೆಂದೂ, ಆ ಸರಸ್ಸು "ಸ್ವಾಮಿಪುಷ್ಕ ರಿಣಿ" ಎಂದು ಕರೆಯಲ್ಪಡುತ್ತಿದೆ. ಇದು ಆದಿವರಾಹ ಕ್ಷೇತ್ರದ ಕಥೆ!

ಕೆಲವು ಸಾವಿರ ವರ್ಷಗಳ ನಂತರ ಈ ಕ್ಷೇತ್ರಕ್ಕೆ ಶ್ರೀ ವೇಂಕಟೇಶ್ವರ ಸ್ವಾಮಿಯು ಬಂದು ನೆಲೆಸಿದ. ಆ ಸ್ವಾಮಿಯು ಇಲ್ಲಿಗೆ ಏಕೆ ಬಂದ? ಬಂದವನು ಇಲ್ಲೇ ಏಕೆ ನಿಂತ? ಎಂಬುದನ್ನು ತಿಳಿದು ಕೊಳ್ಳೋಣ!

### ಯಾರಿಗಾಗಿ ಯಾಗ!

ಹಿಂದೆ ಒಮ್ಮೆ ಪವಿತ್ರವಾದ ಗಂಗಾದಿಯ ತೀರದಲ್ಲಿ ಅನೇಕ ಮುನಿಗಳು ಒಂದೆಡೆ ಸೇರಿದರು. ಅವರೆಲ್ಲಾ ಲೋಕ ಕಲ್ಯಾಣಕ್ಕಾಗಿ ಒಂದು ಯಾಗವನ್ನು ಮಾಡುವುದಕ್ಕೆ ಸಂಕಲ್ಪಿಸಿದರು. ವೇದಮಂತ್ರಗಳ ನಡುವೆ ಮಂಗಳ ವಾದ್ಯಗಳ ನಡುವೆ ಆ ಯಜ್ಞ ಆಡಂಬರವಾಗಿ ಪ್ರಾರಂಭವಾಯಿತು.

ಅಷ್ಟರಲ್ಲಿ ನಾರಾಯಣ! ನಾರಾಯಣ!! ಎನ್ನುತ್ತಾ ಆಕಾಶದಿಂದ ನೇರವಾಗಿ ನಾರದ ಮಹರ್ಷಿ ಅಲ್ಲಿ ಪ್ರತ್ಯಕ್ಷನಾದ.

ಅಬ್ಬಾ! ಕಲಹ ಪ್ರಿಯನಾದ ನಾರದನು ಬಂದ. ಈ ಯಾಗ ಮುಂದುವರೆಯುವುದಿಲ್ಲ ಎಂದು ಕೆಲವು ಮಹರ್ಷಿಗಳು ಮಾತನಾಡಿಕೊಂಡರು.ಲೋಕಕ್ಷೇಮಕ್ಕಾಗಿ ಶುಭಪ್ರದವಾಗಿರುವ ಯಾಗ ಪ್ರಾರಂಭವಾಗಿರುವ ಸಮಯದಲ್ಲಿ ದೇವರ್ಷಿ ಬಂದಿರುವುದು ಶುಭಶಕುನವೆಂದು ಮತ್ತೆ ಕೆಲವು ಮಹರ್ಷಿಗಳು ಭಾವಿಸಿದರು.

ನಾರಾಯಣ!ನಾರಾಯಣ!! ಎಂಬ ನಾರದನ ನಾರಾಯಣ ನಾಮಸ್ಮರಣೆಯಿಂದ ಎಲ್ಲರ ಯೋಚನೆಗಳು ಅಲ್ಲೇ ನಿಂತುಹೋದುವು.ಎಲ್ಲರೂ ಎದ್ದು ನಿಂತು ನಮಸ್ಕರಿಸುತ್ತಾ ನಾರದನಿಗೆ ಸ್ವಾಗತವನ್ನು ಹೇಳಿದರು. ಅತಿಥ್ಯವನ್ನು ನೀಡಿದರು.

ಅವರ ಸತ್ಕಾರದಿಂದ ಸಂತೋಷಗೊಂಡ ನಾರದನು, ಆ ಮುನಿಗಳನ್ನು ಉದ್ದೇಶಿಸಿ, ನೀವೆಲ್ಲಾ ಇಲ್ಲಿ ಏನು ಮಾಡುತ್ತಿದ್ದೀರಿ? ಎಂದು ಆಸಕ್ತಿಯಿಂದ ಕೇಳಿದರು.

ಸ್ವಾಮಿ ದೇವರ್ಷಿ! ನಾವು ಒಂದು ಯಾಗವನ್ನು ಪ್ರಾರಂಭಿಸಿದ್ದೇವೆ.ಈ ಯಜ್ಞದಿಂದಾಗಿ ಜಗತ್ಕಲ್ಯಾಣ ಉಂಟಾಗಲೆಂದೇ ನಮ್ಮೆಲ್ಲರ ಉದ್ದೇಶ. ಈ ಸಮಯಕ್ಕೆ ಸರಿಯಾಗಿ ನೀವೂ ಬಂದಿದ್ದು ನಮಗೆಲ್ಲಾ ಆನಂದವಾಗಿದೆ. ನಮ್ಮ ಈ ಕೆಲಸಕ್ಕೆ ನಿಮ್ಮ ಆಶೀರ್ವಾದವನ್ನು ನೀಡಿ ಎನ್ನುತ್ತಾ ಕೈಮುಗಿದು ನಮಸ್ಕರಿಸಿದರು.

ನಾರಾಯಣ! ನಾರಾಯಣ!! ಎನ್ನುತ್ತಾ ನಾರದ ಮುನೀಂದ್ರನು




ತೆಲುಗು ಮೂಲ: ಜೂಲಗಂಟಿ ಬಾಲಸುಬ್ರಹ್ಮಣ್ಯಂ
ಅನುವಾದ: ಶ್ರೀಮತಿ ಬಿ.ಪದ್ಮಜ



ಆಶ್ಚರ್ಯದಿಂದ ಈ ರೀತಿ ಪ್ರಶ್ನಿಸಿದರು.

“ಏನು ! ಲೋಕ ಕಲ್ಯಾಣಕ್ಕಾಗಿ ಯಾಗವನ್ನು ಆರಂಭಿಸಿದರೇ? ಒಳ್ಳೆಯದು! ಆದರೆ ನಿಮ್ಮ ಕೋರಿಕೆಯ ಪ್ರಕಾರ ಲೋಕಕಲ್ಯಾಣವನ್ನು ಉಂಟುಮಾಡುವ ದೇವರು ಯಾರು? ಶಿವನೇ? ವಿಷ್ಣುವೇ? ಬ್ರಹ್ಮ ದೇವನೇ? ಯಾರನ್ನು ಉದ್ದೇಶಿಸಿ ಈ ಹೋಮ ಮಾಡುತ್ತಿದ್ದೀರಿ?

ಈ ಪ್ರಶ್ನೆಗಳಿಗೆ ಮುನಿಗಳೆಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿ ಕೊಂಡರು. ಅವರು ಸಂದಿಗ್ಧದಲ್ಲಿ ಸಿಲುಕಿದರು. ಅವರೆಲ್ಲರ ದೀನಾವಸ್ಥೆಯನ್ನು ನೋಡಿ, ನಾರದರೇ ಪುನಃ ಹೀಗೆ ನುಡಿದರು. ಮುನಿಗಳೇ! ದೇವತೆಗಳಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ,ವಿಷ್ಣು,ಮಹೇಶ್ವರರು ಪ್ರಮುಖರಲ್ಲವೇ? ಈ ಮೂವರಲ್ಲಿ ಲೋಕ ಕಲ್ಯಾಣವನ್ನು ಉಂಟು ಮಾಡುವವರು ಯಾರು? ಭಕ್ತರುಗಳ ಕರೆಗೆ ಓಗೊಡುವ ಆಪದ್ಬಾಂಧವನ್ಯಾರು? ಕೋರಿದ ಕೋರಿಕೆಗಳನ್ನು ಕೂಡಲೇ ವರಗಳನ್ನು ನೀಡುವ ದೇವರು ಯಾರು? ಸ್ಮರಿಸಿದ ಕೂಡಲೇ ಪಾಪಗಳನ್ನು ಕಳೆದು ಸರ್ವಶುಭಗಳನ್ನು ಉಂಟುಮಾಡುವ ಪರಂಧಾಮ ನಾರು? ಅಷ್ಟೇ ಅಲ್ಲ ಇನ್ನು ಕಲಿಯುಗ ಆರಂಭವಾಗಲಿದೆ. ಅದು ಕಲುಷಮಯವಾಗಿರುತ್ತದೆ. ಕಲಿದೋಷಗಳಿಂದ ರಕ್ಷಿಸುವಂತಹಾ ದೇವರು ಯಾರು? ಇದನ್ನು ಮೊದಲು ನಿರ್ಧರಿಸಿಕೊಳ್ಳಿ. ನಂತರ ಆ ದೇವರನ್ನು ಉದ್ಧೇಶಿಸಿ ಈ ಯಜ್ಞವನ್ನು ಆರಂಭಿಸಿ ನಿಮ್ಮ ಉದ್ದೇಶ ಈಡೇರುತ್ತದೆ. ಖಂಡಿತಾ ಜಗತ್ಕಲ್ಯಾಣವೂ ಸಿದ್ಧಿಸುತ್ತದೆ.ಎನ್ನುತ್ತಾ ನಾರಾಯಣನಾಮ ಸ್ಮರಣೆಯೊಂದಿಗೆ ಅದೃಶ್ಯನಾದ.

### ಯಾರು ಶ್ರೇಷ್ಠ?

ಇದ್ದಕ್ಕಿದ್ದಂತೆ ನಾರದನು ಬಂದು ಎಲ್ಲರಲ್ಲೂ ಸಂದೇಹವನ್ನು ಉಂಟುಮಾಡಿ ಹೋದನಂತರ ಮುನಿಗಳೆಲ್ಲಾ ಸ್ವಲ್ಪ ಎಚ್ಚೆತ್ತು ಕೊಂಡರು.ಆ ದೇವರ್ಷಿ ಹೇಳಿದ ಮಾತು ನಿಜ ವಲ್ಲವೇ ಎಂದು ಚರ್ಚಿಸಿದರು. ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠವೆಂದು ತಿಳಿಯುವುದು ಹೇಗೆ? ಅದು ಸುಲಭವಾದ ಕೆಲಸವೇ? ಅದನ್ನು ನಿರ್ಧರಿಸುವ ಶಕ್ತಿ ಯಾರಿಗಿದೆ? ಎಂದು ತಮ್ಮ ತಮ್ಮಲ್ಲೇ ಯೋಚಿಸಿಕೊಂಡು ಕೊನೆಗೆ ಆ ಜವಾಬ್ದಾರಿಯನ್ನು ಭೃಗುಮಹರ್ಷಿಗೆ ಒಪ್ಪಿಸಿ ಆ ಕೆಲಸವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದರು.

ಜಗತ್ಕಲ್ಯಾಣಕ್ಕಾಗಿ ಅಲ್ಲವೇ! ಖಂಡಿತಾ ಈ ಕೆಲಸ ಮಾಡಿಯೇ ತೀರುತ್ತೇನೆ ಎಂದು ಭೃಗುಮಹರ್ಷಿ ಆ ತ್ರಿಮೂರ್ತಿಗಳನ್ನು ಪರೀಕ್ಷಿಸುವುದಕ್ಕಾಗಿ ಹೊರಟ.

### ಪೂಜೆಯೇ ಇಲ್ಲದಂತಾಗಲಿ!

ಮೊದಲು ಭೃಗುಮಹರ್ಷಿ ಸತ್ಯಲೋಕದಲ್ಲಿ ಹೆಜ್ಜೆ ಇರಿಸಿದ.ಸೃಷ್ಟಿಕರ್ತನಾದ ಬ್ರಹ್ಮ ದೇವನ ಲೋಕವೇ ಸತ್ಯ ಲೋಕ. ಅಲ್ಲಿ ಶ್ವೇತ ಪದ್ಮದಲ್ಲಿ ನಾಲ್ಕು ಮುಖಗಳಿಂದ ವೇದಗಳನ್ನು ಓದುತ್ತಿದ್ದ ಬ್ರಹ್ಮದೇವನು ಕಂಡು ಬಂದ. ಆತನ ಪಕ್ಕದಲ್ಲೇ ಮತ್ತೊಂದು ಬಿಳಿಯ ಕಮಲದ ಮೇಲೆ ಶ್ರೀ ಸರಸ್ವತೀ ದೇವಿ ದರ್ಶನ ನೀಡಿದಳು.

ಸತ್ಯಲೋಕವನ್ನು ಪ್ರವೇಶಿಸಿದ ಭೃಗುಮಹರ್ಷಿಗೆ ಬ್ರಹ್ಮದೇವನ ವೇದನಾದ, ಸರಸ್ವತೀ ದೇವಿಯ ವೀಣಾನಾದ ಸಂತೋಷವನ್ನು ಉಂಟುಮಾಡಿತು. ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ.ಅನೇಕ ರೀತಿಯಲ್ಲಿ ಸ್ತುತಿಸಿದ. ಅವರಿಬ್ಬರೂ ಆತನತ್ತ ನೋಡಲೂ ಇಲ್ಲ.ಆತನ ಪ್ರಾರ್ಥನೆಯನ್ನು ಕೇಳಿಸಿಕೊಳ್ಳಲೂ ಇಲ್ಲ. ಅವರಿಬ್ಬರೂ ಅವರದೇ ಲೋಕದಲ್ಲಿ ಮುಳುಗಿದ್ದರು. ಕೊನೇ ಪಕ್ಷ ಗಮನಿಸಿದಂತೆಯೂ ಕಾಣಲಿಲ್ಲ.ಎಷ್ಟೇ ದೇವತೆಗಳಾದರೂ ಇವರಿಗೆ ಇಷ್ಟೊಂದು ಅಹಂಕಾರವೇ? ನನ್ನತ್ತ ಇಷ್ಟೊಂದು ನಿರಾದರಣೆಯೇ ಎನ್ನುತ್ತಾ ಕೋಪದಿಂದ“ಬ್ರಹ್ಮ ದೇವನನ್ನು ನೋಡುತ್ತಾ ನಿನಗೆ ಭೂಲೋಕದಲ್ಲಿ ಪೂಜೆಯೇ ಇಲ್ಲದಂತಾಗಲಿ।” ಎಂದು ಶಪಿಸಿ ಅಲ್ಲಿಂದ ಹೊರಟುಹೋದ.

### ಶಿಲೆಯಾಗಿರು

ಸತ್ಯಲೋಕದಲ್ಲಿ ತನಗೆ ಎದಿರಾದ ನಿರಾದರಣೆಯ ಬಗೆಗೆ ಯೋಚಿಸುತ್ತಾ ಭೃಗು ಮಹರ್ಷಿ ಕೈಲಾಸವನ್ನು ಪ್ರವೇಶಿಸಿದ. ಸಮಯವಲ್ಲದ ಸಮಯದಲ್ಲಿ ಈಗ ಒಳಗೆ ಹೋಗುವುದು ಸರಿಯಲ್ಲ. ಪಾರ್ವತೀಪರಮೇಶ್ವರರು ಏಕಾಂತದಲ್ಲಿ ಇದ್ದಾರೆ. ಈಗ ಒಳಗೆ ಪ್ರವೇಶಿಸುವುದು ಅಸಾಧ್ಯ ಎಂದು ನಂದೀಶ್ವರನು ಮಹರ್ಷಿಯನ್ನು ತಡೆದ.

ಆದರೆ ಆ ಕೋಪಿಷ್ಟ ಮುನಿ ನಂದೀಶ್ವರನನ್ನು ಪಕ್ಕಕ್ಕೆ ನೂಕಿ ಒಳಗೆ ನುಸುಳಿದ.ಅಷ್ಟೇ! ಆದಿದಂಪತಿಗಳಾದ ಪಾರ್ವತೀಪರಮೇಶ್ವರರು ಪ್ರಣಯಕ್ಕೆ ಭಂಗವುಂಟಾಯ್ತು. ಕೂಡಲೇ ಶಿವನು ಎಲ್ಲಿಲ್ಲದ ರೌದ್ರರೂಪ ತಾಳಿ ತ್ರಿಶೂಲದಿಂದ ಆತನನ್ನು ಸಂಹರಿಸಲು ಮುಂದಾದ. ಕೂಡಲೇ ಪಾರ್ವತಿ ಶಿವನನ್ನು ತಡೆದಳು.



ಬದುಕಿದೆಯಾ ಬಡಜೀವವೇ ಎಂದು ಕೊಂಡ ಮಹರ್ಷಿ ಎಲ್ಲೆ ಮೀರಿದ ಕೋಪದಿಂದ "“ತಾಮಸನಾದ ಓ ಶಿವಾ! ನೀನು ಭೂಲೋಕ ದಲ್ಲಿ ಶಿಲೆಯಾಗಿ ಬಿದ್ದಿರು” ನೀನು ಲಿಂಗಾಕಾರ ದಲ್ಲಿ ಮಾತ್ರಾ ಪೂಜೆಗಳನ್ನು ಸ್ವೀಕರಿಸುವಂತಾ ಗಲಿ ಎನ್ನುತ್ತಾ ಶಿವನನ್ನು ಶಪಿಸಿ ಸರಸರನೆ ಅಲ್ಲಿಂದ ಹೊರಟುಹೋದ.

### ಎಲ್ಲರ ಸಂತೋಷದ ದೈವ

ಮನಸ್ಸಿನಲ್ಲಿ ನೊಂದುಕೊಂಡಿದ್ದ ಭೃಗು ಮಹರ್ಷಿ ವೈಕುಂಠವನ್ನು ಪ್ರವೇಶಿಸಿದ. ಅಲ್ಲಿ ದ್ವಾರಪಾಲಕರಾದ ಜಯ ವಿಜಯರು ಮಹರ್ಷಿ ಯನ್ನು ತಡೆದರು.

ಅವರನ್ನು ಲೆಕ್ಕಿಸದ ಮಹರ್ಷಿ ಆವೇಶ ದಿಂದ ವೈಕುಂಠದ ಅಭ್ಯಂತರ ಮಂದಿರದಲ್ಲಿ ದುರುಸಿನಿಂದ ಪ್ರವೇಶಿಸಿದ.

ಅಲ್ಲಿ ಶೇಷತಲ್ಪದ ಮೇಲೆ ಶ್ರೀ ಮಹಾ ವಿಷ್ಣುವು. ಆತನ ಎದೆಯ ಮೇಲೆ ತಲೆಯಾನಿಸಿದ್ದ ಶ್ರೀ ಮಹಾಲಕ್ಷ್ಮಿ! ಸ್ವಾಮಿಯೊಂದಿಗೆ ಗುಸು ಗುಟ್ಟುತ್ತಾ ಸರಸ ಸಂಭಾಷಣೆಯಲ್ಲಿ ಮುಳುಗಿದ್ದ ಸುಂದರವಾದ ದೃಶ್ಯ! ಸ್ವಾಮಿಯು ಕಿರುನಗೆ ಯಿಂದ ಆಕೆಯ ಮುಖವನ್ನೇ ದಿಟ್ಟಿಸುತ್ತಾ ಆಕೆ ಹೇಳುತ್ತಿದ್ದ ವಿಷಯವನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದ.

ದಿವ್ಯಮಂಗಳ ದಂಪತಿಗಳಾದ ಶ್ರೀ ಲಕ್ಷ್ಮೀ ನಾರಾಯಣರು ಆ ಮುನಿಯು ಕೋಪದಿಂದ ಒಳಗೆ ಬಂದಿದ್ದನ್ನು ಗಮನಿಸಿದರೂ, ಸ್ವಲ್ಪವೂ ಗಮನಿಸದಂತೆ ಇದ್ದರು.

ಪಾಪ ಭೃಗು ಮಹರ್ಷಿ ಅವರಿಬ್ಬರನ್ನೂ ಅನೇಕಾನೇಕ ರೀತಿಯಲ್ಲಿ ಸ್ತುತಿಸಿದರು. ಹೊಗಳಿದ,ಜೋರಾಗಿ ಕೂಗಿದ,ಕಿರುಚಿದ, ಈಗಾ ಗಲೇ ಸತ್ಯಲೋಕದಲ್ಲಿ,ಕೈಲಾಸದಲ್ಲಿ ನಡೆದ ಸಂಘಟನೆಯಿಂದ ಆತನ ತಲೆಗೆ ಏರಿದ್ದ ಕೋಪ ಇಲ್ಲಿನ ಅಲಕ್ಷ್ಯದಿಂದಾಗಿ ಮತ್ತಷ್ಟು ಹೆಚ್ಚಿತು. ಇನ್ನು ತಡೆಯಲಾರದೆ ಹದ್ದು ಮೀರಿದ ಆವೇಶದಿಂದ ಶೇಷ ಶಯ್ಯೆಯ ಮೇಲೆ ಪವಡಿಸಿದ್ದ ವಿಷ್ಣುವಿನ ಎದೆಯ ಮೇಲೆ ಕಾಲಿನಿಂದ ಒದ್ದುಬಿಟ್ಟ.ಈ ಹಠಾತ್ ಪರಿಣಾಮದಿಂದ ಕೂಡಲೇ ಲಕ್ಷ್ಮಿದೇವಿ ಪಕ್ಕಕ್ಕೆ ಜರುಗಿದಳು. ಆ ಋಷಿಯ ಕಾಲು ಸ್ವಾಮಿಗೆ ತಗುಲಿತು. ಕೂಡಲೇ ವಿಷ್ಣುವು ಮೇಲೆದ್ದು ಆ ಮುನಿಯನ್ನು ಶಾಂತಗೊಳಿಸುತ್ತಾ ಆತನ ಆಗ ಮನವನ್ನು ಗಮನಿಸದಿರುವುದು ತನ್ನ ತಪ್ಪೆಂದು ಹೇಳಿದ. ಅಷ್ಟೇ ಅಲ್ಲ ಆ ಮುನಿಯನ್ನು ಶೇಷಶಯ್ಯೆಯ ಮೇಲೆ ಕುಳ್ಳಿರಿಸಿ ಆತನ ಕಾಲನ್ನು ಒತ್ತುತ್ತಾ ಮಹರ್ಷಿಯ ಪಾದದಲ್ಲಿ ಇದ್ದ ಅಹಂಕಾರ ನೇತ್ರವನ್ನು ಕಿತ್ತು ಹಾಕಿದ.ಕೂಡಲೇ ಆ ಮಹರ್ಷಿಯ ಅಹಂಕಾರವು ನಶಿಸಿ ತಾನು ಎಸಗಿದ ಪಾಪವನ್ನು ಕ್ಷಮಿಸ ಬೇಕೆಂದು ಬೇಡಿಕೊಂಡ.ಅಲ್ಲಿಂದ ಹಿಂದಿರುಗಿದ ಕೂಡಲೇ ಶ್ರೀ ಮಹಾ ವಿಷ್ಣುವೇ ಭೂಲೋಕದಲ್ಲಿ ಎಲ್ಲರ ಕೈಯಲ್ಲೂ ಪೂಜೆಗೆ ಅರ್ಹನಾದವನು. ಎಲ್ಲರಿಗೂ ಆನಂದವನ್ನು ನೀಡುವ ದೇವರು ಎಂದು ನಿರ್ಧರಿಸಿ ಅವನ್ನೆಲ್ಲಾ ಮುನಿಗಳಿಗೂ ತಿಳಿಸಿ ಅವರೆಲ್ಲಾ ಆ ಯಾಗವನ್ನು ವಿಷ್ಣುವನ್ನು ಉದ್ದೇಶಿಸಿ ಪೂರ್ತಿ ಮಾಡಿದರು.

(ಸಶೇಷ)

## ಪದಬಂಧ - 1, ಕನ್ನಡ (8X8) ಉತ್ತರಗಳು

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 9 ಉ | ತ್ತ | ಮ | ರ್ | ಕೋ | ವಿ | ಲ್ | |
| 2 | ಯ | 10 ಇಂ | 11 ವಾ | ಬಿ | ನಂ | ಹ | ಡು | 5 14 ವ |
| 3 | ರ್ | ದ್ರ | ನ | ತಿ | ಪ್ಪ | ರು | 6 13 ತಿ | ರಾ |
| 4 | ಜ | ದಿ | ಮಾ | ಣಿ | ಕ್ಕಿ | 7 ರು | ರು | ಹಾ |
| 5 | ರಾ | ದಾ | ಮ | ಪ್ಪಾ | 12 ಚಂ | ಲಂ | ವಾ | ವ |
| 6 | ತಿ | ನ್ | ಲೈ | 17 ಶ | ದ್ರ | ಬಿ | ಯ್ಮೊ | ತಾ |
| 7 | 15 ಯ | 16 2 ಅ | ಷ್ಟ | ಶ್ಲೋ | ಕೀ | ಹೋ | ಷಿ | ರ |
| 8 | | 3 ನಂ | ಬಿ | ಳ್ಳೆ | ಪ್ಪಿ | 8 18 ಅ | 4 ಸೂ | ರ್ಯ |

# ಭಕ್ತರ ಸೇವೆಯಲ್ಲಿ .....



1. ಸ್ವಾಮಿಯ ಬ್ರಹ್ಮೋತ್ಸವದಲ್ಲಿ 30.9.2019 ರಂದು 'ಶ್ರೀನಿವಾಸ ವೇದ ವಿದ್ವತ್ ಸಭೆಯನ್ನು ತಿ.ತಿ.ದೇ ಧರ್ಮಕರ್ತ ಮಂಡಲಿ ಅಧ್ಯಕ್ಷರಾದ ಗೌ॥ ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿ ಉದ್ಘಾಟಿಸಿದ್ದಾರೆ. ಇವರೊಂದಿಗೆ ಶ್ರೀ ವೇಂಕಟೇಶ್ವರ ವೇದ ವಿಶ್ವವಿದ್ಯಾಲಯದ ಮಾಜಿ ವೈಸ್-ಛಾನ್ಸ್‌ಲರ್ ಆಚಾರ್ಯ ಕೆ.ಇ. ದೇವನಾಥನ್,ತಿ.ತಿ.ದೇ.,ಮತ್ತು ಇ.ಓ. ಶ್ರೀ.ಎ.ವಿ. ಧರ್ಮರೆಡ್ಡಿಯವರು,ಎಸ್ವಿ, ಉನ್ನತವೇದಾಧ್ಯಯನ ಸಂಸ್ಥೆ ಪ್ರತ್ಯೇಕಾಧಿಕಾರಿ ಡಾ॥ಆಕೆಳ್ಳ ವಿಭೀಷಣ ಶರ್ಮರವರು ಕೂಡಾ ಪಾಲ್ಗೊಂಡಿದ್ದಾರೆ.

2. ತಿ.ತಿ.ದೇ ಮಹಾಪ್ರದರ್ಶನವನ್ನು 30.9.2019 ರಂದು ತಿ.ತಿ.ದೇ ಧರ್ಮಕರ್ತಮಂಡಲಿಯ ಅಧ್ಯಕ್ಷರಾದ ಗೌ॥ಶ್ರೀ ವೈ.ವಿ.ಸಬ್ಬಾರೆಡ್ಡಿಯವರು ಸಂದರ್ಶಿಸಿದರು. ಇವರ ಹಿಂದೆಯೇ ಧರ್ಮಕರ್ತ ಮಂಡಲಿಯ ಸದಸ್ಯರಾದ ಶ್ರೀ ಡಿ.ಪಿ.ಅನಂತ,ಉದ್ಯಾನವನ ಶಾಖಾಧಿಕಾರಿ ಡಾ॥ ಶ್ರೀನಿವಾಸ ರವರು ಸಹಾ ಪಾಲ್ಗೊಂಡರು.





3.ಸ್ವಾಮಿಯವರ ಬ್ರಹ್ಮೋತ್ಸವದ ಸಂಧರ್ಭದಲ್ಲಿ ಗ್ಯಾಲರಿಯಲ್ಲಿದ್ದ ಭಕ್ತರಿಗೆ ಅನ್ನಸಂತರ್ಪಣೆ ಮಾಡುತ್ತಾ ತಿ.ತಿ.ದೇ ಧರ್ಮಕರ್ತಮಂಡಲಿ ಅಧ್ಯಕ್ಷರಾದ ಗೌ॥ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಸೇವೆ ಸಲ್ಲಿಸಿದ್ದಾರೆ.

4. ಶ್ರೀ ವೇಂಕಟೇಶ್ವರ ಬ್ರಹ್ಮೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ದೇವಸ್ಥಾನವು ಕಲ್ಪಿಸಿರುವ ವ್ಯವಸ್ಥೆಗಳ ಕುರಿತು ತಿಳಿದುಕೊಳ್ಳುತ್ತಿರುವ ತಿ..ತಿ.ದೇ ಧರ್ಮಕರ್ತಮಂಡಲಿ ಅಧ್ಯಕ್ಷರು ಗೌ॥ವೈ.ವಿ.ಸುಬ್ಬಾರೆಡ್ಡಿಯವರು,ಪಕ್ಕದಲ್ಲಿ ತಿ.ತಿ.ದೇ ಧರ್ಮಕರ್ತಮಂಡಲಿ ಸದಸ್ಯರಾದ ಶ್ರೀ ಮೇಡಾ ಮಲ್ಲಿಕಾರ್ಜುನ ರೆಡ್ಡಿಯವರು.





5)ಸ್ವಾಮಿಯವರ ಬ್ರಹ್ಮೋತ್ಸವದಲ್ಲಿ 1.10.2019 ದಿನದಂದು ಗ್ರಂಥಾವಿಷ್ಕರಣ ಮಾಡುತ್ತಿರುವ ತಿ.ತಿ.ದೇ ಧರ್ಮಕರ್ತ ಮಂಡಲಿ ಅಧ್ಯಕ್ಷರಾದ ಗೌ॥ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು,ತಿ.ತಿ.ದೇ.,ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್‌ಸಿಂಘಾಲ್,ಐ.ಎ.ಎಸ್. ತಿ.ತಿ.ದೇ. ಗ್ರಂಥಪ್ರಚರಣ ವಿಭಾಗದ ಪ್ರತ್ಯೇಕಾಧಿಕಾರಿ ಡಾ॥ ಡಿ. ಆಂಜನೇಯಲು ಮತ್ತಿತರರು.

6) 2.10.2019 ರಂದು ತಿರುಮಲೆಯಲ್ಲಿ ನಿರ್ಮಿಸಿದ 'ಮಾತೃ ಶ್ರೀ ವಕುಳದೇವಿ'ವಿಶ್ರಾಂತಿ ಗೃಹವನ್ನು ತಿ.ತಿ.ದೇ.ಧರ್ಮಕರ್ತಮಂಡಲಿ ಅಧ್ಯಕ್ಷರು ಗೌ॥ ಶ್ರೀ ವೈ.ವಿ.ಸುಬ್ಬಾರೆಡ್ಡಿ ಆರಂಭಿಸಿದರೆ,ಅವರೊಂದಿಗೆ ತಿರುಪತಿ ಅಡಿಷಿನಲ್ ಚೀಫ್-ಇಂಜಿನಿಯರ್ ಶ್ರೀ ರಾಮಚಂದ್ರಾರೆಡ್ಡಿ ಪಿ.ಆರ್.ಓ. ಶ್ರೀ ಡಿ. ರವಿಯವರು ಕೂಡಾ ಪಾಲ್ಗೊಂಡಿದ್ದಾರೆ.





7) ಸ್ವಾಮಿಯವರ ಬ್ರಹ್ಮೋತ್ಸವದಲ್ಲಿ 7.10.2019 ನೇ ದಿನಾಂಕದಂದು ಸ್ವಾಮಿಯ ಅಶ್ವ ವಾಹನ ಸೇವೆಯಲ್ಲಿ ಪಾಲ್ಗೊಂಡ ತಿ.ತಿ.ದೇ ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್,ಐ.ಎ.ಎಸ್.,ತಿ.ತಿ.ದೇ ಧರ್ಮಕರ್ತ ಮಂಡಲಿ ಸದಸ್ಯರಾದ ಶ್ರೀ ಡಿ.ಪಿ.ಅನಂತ,ತಿ.ತಿ.ದೇ ಪ್ರಧಾನಾರ್ಚಕರು ಶ್ರೀ ವೇಣುಗೋಪಾಲ ದೀಕ್ಷಿತರು ಮತ್ತಿತರರು.

8) ತಿ.ತಿ.ದೇ. ಶ್ರೀ ವೇಂಕಟೇಶ್ವರ ಭಕ್ತಿ ಛಾನಲ್ ಸಮೀಕ್ಷಾ ಸಮಾವೇಶದಲ್ಲಿ ಮಾತಾಡುತ್ತಿರುವ ತಿ.ತಿ.ದೇ ಧರ್ಮಕರ್ತಮಂಡಲಿ ಅಧ್ಯಕ್ಷರು ಗೌ॥ ಶ್ರೀ. ವೈ.ವಿ.ಸುಬ್ಬಾರೆಡ್ಡಿಯವರು ಈ ಸಮಾವೇಶದಲ್ಲಿ ತಿರುಪತಿ ಜೆ.ಇ.ಓ.ಶ್ರೀ ಬಸಂತ್ ಕುಮಾರ್ ಐ.ಎ.ಎಸ್. ರವರು ಎಸ್ವಿಬಿಸಿ ಅಧ್ಯಕ್ಷರು, ಡೈರಕ್ಟರ್ ಶ್ರೀ ಬಾಲಿರೆಡ್ಡಿ ಪೃಥ್ವಿರಾಜ್, ಎಸ್ವಿಬಿಸಿಸ್ವಿ ಸಿ.ಇ.ಓ. ಶ್ರೀ ವೇಂಕಟ ನಾಗೇಷ್‌ರವರು ಕೂಡಾ ಉಪಸ್ಥಿತರಿದ್ದರು.





Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and
Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.


# ತಿರುಮಲೆ ತಿರುಪತಿ ದೇವಸ್ಥಾನಗಳು
# ಧರ್ಮಕರ್ತರ ಮಂಡಲಿ

ತಿರುಮಲೆ ತಿರುಪತಿ ದೇವಸ್ಥಾನಗಳ ಮೂಲ ನೂತನ ಧರ್ಮಕರ್ತರ ಮಂಡಳಿಯನ್ನು
ಆಂಧ್ರಪ್ರದೇಶ ರಾಷ್ಟ್ರಪ್ರಭುತ್ವ ಅಧ್ಯಕ್ಷರು, ಸದಸ್ಯರು,ಎಕ್ಸ್-ಅಫಿಷಿಯಾ ಸದಸ್ಯರು,
ಪ್ರತ್ಯೇಕ ಆಹ್ವಾನಿತರನ್ನು ನಿಯಮಿಸಿದರು.
ತಿರುಮಲೆ ಸ್ವಾಮಿಯ ಆಲಯದಲ್ಲಿ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ,
ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ, ಉನ್ನತಾಧಿಕಾರಿಗಳು
ಪ್ರಮಾಣಸ್ವೀಕಾರವನ್ನು ಮಾಡಿಸಿ ಸ್ವಾಮಿಯವರ ತೀರ್ಥ ಪ್ರಸಾದವನ್ನು ನೀಡಿದರು.
ವೇದಪಂಡಿತರು ಆಶೀರ್ವಚನವನ್ನು ನೀಡಿದರು.




ಶ್ರೀ ಚಿಪ್ಪಗಿರಿ ಪ್ರಸಾದ್ ಕುಮಾರ್
ಸದಸ್ಯರು


ಶ್ರೀ ಎಂ. ಎಸ್. ಶಿವಶಂಕರನ್
ಸದಸ್ಯರು


ಶ್ರೀ ಸಂಪತ್ ರವಿನಾರಾಯಣನ್
ಸದಸ್ಯರು


ಶ್ರೀಮತಿ. ಸುಧಾನಾರಾಯಣ ಮೂರ್ತಿ
ಸದಸ್ಯರು



ಶ್ರೀ ಆರ್. ಕುಮರಗುರು
ಸದಸ್ಯರು



ಶ್ರೀ ಪುಟ್ಟಾ ಪ್ರತಾಪ್ ರೆಡ್ಡಿ
ಸದಸ್ಯರು


ಶ್ರೀ ಕೆ. ಶಿವಕುಮಾರ್
ಸದಸ್ಯರು


ಶ್ರೀ ಮನ್ಮೋಹನ್ ಸಿಂಗ್, ಐ.ಎ.ಎಸ್.,
ಚೀಫ್ ಸೆಕ್ರೆಟರಿ, ಎಕ್ಸ್ - ಅಫಿಷಿಯಾ ಸದಸ್ಯರು


ಡಾ॥ ಎಂ. ಪದ್ಮ, ಐ.ಎ.ಎಸ್.,
ಎಂಡೋಮೆಂಟ್ಸ್ ಕಮೀಷನರ್, ಎಕ್ಸ್ - ಅಫಿಷಿಯಾ ಸದಸ್ಯರು



ಡಾ॥ ಚೆವಿರೆಡ್ಡಿ ಭಾಸ್ಕರ್ ರೆಡ್ಡಿ
ತುಡಾ ಅಧ್ಯಕ್ಷರು, ಎಕ್ಸ್ - ಅಫಿಷಿಯಾ ಸದಸ್ಯರು



ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ, ಎಕ್ಸ್ - ಅಫಿಷಿಯಾ ಸದಸ್ಯರು


ಶ್ರೀ ಭೂಮನ ಕರುಣಾಕರ ರೆಡ್ಡಿ
ಪ್ರತ್ಯೇಕ ಆಹ್ವಾನಿತರು


ಶ್ರೀ ರಾಕೇಷ್ ಸಿನ್ಹಾ
ಪ್ರತ್ಯೇಕ ಆಹ್ವಾನಿತರು


ಶ್ರೀ ಎ.ಜೆ. ಶೇಖರ್
ಪ್ರತ್ಯೇಕ ಆಹ್ವಾನಿತರು


ಶ್ರೀ ಕುಪೇಂದ್ರ ರೆಡ್ಡಿ
ಪ್ರತ್ಯೇಕ ಆಹ್ವಾನಿತರು


ಶ್ರೀ ಗೋವಿಂದಹರಿ
ಪ್ರತ್ಯೇಕ ಆಹ್ವಾನಿತರು


ಶ್ರೀ ದುಷ್ಯಂತ್ ಕುಮಾರ್ ದಾಸ್
ಪ್ರತ್ಯೇಕ ಆಹ್ವಾನಿತರು


ಶ್ರೀ ಅಮೋಲ್ ಕಾಳೇ
ಪ್ರತ್ಯೇಕ ಆಹ್ವಾನಿತರು

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printed on 25-10-2019. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

